ಸಂಪುಟ: 05 ಸಂಚಿಕೆ: 108 ಪುಟಗಳು: 08 ಮಂಗಳವಾರ 01 ಜುಲೈ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಬಾಂಬ್‌ಗಳು ಮತ್ತು ಪಿಸ್ತೂಲ್‌ಗಳು ಕ್ರಾಂತಿಯನ್ನು ಮಾಡುವುದಿಲ್ಲ. ಕ್ರಾಂತಿಯ ಖಡ್ಗವು ವಿಚಾರಧಾರೆಗಳ ಕಲ್ಲಿನ ಮೇಲೆ ಹರಿತವಾಗುತ್ತದೆ.


ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಜನಗಣತಿ 2026: ಕರ್ನಾಟಕದಲ್ಲಿ ಏ.1ರಿಂದ ಮನೆಗಳ ಪಟ್ಟಿ ಶುರು

• **ಉದಯವಾಹಿನಿ, ಹೊಸದಿಲ್ಲಿ**

ಮುಂಬರುವ ಜನಗಣತಿಗಾಗಿ ಮನೆಗಳ ಪಟ್ಟಿ ಮಾಡುವ ಕಾರ್ಯ 2026ರ ಏಪ್ರಿಲ್ 1ರಂದು ಆರಂಭವಾಗಲಿದೆ. ಇದರೊಂದಿಗೆ ಸೆನ್ಸಸ್‌ನ ಮೊದಲ ಹಂತಕ್ಕೆ ಚಾಲನೆ ದೊರೆಯಲಿದೆ ಎಂದು ರಿಜಿಸ್ಟ್ರಾರ್ ಜನರಲ್ ಮತ್ತು ಭಾರತದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ. ಕರ್ನಾಟಕದಲ್ಲೂ ಅದೇ ದಿನದಂದು ಮನೆಗಳ ಪಟ್ಟಿ ಶುರುವಾಗಲಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. ಮೊದಲ ಹಂತದ ಆರಂಭಕ್ಕೂ ಮುನ್ನ ಗಣತಿದಾರರು ಮತ್ತು ಮೇಲ್ವಿಚಾರಕರ ನೇಮಕಾತಿ ಹಾಗೂ ಅವರಿಗೆ ಕೆಲಸದ ಹಂಚಿಕೆಯನ್ನು ರಾಜ್ಯ ಸರಕಾರಗಳು ಮತ್ತು ಜಿಲ್ಲಾಡಳಿತದ ಸಹಕಾರದೊಂದಿಗೆ ಮಾಡಲಾಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದ್ದು, ಮೊದಲ ಹಂತದಲ್ಲಿ ಮನೆ ಪಟ್ಟಿ ಕಾರ್ಯಾಚರಣೆ ಕೈಗೊಳ್ಳಲಾಗುತ್ತದೆ. ಇಲ್ಲಿ ದೇಶದ ಪ್ರತಿಯೊಂದು ಕಟ್ಟಡಕ್ಕೆ ಭೇಟಿ ನೀಡಿ ಕಟ್ಟಡಗಳು ಮತ್ತು ಮನೆಗಳ ಗುಣಲಕ್ಷಣಗಳನ್ನು ದಾಖಲಿಸಲಾಗುತ್ತದೆ.




ಪ್ರತಿ ಮನೆಯಲ್ಲಿರುವ ಸ್ವತ್ತುಗಳ ದತ್ತಾಂಶ ಸಂಗ್ರಹಿಸಲಾಗುವುದು. ಎರಡನೇ ಹಂತದಲ್ಲಿ ಜನಸಂಖ್ಯಾ ಗಣತಿ ನಡೆಯುತ್ತದೆ. ಇಲ್ಲಿ ಪ್ರತಿಯೊಬ್ಬರ ವೈಯಕ್ತಿಕ ದತ್ತಾಂಶಗಳ ಮೇಲೆ ಗಮನ ಕೇಂದ್ರೀಕರಿಸಿ, ಮಾಹಿತಿ ಕಲೆಹಾಕಲಾಗುತ್ತದೆ. ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ಜನಗಣತಿಯೊಂದಿಗೆ ಜಾತಿ ಗಣತಿಯನ್ನೂ ನಡೆಸಲು ಕೇಂದ್ರ ಸರಕಾರ ಈಗಾಗಲೇ ಅಧಿಸೂಚನೆ ಹೊರಡಿಸಿದೆ.

**2027ರಿಂದ ಜನಗಣತಿ:** ಕೇಂದ್ರ ಗೃಹ ಸಚಿವಾಲಯದ ವತಿಯಿಂದ 2027ರಲ್ಲಿ ದೇಶದ ಜನಗಣತಿ ನಡೆಸಲು ನಿರ್ಧರಿಸಲಾಗಿದೆ. ಇದು ಭಾರತದಲ್ಲಿ ನಡೆಯಲಿರುವ 16ನೇ ಜನಗಣತಿ. ಮೊದಲು ದೇಶದ ಹಿಮಚ್ಛಾದಿತ ಪ್ರದೇಶಗಳಲ್ಲಿ 2026ರ ಅ. 1ರಿಂದಲೇ ಜನಗಣತಿ ಶುರುವಾಗಲಿದೆ. ಉಳಿದ ಭಾಗಗಳಲ್ಲಿ 2027ರ ಮಾರ್ಚ್ 1ರಿಂದ ನಡೆಯಲಿದೆ. ಅಂದಾಜು 30 ಲಕ್ಷ ಕಾರ್ಯಕರ್ತರು ಈ ಬೃಹತ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದೆಂದು ನಿರೀಕ್ಷಿಸಲಾಗಿದೆ.

**ಕರ್ನಾಟಕದಲ್ಲಿ ಸೆನ್ಸಸ್ ಯಾವಾಗಿಂದ**

ಕೇಂದ್ರ ಸರ್ಕಾರವು ಅ. 1, 2026 ರಿಂದ ದೇಶಾದ್ಯಂತ ಜನಗಣತಿ ನಡೆಸಲು ಸಜ್ಜಾಗಿದೆ. ಈ ಪ್ರಕ್ರಿಯೆಯು ಎರಡು ಪ್ರಮುಖ ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ, ಅ. 1, 2026 ರಿಂದ ಲಡಾಖ್, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಹಾಗೂ ಉತ್ತರಾಖಂಡ ರಾಜ್ಯಗಳಲ್ಲಿ ಜನಗಣತಿ ಪ್ರಾರಂಭ ಮಾಡಲಾಗುವುದು. ನಂತರ, ಮಾರ್ಚ್ 1, 2027 ರಿಂದ, ಕರ್ನಾಟಕ ಸೇರಿದಂತೆ ದೇಶದ ಉಳಿದ ಭಾಗಗಳಲ್ಲಿ ಎರಡನೇ ಹಂತದ ಜನಗಣತಿ ಕಾರ್ಯ ಶುರುವಾಗಲಿದೆ.

**ಮರು ಸಮೀಕ್ಷೆಗೆ ಕಾಂಗ್ರೆಸ್ ಹೈಕಮಾಂಡ್ ಸೂಚಿಸಿದ್ದೇಕೆ:** ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪ್ರಮುಖ ನಾಯಕರು ಮರು ಗಣತಿಯನ್ನು ಶಿಫಾರಸು ಮಾಡಿದ್ದಾರೆ. ಈ ಬೆಳವಣಿಗೆಯಿಂದ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಕಾಂಗ್ರೆಸ್ ವಿರುದ್ಧ ತೀವ್ರ ಟೀಕೆ ವ್ಯಕ್ತಪಡಿಸಿದ್ದಾರೆ. ಇದು ರಾಜ್ಯ ಕಾಂಗ್ರೆಸ್ ನಾಯಕರಿಗೆ ತೀವ್ರ ಮುಜುಗರ ತಂದೊಡ್ಡಿತು.

## ದೇವಸ್ಥಾನಗಳ ಅನುದಾನದಲ್ಲಿ 'ಸಿ ಗ್ರೇಡ್ ದೇವಸ್ಥಾನಗಳ ಅಭಿವೃದ್ಧಿ

• **ಉದಯವಾಹಿನಿ, ಸುಬ್ರಹ್ಮಣ್ಯ**

ಕುಕ್ಕೆ ಸುಬ್ರಹ್ಮಣ್ಯದಂಥ ಶ್ರೀಮಂತ ದೇವಸ್ಥಾನಗಳ ಅನುದಾನದಲ್ಲಿ ಸಿ ಗ್ರೇಡ್ ದೇವಸ್ಥಾನಗಳ ಅಭಿವೃದ್ಧಿ ನಡೆಸಲು ಆದ್ಯತೆ ನೀಡಲಾಗುವುದು ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು. ಎ, ಬಿ ಗ್ರೇಡ್ ದೇವಸ್ಥಾನಗಳ ಅಭಿವೃದ್ಧಿಗೆ ಆಯಾ ದೇವಸ್ಥಾನಗಳಲ್ಲಿ ಅನುದಾನ ಲಭ್ಯವಿರುತ್ತದೆ. ಆದರೆ, ಸಿ ಗ್ರೇಡ್ ದೇವಸ್ಥಾನಗಳಲ್ಲಿ ಅನುದಾನ ಇಲ್ಲದೆ ಇರುವುದರಿಂದ ಅವುಗಳ ಅಭಿವೃದ್ಧಿಯನ್ನು ಶ್ರೀಮಂತ ದೇವಸ್ಥಾನಗಳ ವತಿಯಿಂದ ನಡೆಸಲು ಆದ್ಯತೆ ನೀಡಲಾಗುವುದು. ಕುಕ್ಕೆ ದೇವಸ್ಥಾನದ ವತಿಯಿಂದ ಸಿ ಗ್ರೇಡ್ ದೇವಸ್ಥಾನಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

**3 ವರ್ಷದವರೆಗೆ ಪ್ರಾಧಿಕಾರ ಇಲ್ಲ:** ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಎಲ್ಲಾ ರೀತಿಯ ಅಭಿವೃದ್ಧಿ ಕೆಲಸ ಮಾಡಲಾಗುವುದು. ಕುಕ್ಕೆ ಸುಬ್ರಹ್ಮಣ್ಯಕ್ಕೆ ಪ್ರಾಧಿಕಾರ ಆಗಬೇಕೆಂಬ ಬೇಡಿಕೆ ಇದೆ. ಈಗ ಸಮಿತಿ ಇರುವುದರಿಂದ ಮುಂದಿನ ಮೂರು ವರ್ಷದವರೆಗೆ ಪ್ರಾಧಿಕಾರ ಮಾಡುವುದಿಲ್ಲ, ಆ ಬಳಿಕ ಯೋಚನೆ ಮಾಡೋಣ ಎಂದರು.

**ಜಿಲ್ಲೆಯ ಬಸ್ ಸಮಸ್ಯೆ ಪರಿಹಾರಕ್ಕೆ ಕ್ರಮ:** ಈ ಹಿಂದೆ ನಾಲ್ಕು ವರ್ಷ ಬಿಎಂಟಿಸಿಗೆ ಮಾತ್ರ ಬಸ್ ಖರೀದಿಸಲಾಗಿತ್ತು. ಈ ವರ್ಷ ಸುಮಾರು 800 ಬಸ್‌ಗಳು ಕೆಎಸ್‌ಆರ್‌ಟಿಸಿಗೆ ಬರಲಿವೆ.

## ಕಾವೇರಿ ಆರತಿಗೆ ಅಡ್ಡಿಪಡಿಸಬೇಡಿ ಸಹಕಾರ ನೀಡಿ: ಡಿಕೆಶಿ

• **ಉದಯವಾಹಿನಿ, ಮಂಡ್ಯ**

ಕಾವೇರಿ ಆರತಿಯ ನೀಲನಕ್ಷೆಯನ್ನೊಳಗೊಂಡ 2 ನಿಮಿಷದ ವಿಡಿಯೊವನ್ನು ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಸಲ್ಲಿಸುವ ವೇದಿಕೆ ಕಾರ್ಯಕ್ರಮದಲ್ಲಿ ಪ್ರಸಾರ ಮಾಡುವ ಮೂಲಕ ಎಷ್ಟೇ ವಿರೋಧವಿದ್ದರೂ, ನಾವು ಕಾವೇರಿ ಆರತಿ ಕಾರ್ಯಕ್ರಮ ಮಾಡಿಯೇ ತೀರುತ್ತೇವೆ ಎಂಬ ಸ್ಪಷ್ಟ ಸಂದೇಶವನ್ನು ರೈತ ಸಂಘದ ಹೋರಾಟಗಾರರಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವಾನಿಸಿದರು.

ಕಾವೇರಿ ತುಂಬಿದ್ದಾಳೆ, ರೈತರು ನಲಿದಿದ್ದಾರೆ. ತಾಯಿ ಕಾವೇರಿ ಒಲಿದಿದ್ದಾಳೆ ಬರ ಓಡಿಸಿದ್ದಾಳೆ. ನಮ್ಮೆಲ್ಲರ ಪ್ರಾರ್ಥನೆಗೆ, ನಿಮ್ಮೆಲ್ಲರ ಆರತಿಗೆ ಕಾವೇರಿ ತುಂಬಿ ಹರಿಯುತ್ತಿದ್ದಾಳೆ. ಕಾವೇರಿ ತುಂಬಿದರೆ ಶಾಂತಿ, ಕಾವೇರಿ ಹರಿದರೆ ಸಂತೃಪ್ತಿ ಎಂದು ಕವನ ವಾಚನ ಮಾಡುವ ಮೂಲಕ ಡಿ.ಕೆ. ಶಿವಕುಮಾರ್ ಮಾತು ಆರಂಭಿಸಿದರು. ಕಾವೇರಿ ಆರತಿಗೆ ಅಡ್ಡಿಪಡಿಸಬೇಡಿ. ವಿರೋಧ ಮಾಡಲೇಬೇಕು ಎಂಬ ಏಕೈಕ ಕಾರಣಕ್ಕೆ ವಿರೋಧಿಸಬೇಡಿ. ಸಹಕಾರ ನೀಡಿ ಎಂದು ವಿನಮ್ರತೆಯಿಂದ ಎಲ್ಲರಲ್ಲೂ ಕೇಳಿಕೊಳ್ಳುತ್ತೇನೆ. ನೀರಿಗೆ ಜಾತಿ, ಧರ್ಮವಿಲ್ಲ. ನೀರನ್ನು ಪೂಜೆ ಮಾಡುವುದು ನಮ್ಮ ಸಂಸ್ಕೃತಿ ಎಂದರು.

## ದುಬೈನ ಪ್ರಮುಖ ಆಡಳಿತಗಾರರ ಜೊತೆ ಎಚ್‌ಡಿಕೆ ಮಾತುಕತೆ

• **ಉದಯವಾಹಿನಿ, ಬೆಂಗಳೂರು**



ಉಕ್ಕು ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ಮೆಕಾನ್ ಹಾಗೂ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ ಸಾಗರೋತ್ತರ ಕಚೇರಿಗಳನ್ನು ದುಬೈನಲ್ಲಿ ಸೋಮವಾರ ಉದ್ಘಾಟಿಸಿದ ಕೇಂದ್ರ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ದುಬೈನ ಪ್ರಮುಖ ಆಡಳಿತಗಾರರೊಂದಿಗೆ ಮಾತುಕತೆ ನಡೆಸಿದರು. ಯುನೈಟೆಡ್ ಅರಬ್ ಎಮಿರೇಟ್ಸ್‌ನ ಸುಪ್ರೀಂ ಕೌನ್ಸಿಲ್ ಸದಸ್ಯ ಮತ್ತು ರಾಸ್ ಅಲ್ ಖೈಮಾಹ್ ಆಡಳಿತಗಾರ ಶೇಖ್ ಸೌದ್ ಬಿನ್ ಸಕ್ ಅಲ್ ಖಾಸಿಮಿ ಅವರೊಂದಿಗೆ ಮಾತುಕತೆ ನಡೆಸಿದರು. ಈ ಭೇಟಿಯು ಭಾರತ ಮತ್ತು ಯುಎಇ ನಡುವೆ ಆಳವಾಗಿ ಬೇರೂರಿರುವ ಮತ್ತು ವಿಕಸನಗೊಳ್ಳುತ್ತಿರುವ ಸದೃಢವಾದ ಪಾಲುದಾರಿಕೆಯನ್ನು ಒತ್ತಿ ಹೇಳುತ್ತದೆ. ಇದು ಪರಸ್ಪರ ಆರ್ಥಿಕ ಹಿತಾಸಕ್ತಿಗಳು, ಸಾಂಸ್ಕೃತಿಕ ಬಾಂಧವ್ಯಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವ ಭಾರತೀಯ ಸಮುದಾಯದ ಕೊಡುಗೆಯ ಮೇಲೆ ಅವಲಂಬಿತವಾಗಿದೆ.

ಯುಎಇಯಲ್ಲಿ ವಾಸಿಸುತ್ತಿರುವ 3.5 ಮಿಲಿಯನ್‌ಗಿಂತಲೂ ಹೆಚ್ಚು ಭಾರತೀಯರ ಕಲ್ಯಾಣದ ಮೇಲೆ ಕೇಂದ್ರೀಕರಿಸುವ ಮೂಲಕ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಉದ್ದೇಶ ಹೊಂದಿದೆ ಎಂದು ಕುಮಾರಸ್ವಾಮಿ ಹೇಳಿದರು.


# ವೈಮನಸು ಬದಿಗಿಟ್ಟು ಕೈನಾಯಕರ ಒಗ್ಗಟ್ಟು

**ಯಾರು ಏನೇ ಹೇಳಿದರೂ ಕೇಳುವುದಿಲ್ಲ**

**ಒಗ್ಗಟ್ಟು ಪ್ರದರ್ಶಿಸಿದ ಸಿಎಂ ಡಿಸಿಎಂ**

**2028ರಲ್ಲೂ ಗೆದ್ದು ನಾವೇ ಅಧಿಕಾರಕ್ಕೆ**

**ಕೈಕೈ ಹಿಡಿದು ಸರ್ಕಾರ ಬಂಡೆಯಂತೆ ಭದ್ರ ನಾವಿಬ್ಬರು ಚೆನ್ನಾಗಿ ಇದ್ದೇವೆ**



1. ನಮ್ಮ ಸರ್ಕಾರ 5 ವರ್ಷ ಬಂಡೆಯಂತೆ ಸ್ಥಿರವಾಗಿರುತ್ತದೆ
2. ಹೃದಯಾಘಾತ ಪ್ರಕರಣ ಹೆಚ್ಚಾಗುತ್ತಿರುವ ಬಗ್ಗೆ ಸಿದ್ದರಾಮಯ್ಯ ಕಳವಳ
3. ತಜ್ಞರಿಂದ ಮಾಹಿತಿ ಪಡೆದು ಸೂಕ್ತ ಕ್ರಮ

• **ಉದಯವಾಹಿನಿ, ಬೆಂಗಳೂರು**

ನಾವಿಬ್ಬರು ಚೆನ್ನಾಗಿ ಇದ್ದೇವೆ. ಯಾರು ಏನೇ ಹೇಳಿದರು ಕೇಳುವುದಿಲ್ಲ, ಬಿಜೆಪಿ ಅವರು ಸುಳ್ಳು ಹೇಳುತ್ತಿದ್ದಾರೆ. ಈ ಸರ್ಕಾರ ಐದು ವರ್ಷ ಬಂಡೆ ರೀತಿ ಭದ್ರವಾಗಿ ಇರುತ್ತದೆ ಎಂದು ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ನೀಡಿದರು. ಮೈಸೂರಿನ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾನು ಡಿ.ಕೆ. ಶಿವಕುಮಾರ್ ಚೆನ್ನಾಗಿ ಇದ್ದೇವೆ. ಬಿಜೆಪಿಯವರು ಸುಳ್ಳನ್ನು ಹೇಳುತ್ತಿದ್ದಾರೆ. ಈ ಸರ್ಕಾರ ಐದು ವರ್ಷ ಬಂಡೆ ರೀತಿ ಭದ್ರವಾಗಿ ಇರುತ್ತದೆ. ಯಾರು ಈ ವಿಚಾರದಲ್ಲಿ ಏನು ಹೇಳಿದರೂ ಕೇಳುವುದಿಲ್ಲ, ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು.

ಈ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಕೈ ಜೊತೆ ಕೈ ಸೇರಿಸಿ, ಮೇಲಕ್ಕೆತ್ತಿ ವಿರೋಧ ಪಕ್ಷಗಳಿಗೆ ಟಕ್ಕರ್ ಕೊಟ್ಟರು. ಮುಂದುವರೆದ ಅವರು, ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ಕೊಡಬೇಕು. ಏಕೆಂದರೆ ಮಳೆಗಾಲದಲ್ಲಿ ಹೆಚ್ಚಾಗಿ ಹರಿಯುವ ನೀರು ಪೋಲಾಗುತ್ತಿದ್ದು, ಅದರ ಬಳಕೆ ಆಗಬೇಕಾಗಿದೆ ಆದ್ದರಿಂದ ಮೇಕೆದಾಟು ಯೋಜನೆ ಅನುಮತಿ ನೀಡಿದರೆ ಅನುಕೂಲ ಆಗುತ್ತದೆ. ಹಾಗಾಗಿ ಮೇಕೆದಾಟು ಯೋಜನೆಗೆ ಅನುಮತಿ ಕೇಂದ್ರ ಸರ್ಕಾರ ನೀಡಬೇಕು ಎಂದರು.

ಮಹಾರಾಷ್ಟ್ರದಂತೆ ಕರ್ನಾಟಕದಲ್ಲೂ ತ್ರಿಭಾಷಾ ಸೂತ್ರ ಒಪ್ಪಿಕೊಳ್ಳುತ್ತೀರಾ ಎಂಬ ಮಾಧ್ಯಮದವರ ಪ್ರಶ್ನೆಗೆ ಮುಖ್ಯಮಂತ್ರಿಗಳು, ನಾವು ದ್ವಿ-ಭಾಷಾ ಸೂತ್ರವನ್ನು ಒಪ್ಪಿಕೊಳ್ಳಲು ಬದ್ಧವಾಗಿದ್ದೇವೆ ಎಂದರು. ಹಾಸನ ಜಿಲ್ಲೆಯಲ್ಲಿ ಕಿರಿಯ ವಯಸ್ಸಿನ ಯುವಕರಿಗೆ ಹೃದಯಘಾತದಿಂದ ಆಗುತ್ತಿರುವ ಸಾವಿನ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು, ಈ ರೀತಿ ಚಿಕ್ಕ ವಯಸ್ಸಿನಲ್ಲೇ ಹೃದಯಘಾತಗಳು ಏಕೆ ಆಗುತ್ತಿದೆ ಎಂಬುದನ್ನು ತಿಳಿಯಲು ಹಾಗೂ ಇದಕ್ಕೆ ಪರಿಹಾರ ನೀಡುವ ಕೆಲಸ ಮಾಡುತ್ತೇವೆ ಎಂದ ಸಿಎಂ, ಸುರ್ಜೆವಾಲಾ ಕರ್ನಾಟಕದ ಉಸ್ತುವಾರಿ ಕಾರ್ಯದರ್ಶಿ ಅವರು ಶಾಸಕರ ಸಮಸ್ಯೆ ಹಾಗೂ ಪಕ್ಷ ಸಂಘಟನೆಗಾಗಿ ಬರುತ್ತಿದ್ದಾರೆ. ಅದರಲ್ಲಿ ವಿಶೇಷ ಇಲ್ಲ ಎಂದರು.

ಕೆ.ಆರ್.ಎಸ್‌ಗೆ ಬಾಗಿನ ಅರ್ಪಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ಟ್ರಿಬಿನಲ್ ಆದೇಶದಂತೆ ತಮಿಳುನಾಡಿಗೆ ಪ್ರತಿವರ್ಷ 177.25 ಟಿಎಂಸಿ ಕಾವೇರಿ ನೀರು ಬಿಡಲು ತಿಳಿಸಲಾಗಿದೆ ಇದಕ್ಕೆ ನಮ್ಮ ತಕರಾರು ಇಲ್ಲ. ಅದೇ ರೀತಿ ನೀರನ್ನು ಬಿಡುತ್ತ ಬಂದಿದ್ದೇವೆ. ಪ್ರತಿ ತಿಂಗಳು ತಮಿಳುನಾಡಿಗೆ 9 ಟಿ.ಎಂ.ಸಿ ನೀರನ್ನು ಬಿಡಬೇಕು. ಅದೇ ರೀತಿ ಬಿಡುತ್ತಿದ್ದೇವೆ. ಜೂನ್ ತಿಂಗಳಲ್ಲಿ ಈಗಾಗಲೇ 22 ಟಿ.ಎಂ.ಸಿ. ನೀರನ್ನು ಬಿಡಲಾಗಿದ್ದು, ಟ್ರಿಬ್ಯುನಲ್ ಆದೇಶವನ್ನು ಪಾಲನೆ ಮಾಡುತ್ತೇವೆ. ಹೆಚ್ಚುವರಿ ನೀರು ಉಪಯೋಗವಾಗಲು ಮೇಕೆದಾಟು ಯೋಜನೆ ಅನುಮತಿ ಅಗತ್ಯ ಎಂದು ಹೇಳಿದರು.

**ಕನಕಪುರದಲ್ಲಿ ಕಚೇರಿ ಆರಂಭ:** ಮೇಕೆದಾಟು ಯೋಜನೆ ಜಾರಿ ಮಾಡುತ್ತೇವೆ. ಈಗಾಗಲೇ ಕನಕಪುರದಲ್ಲಿ ಈ ಸಂಬಂಧ ಕೆಲಸ ಕಾರ್ಯ ನಡೆಯಲು ಕಚೇರಿ ಆರಂಭ ಮಾಡಲಾಗಿದೆ. ಕೇಂದ್ರದ ಅನುಮತಿ ಪಡೆಯುತ್ತೇವೆ ಎಂದ ಡಿಸಿಎಂ ಶಿವಕುಮಾರ್, ಕಾವೇರಿ ಆರತಿ ಮಾಡುತ್ತೇವೆ. ಪೂಜೆ ಪ್ರಾರ್ಥನೆ ಸಣ್ಣ ಮಟ್ಟದಲ್ಲಿ ಅಥವಾ ದೊಡ್ಡ ಮಟ್ಟದಲ್ಲಿಯಾದರೂ ಮಾಡಬೇಕು. ಈಗ ಕಾವೇರಿ ಆರತಿ ಮಾಡಲು ಹಾಗೂ ರೂಪುರೇಷಗಳ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಇದರಿಂದ 1500 ಮಂದಿಗೆ, ಕಲಾವಿದರಿಗೆ ಕೆಲಸ ಸಿಗಲಿದೆ. ಪ್ರಕರಣ ಕೋರ್ಟ್ ನಲ್ಲಿದ್ದು ಆ ನಂತರ ಕಾವೇರಿ ಆರತಿ ಬಗ್ಗೆ ಮಾತನಾಡುತ್ತೇನೆ ಎಂದರು.

**ಸುರ್ಜೇವಾಲಾ ನಮ್ಮನ್ನು ಕರೆದಿಲ್ಲ**

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ನಮ್ಮನ್ನು ಕರೆದಿಲ್ಲ. ನಾವು ಭೇಟಿ ಆಗುವುದಿಲ್ಲ. ಒಂದು ವೇಳೆ ಅವಶ್ಯಕತೆ ಬಿದ್ದರೆ ನೋಡೋಣ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು. ಶಾಸಕರ ಜೊತೆಗೆ ಸುರ್ಜೇವಾಲಾ ಸಭೆ ವಿಚಾರಕ್ಕೆ ಬೆಳಗಾವಿಯಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಅವರು, ಸಭೆ ಕರೆದಿರುವ ಉದ್ದೇಶ ಏನಿದೆ ಅಂತಾ ಅವರನ್ನೇ ಕೇಳಬೇಕು. ಶಾಸಕರ ಸಮಸ್ಯೆ ಏನಿದೆ ಎನ್ನುವುದನ್ನು ಕೇಳಬೇಕಿದೆ. ಪದೇ ಪದೇ ಯಾಕೆ ಸರ್ಕಾರದ ವಿರುದ್ಧ ಮಾತಾಡುತ್ತಿದ್ದಿರಿ ಅಂತಾ ಕೇಳುತ್ತಾರೆ. ಸಮಸ್ಯೆ ಏನಿದ್ದರೂ ಅವರ ಮುಂದೆ ಹೇಳಿಕೊಳ್ಳಲು ಸಭೆ ಮಾಡುತ್ತಿದ್ದಾರೆ. ಶಾಸಕರ ಸಮಸ್ಯೆಗಳನ್ನು ಆಲಿಸಿ ಅದನ್ನು ಸರಿಪಡಿಸುತ್ತಾರೆ ಎಂದರು. ಶಾಸಕ ರಾಜು ಕಾಗೆ ಗೈರು ವಿಚಾರಕ್ಕೆ, ಯಾರು ಬೇಕಾದರೂ ಅವರನ್ನು ಭೇಟಿ ಆಗಬಹುದು. ರಾಜು ಕಾಗೆ ತಮ್ಮ ಕ್ಷೇತ್ರದ ನೀರಾವರಿ ಯೋಜನೆಗಳಿಗೆ ಅನುದಾನ ಕಲ್ಪಿಸುವ ಬಗ್ಗೆ ಕೇಳುತ್ತಿದ್ದಾರೆ ಎಂದು ಸತೀಶ್ ಜಾರಕಿಹೊಳಿ ಹೇಳಿದರು.

**ಸಿಎಂ ಬದಲಾವಣೆ ಹೈಕಮಾಂಡ್ ಕೈಯ್ಯಲ್ಲಿದೆ**

ಸಿಎಂ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಹೈಕಮಾಂಡ್ ಮಟ್ಟದಲ್ಲಿ ಏನು ನಡೆಯುತ್ತಿದೆ ಎಂದು ಯಾರೂ ಹೇಳಲು ಆಗುವುದಿಲ್ಲ. ಈ ಕುರಿತಾಗಿ ಯಾರೂ ಅನಗತ್ಯ ಗೊಂದಲ ಉಂಟುಮಾಡಬಾರದು ಎಂದು ತಿಳಿಸಿದರು. ಶಾಸಕರ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸುತ್ತಾ, ಅದರ ಬಗ್ಗೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ. ಸುರ್ಜೇವಾಲ ರಾಜ್ಯಕ್ಕೆ ಬಂದಿದ್ದಾರೆ. ಅವರು ಏನೇನು ನಡೆದಿದೆ ಅಂತ ಕೇಳ್ತಾರೆ ಎಂದರು.

ಆರ್‌ಎಸ್‌ಎಸ್‌ನ ದತ್ತಾತ್ರೇಯ ಹೊಸಬಾಳೆ ಹೇಳಿಕೆಗೆ, ಅವರು ಮ್ಯಾನ್ ಆಫ್ ಮನುಸ್ಮೃತಿ. ಸಮಾಜವಾದ ಮತ್ತು ಜಾತ್ಯತೀತತೆ ಇಷ್ಟಪಡುವುದಿಲ್ಲ. ಆರ್‌ಎಸ್‌ಎಸ್ ಯಾವತ್ತೂ ಬಡವರ ವಿರುದ್ಧ. ಅವರಿಗೆ ಅಷ್ಟು ಆಸಕ್ತಿ ಇದ್ದರೆ ಅಸಮಾನತೆಯನ್ನು ತೊಡೆದು ಹಾಕಬೇಕಿತ್ತು. ಸಂವಿಧಾನದಲ್ಲಿ ಏನಾದರೂ ಬದಲಾವಣೆ ಮಾಡಿದರೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

**ನಾಯಕತ್ವ ಬದಲಾವಣೆ ಊಹಾಪೋಹ**

ಮಾಧ್ಯಮದಲ್ಲಿ ಬರುತ್ತಿರುವ ನಾಯಕತ್ವ ಬದಲಾವಣೆ ಕೇವಲ ಊಹಾಪೋಹ. ಅದೆಲ್ಲ ನಿಮ್ಮ ಕಲ್ಪನೆ ಮಾತ್ರ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಮಾತನಾಡಿದ ಅವರು, ಎಂಪಿ ಅಭ್ಯರ್ಥಿಗಳು, ಪರಾಜಿತ ಅಭ್ಯರ್ಥಿಗಳ ಸಭೆ ಕೂಡಾ ಕರೆಯುತ್ತೇವೆ. ಇದು ನಿರಂತರ ಪ್ರಕ್ರಿಯೆ. ಬಳಿಕ ಸಿಎಂ, ಡಿಸಿಎಂ ಜೊತೆಗೂ ಅಭಿವೃದ್ಧಿ ವಿಚಾರವಾಗಿ ಮಾತನಾಡುತ್ತೇವೆ. ಮಾಧ್ಯಮದಲ್ಲಿ ಬರುತ್ತಿರುವ ನಾಯಕತ್ವ ಬದಲಾವಣೆ ಕೇವಲ ಊಹಾಪೋಹ. ಅದೆಲ್ಲವೂ ನಿಮ್ಮ ಕಲ್ಪನೆ ಮಾತ್ರ ಎಂದು ತಿಳಿಸಿದರು. ಕಾಂಗ್ರೆಸ್ ಗ್ಯಾರಂಟಿ ಯೋಜನೆ ಬಗ್ಗೆ ಶಾಸಕರಿಂದ ಮಾಹಿತಿ ಪಡೆಯುತ್ತಿದ್ದೇವೆ. ಕಾಂಗ್ರೆಸ್ ಸಂಘಟನೆ ಅವರವರ ಕ್ಷೇತ್ರದಲ್ಲಿ ಹೇಗಿದೆ ಎಂಬ ವರದಿ ಪಡೆಯುತ್ತಿದ್ದೇವೆ.

**ಡಿಕೆಶಿಗೆ ಮುಂದಿನ ಸಿಎಂ**

ಶಾಸಕ ಹೆಚ್.ಎ.ಇಕ್ಬಾಲ್ ಹುಸೇನ್ ಮಾತನಾಡಿ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮುಂದಿನ ಎರಡ್ಮೂರು ತಿಂಗಳಲ್ಲಿ ಮುಖ್ಯಮಂತ್ರಿಯಾಗುವ ಅವಕಾಶ ಸಿಗಬಹುದು. ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ನಮ್ಮ (ಕಾಂಗ್ರೆಸ್‌ನ) ಶಕ್ತಿ ಏನಿತ್ತು ಎಂದು ನಿಮಗೆಲ್ಲರಿಗೂ ತಿಳಿದಿದೆ. ವಿಜಯವನ್ನು ಸಾಧಿಸಲು ಯಾರು ಹೋರಾಟ, ಬೆವರು ಸುರಿಸಿದರು ಮತ್ತು ಶ್ರಮ ಹಾಕಿದರು ಅನ್ನೋದು ಎಲ್ಲರಿಗೂ ತಿಳಿದಿದೆ ಎಂದರು.

## ಹಸಿರು ಸಂವರ್ಧನೆಗಾಗಿ ಕಾಡುಗೋಡಿ ಅರಣ್ಯ ಭೂಮಿ ಸಂರಕ್ಷಣೆಗೆ ಸಜ್ಜು

• **ಉದಯವಾಹಿನಿ, ಬೆಂಗಳೂರು**

ಹಸಿರು ಉಳಿಸಲು ಕಾಡುಗೋಡಿ ಅರಣ್ಯ ಭೂಮಿ ಸಂರಕ್ಷಣೆ ಮಾಡಲಾಗುವುದು ಎಂದು ಸಚಿವ ಈಶ್ವರ ಖಂಡ್ರೆ, ಹೇಳಿದ್ದಾರೆ. ಕಾಡುಗೋಡಿ ಪ್ಲಾಂಟೇಷನ್‌ನ 120 ಎಕರೆ ಅರಣ್ಯ ಭೂಮಿಯನ್ನು ಮರುವಶಪಡಿಸಿಕೊಳ್ಳಲಾಗಿದೆ.

ಬೆಂಗಳೂರು ನಗರವು ಕಾಂಕ್ರೀಟ್ ಕಾಡಾಗುತ್ತಿದೆ. ಹೀಗಾಗಿ ಹಸಿರು ಹೊದಿಕೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಾಡುಗೋಡಿ ಅರಣ್ಯ ಭೂಮಿ ಸಂರಕ್ಷಿಸಲು ಸರ್ಕಾರ ಮುಂದಾಗಿದೆ. ಬಿಜೆಪಿ ನಾಯಕರು ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು. ಈ ಬಗ್ಗೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಅರಣ್ಯ ಭೂಮಿಯನ್ನು ಹಂಚಿಕೆ ಮಾಡಲು ಬರುವುದಿಲ್ಲ. ಅರಣ್ಯೇತರ ಉದ್ದೇಶಕ್ಕೆ ಬಳಸಲು ಕೇಂದ್ರ ಸರ್ಕಾರವು ಮತ್ತು ಸುಪ್ರೀಂಕೋರ್ಟ್ ಅನುಮತಿ ಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ, ಅವರು ಹೇಳಿದರು.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕಾಡುಗೋಡಿ ಪ್ಲಾಂಟೇಷನ್ ಸರ್ವೆ ನಂ.1ರಲ್ಲಿ 711 ಎಕರೆಯಷ್ಟು ಜಾಗವನ್ನು 1896ರಲ್ಲಿ ನೆಡುತೋಪಿಗಾಗಿ ನೀಡಲಾಗಿತ್ತು.

1901ರಲ್ಲಿ ಅರಣ್ಯ ನಿಯಮಗಳ ಪ್ರಕಾರ ರಾಜ್ಯ ಅರಣ್ಯ ಎಂದು ಅಧಿಸೂಚನೆ ಹೊರಡಿಸಲಾಯಿತು. ಹೀಗಾಗಿ ಇದು ಮೀಸಲು ಅರಣ್ಯ ಆಗಿರುತ್ತದೆ ಎಂದು ಸಚಿವರು ತಿಳಿಸಿದರು.

ಕೇಂದ್ರ ಸರ್ಕಾರವು ಒಂದು ಕಾಯಿದೆ ಜಾರಿ ಮಾಡಿದೆ. ಅದರ ಪ್ರಕಾರ, ಯಾವುದೇ ಅರಣ್ಯ ಭೂಮಿಯನ್ನು ಬೇರೆ ಉದ್ದೇಶಕ್ಕೆ ಬಳಸುವ ಮೊದಲು ಅನುಮತಿ ಪಡೆಯಬೇಕು. ಸುಪ್ರೀಂಕೋರ್ಟ್ ಕೂಡ ಈ ಬಗ್ಗೆ ತೀರ್ಪು ನೀಡಿದೆ ಎಂದು ಅವರು ಹೇಳಿದರು. ಯಾವುದೇ ಅರಣ್ಯ ಭೂಮಿಯನ್ನು ಅನ್ಯ ಉದ್ದೇಶಕ್ಕೆ ಪೂರ್ವಾನುಮತಿ ಇಲ್ಲದೆ ಮಂಜೂರು ಮಾಡಬಾರದು ಎಂದು ಕೇಂದ್ರ ಸರ್ಕಾರವೇ ಜಾರಿ ಮಾಡಿರುವ ಕಾಯಿದೆ ಹೇಳುತ್ತದೆ. ಸರ್ವೋಚ್ಚ ನ್ಯಾಯಾಲಯ ಕೂಡ ಕಾಲಕಾಲಕ್ಕೆ ಈ ಸಂಬಂಧ ಸ್ಪಷ್ಟ ತೀರ್ಪು, ಆದೇಶ ನೀಡಿರುತ್ತದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.



**ಅರಣ್ಯ ಸಂರಕ್ಷಣೆಗೆ ಸರ್ಕಾರ ಮುಂದು**

**ಹುಲಿ ಸಾವು ತಪ್ಪಿತಸ್ಥರ ವಿರುದ್ಧ ಕ್ರಮ**

ಇತ್ತೀಚೆಗೆ ಹೂಗ್ಯಂ ವಲಯದಲ್ಲಿ 5 ಹುಲಿಗಳು ಸತ್ತಿವೆ. ಈ ಬಗ್ಗೆ ಆರೋಪಿಗಳನ್ನು ಬಂಧಿಸಲಾಗಿದೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಪ್ರಕರಣದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಕಂಡುಬಂದರೆ, ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು. ಹುಲಿ ಸಾವು ಅಧಿಕಾರಿಗಳ ನಿರ್ಲಕ್ಷ್ಯ ಸಾಬೀತಾದರೆ ಶಿಸ್ತು ಕ್ರಮ ಎಂದು ಹೇಳಿದರು.

ಚಾಮರಾಜನಗರ ಜಿಲ್ಲೆಯಲ್ಲಿ ಐದು ಹುಲಿಗಳು ನಿಗೂಢವಾಗಿ ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಹನೂರು ಶಾಸಕ ಮಂಜುನಾಥ್ ಅವರು ತನಿಖೆಗೆ ಆದೇಶಿಸಿದ್ದಾರೆ. ಹುಲಿಗಳು ವಿಷ ಸೇವಿಸಿ ಸತ್ತಿವೆ ಎಂದು ಶಂಕಿಸಲಾಗಿದೆ. ಈ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹುಲಿಗಳು ಸತ್ತು ಮೂರು ದಿನಗಳಾದರೂ ಅಧಿಕಾರಿಗಳಿಗೆ ತಿಳಿಯದಿರುವುದು ಅನುಮಾನಕ್ಕೆ ಕಾರಣವಾಗಿದೆ. ಸ್ಥಳೀಯ ಆರ್‌ಎಫ್‌ಓ ಈ ಹೊಣೆ ಹೊರಬೇಕು ಎಂದು ಶಾಸಕರು ಹೇಳಿದ್ದಾರೆ. ಹಸುವಿನ ಮಾಲೀಕರ ಬಗ್ಗೆಯೂ ತನಿಖೆ ನಡೆಯುತ್ತಿದೆ. ಕಾಡು ಪ್ರಾಣಿಗಳು ಮತ್ತು ಮಾನವರ ನಡುವಿನ ಸಂಘರ್ಷ, ಸ್ಥಳೀಯ ಸಮಸ್ಯೆಗಳ ಬಗ್ಗೆಯೂ ಚರ್ಚೆ ನಡೆಸಲಾಗುವುದು. ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳುವುದಾಗಿ ಶಾಸಕರು ತಿಳಿಸಿದ್ದಾರೆ. ಕಾಡು ಪ್ರಾಣಿಗಳು ಮತ್ತು ಮಾನವರ ನಡುವಿನ ಸಂಘರ್ಷದ ಬಗ್ಗೆಯೂ ಶಾಸಕರು ಮಾತನಾಡಿದರು. ಈ ಪ್ರದೇಶದಲ್ಲಿ ಇಂತಹ ಸಮಸ್ಯೆಗಳು ಮೊದಲಿನಿಂದಲೂ ಇವೆ. ಸ್ಥಳೀಯವಾಗಿ ಕಾಡು ಪ್ರಾಣಿಗಳು ಹಾಗೂ ಮಾನವ ಸಂಘರ್ಷ ಮೊದಲಿನಿಂದಲೂ ಇದೆ ಎಂದು ಅವರು ಹೇಳಿದರು.

# ರಾಜ್ಯದ ಜಲಾಶಯಗಳು ತುಂಬಿವೆ; ಎಲ್ಲಾ ನಾಲೆಗಳಿಗೂ ತಕ್ಷಣದಿಂದ ನೀರು ಹರಿಸಿ

■ ಕೆಆರ್‌ಎಸ್ ಡ್ಯಾಂಗೆ ಬಾಗಿನ ಅರ್ಪಿಸಿ ವೇದಿಕೆ ಮೇಲೆಯೇ ಸಿಎಂ ಸೂಚನೆ ■ ಕಾವೇರಿ ತಾಯಿ, ಚಾಮುಂಡೇಶ್ವರಿ ಕೃಪಾಕಟಾಕ್ಷದಿಂದ ರಾಜ್ಯ ಸುಭಿಕ್ಷ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಎಲ್ಲಾ ಜಲಾಶಯಗಳು ತುಂಬಿವೆ. ಎಲ್ಲಾ ನಾಲೆಗಳಿಗೂ ತಕ್ಷಣದಿಂದ ನೀರು ಹರಿಸಿ ಎಂದು ಸಿಎಂ ಸಿದ್ದರಾಮಯ್ಯ ಅವರು ಮಹತ್ವದ ಆದೇಶ ನೀಡಿದ್ದಾರೆ. ಕೆಆರ್‌ಎಸ್ ಡ್ಯಾಂಗೆ ಬಾಗಿಣ ಅರ್ಪಿಸಿ ವೇದಿಕೆ ಮೇಲೆಯೇ ಸಿಎಂ ಸೂಚನೆ ನೀಡಿದ್ದಾರೆ.

ಕೃಷ್ಣರಾಜಸಾಗರ ಜಲಾಶಯಕ್ಕೆ ಬಾಗಿನ ಅರ್ಪಿಸಿದ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾವೇರಿ ತಾಯಿ, ಚಾಮುಂಡೇಶ್ವರಿ ಕೃಪಾಕಟಾಕ್ಷದಿಂದ ರಾಜ್ಯ ಸುಭಿಕ್ಷವಾಗಿದೆ. ಎಲ್ಲಾ ಜಲಾಶಯಗಳೂ ತುಂಬಿವೆ. ಎಲ್ಲಾ ನಾಲೆಗಳಿಗೂ ತಕ್ಷಣದಿಂದ ನೀರು ಹರಿಸಿ ಎಂದರು.

**ನನ್ನ ಕಾಲುಗುಣ ಚನ್ನಾಗಿಲ್ಲ ಎಂದಿದ್ದರು:** ಕೃಷ್ಣರಾಜಸಾಗರದ ಒಟ್ಟು 124 ಅಡಿ ಸಾಮರ್ಥ್ಯದಲ್ಲಿ 120.90 ಅಡಿ ಭರ್ತಿ ಆಗಿದೆ. ಅಣೆಕಟ್ಟೆಗೆ 49 ಟಿಎಂಸಿ ನೀರಿನ ಸಾಮರ್ಥ್ಯವಿದೆ. 193 ವರ್ಷಗಳಲ್ಲಿ



76 ಬಾರಿ ಭರ್ತಿಯಾಗಿದೆ. 2023-24 ರಲ್ಲಿ ಬರಗಾಲವಿತ್ತು. ಈ ಕಾರಣಕ್ಕೇ ಸಿದ್ದರಾಮಯ್ಯ ಅವರ ಕಾಲುಗುಣ ಚನ್ನಾಗಿಲ್ಲ, ಕಾಂಗ್ರೆಸ್ ಸರ್ಕಾರದ ಕಾಲುಗುಣ ಸರಿಯಿಲ್ಲ ಎಂದು ವಿರೋಧ ಪಕ್ಷಗಳು ಟೀಕಿಸಿದ್ದವು.

ಈಗ ಕಳೆದು ಎರಡು ವರ್ಷಗಳಿಂದ ರಾಜ್ಯದಲ್ಲಿ ಮಳೆ, ಬೆಳೆ ಉತ್ತಮವಾಗಿ ಆಗುತ್ತಿದೆ. ವಿರೋಧ ಪಕ್ಷಗಳು ಮೂಡಾತ್ಮರು ಈಗ ಏನು ಹೇಳ್ತಾರೆ ಎಂದು ಸಿಎಂ ಅಣಕಿಸಿದರು. ತಾಯಿ ಕಾವೇರಿಗೆ ಪೂಜೆ ಮಾಡಿ ನಾಡಿನ ಮಳೆ, ಬೆಳೆ ಹೀಗೇ ಚನ್ನಾಗಿ ಆಗಲಿ ಎಂದು ಪ್ರಾರ್ಥಿಸಿದ್ದೇನೆ.

**ಕಾವೇರಿ ಅಭಿವೃದ್ಧಿ ನಿಗಮಕ್ಕೆ 3000 ಕೋಟಿ ಹಣ**

ಅಭಿವೃದ್ಧಿಗೆ ಹಣ ಇಲ್ಲ, ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗುತ್ತದೆ ಎಂದು ಬುರುಡೆ ಬಿಡುತ್ತಿರುವ ಬಿಜೆಪಿಯವರು ನಾಡಿನ ಜನರಿಗೆ ಉತ್ತರಿಸಬೇಕು. ದಿವಾಳಿ ಆಗಿದ್ದರೆ 25 ಸಾವಿರ ಕೋಟಿ ರೂಪಾಯಿ ಎಲ್ಲಿಂದ ಬಂತು ಎಂದು ಪ್ರಶ್ನಿಸಿದರು. ಕೃಷಿ ಪ್ರಗತಿಗಾಗಿ ವರ್ಷಕ್ಕೆ 19000 ಸಾವಿರ ಕೋಟಿ ಪಂಪ್ ಸೆಟ್ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿದ್ದೇವೆ. 92 ವರ್ಷಗಳ ಬಳಿಕ ಜೂನ್ ತಿಂಗಳಲ್ಲೇ ಭರ್ತಿ ಆಗಿರುವ ಕೆಆರ್‌ಎಸ್‌ನಲ್ಲಿ ಸ್ಮಾರಕ ನಿರ್ಮಿಸಿ ಎಂದು ಕಾವೇರಿ ನಿಗಮದ ಎಂಡಿ ಅವರಿಗೆ ಸಿಎಂ ಸೂಚನೆ ನೀಡಿದರು. ನಾವು ಈ ಬಾರಿ ಕಾವೇರಿ ಅಭಿವೃದ್ಧಿ ನಿಗಮಕ್ಕೆ 3000 ಕೋಟಿ ಹಣ ಕೊಟ್ಟಿದ್ದೇವೆ. ಈಗ ಟೀಕಿಸುತ್ತಿರುವವರು ಅಧಿಕಾರದಲ್ಲಿದ್ದಾಗ ಕಾವೇರಿ ನಿಗಮಕ್ಕೆ ಹಣ ಕೊಡಲಿಲ್ಲ ಎಂದು ಟೀಕಿಸಿದರು. ಸುಳ್ಳು ಹೇಳುವ ಚಾಳಿಯಲ್ಲಿರುವ ಬಿಜೆಪಿ ಗೆ ರಾಜ್ಯದ ಜನ ಪೂರ್ಣ ಅಧಿಕಾರವನ್ನೇ ಕೊಟ್ಟಿಲ್ಲ. ಆಪರೇಷನ್ ಕಮಲ ಮಾಡಿ ಎರಡು ಬಾರಿ ಅಧಿಕಾರಕ್ಕೆ ಬಂದರು. ಜೆಡಿಎಸ್ ಇನ್ನೊಬ್ಬರ ಹೆಗಲ ಮೇಲೆ ಕೈ ಹಾಕಿಕೊಂಡೇ ಅಧಿಕಾರಕ್ಕೆ ಬರಬೇಕು. ಸ್ವಂತ ಶಕ್ತಿಯಿಂದ ಸಾಧ್ಯವೇ ಇಲ್ಲ ಎಂದರು.

ನಮ್ಮ ಸರ್ಕಾರ ಬಿದ್ದೋಗತ್ತೆ ಅಂತ ಸೋತ ಗಿರಾಕಿಗಳು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಐದು ವರ್ಷ ಬಂಡೆ ರೀತಿ ಇರತ್ತೆ.

2028 ರಲ್ಲೂ ನಾವೇ ಗೆದ್ದು ಅಧಿಕಾರಕ್ಕೆ ಬರ್ತೀವಿ ಎಂದು ಘೋಷಿಸಿದ ಮುಖ್ಯಮಂತ್ರಿಗಳು ನೀರಾವರಿಗೆ ನಮ್ಮ ಈ ಸರ್ಕಾರ 25 ಸಾವಿರ ಕೊಟ್ಟಿದೆ. ಬೇರೆ ಯಾವ ಸರ್ಕಾರವಾದರೂ ಈ ಮಟ್ಟದ ಅನುದಾನ ಕೊಟ್ಟಿತ್ತಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು. ಸೋತ ಗಿರಾಕಿಗಳು ಸರ್ಕಾರ ಬಿದ್ದೋಗತ್ತೆ ಎಂದು ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ನನಗೂ , ಡಿಸಿಎಂ ಶಿವಕುಮಾರ್ ಅವರಿಗೂ ಸರಿ ಇಲ್ಲ ಎಂದು ಬುರುಡೆ ಬಿಡುತ್ತಿದ್ದಾರೆ. ನಾನು ಮತ್ತು ಶಿವಕುಮಾರ್ ಇಬ್ಬರೂ ಒಟ್ಟಾಗಿ, ಗಟ್ಟಿಯಾಗಿದ್ದೀವಿ. ನಮ್ಮ ಸರ್ಕಾರವೂ ಐದು ವರ್ಷ ಗ್ಯಾರಂಟಿಯಾಗಿ ಗಟ್ಟಿಯಾಗಿ ಇರುತ್ತದೆ. 2028 ರಲ್ಲೂ ಗೆದ್ದು ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂದು ಘೋಷಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,726/Gram24ct ₹8,915/Gram22ct | ಬೆಳ್ಳಿ: ₹107.70/Gram

# ಗಾಂಜಾ ಖದೀಮರ ಬೆನ್ನತ್ತಿ ಹೋಗಿದ್ದ ವೇಳೆ ಅಪಘಾತ

• ಉದಯವಾಹಿನಿ, ಬೆಂಗಳೂರು

ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಸ್ಥಳ ಮಹಜರುಗಾಗಿ ಕರೆಯುತ್ತಿದ್ದ ವೇಳೆ ಅಪಘಾತ ಸಂಭವಿಸಿ ಗಂಭೀರವಾಗಿ ಗಾಯಗೊಂಡಿದ್ದ ತಲಘಟ್ಟಪುರ ಪೊಲೀಸ್ ಠಾಣೆ ಪಿಎಸ್‌ಐ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟಿದ್ದಾರೆ. ಮೆಹಬೂಬ್ ಗುಡ್ಡಹಳ್ಳಿ (40) ಮೃತ ಪೊಲೀಸ್. ವಿಜಯಪುರ ಮೂಲದ ಮೆಹಬೂಬ್ ಗುಡ್ಡಹಳ್ಳಿ ಅವರು ಕಳೆದ 1 ವರ್ಷದಿಂದ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ. ಇವರ ಸಹೋದರ ಸೂರ್ಯ ನಗರ ಪೊಲೀಸ್ ಠಾಣೆಯಲ್ಲಿ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ರಾತ್ರಿ ಸುಮಾರು 2.30ಕ್ಕೆ ಸೂರ್ಯನಗರ ಸಮೀಪದ ಹೆಬ್ಬಗೋಡಿ ವ್ಯಾಪ್ತಿಯಲ್ಲಿ ಬರುವಾಗ ಕಾರು ಕೆಟ್ಟು ನಿಂತಿದೆ. ಈ ವೇಳೆ ಕೆಳಗೆ ಇಳಿದು ಕಾರನ್ನು ಪರಿಶೀಲಿಸುವಾಗ ಹಿಂದಿನಿಂದ ವೇಗವಾಗಿ ಬಂದ ಅಪರಿಚಿತ ಟ್ರಕ್ ಏಕಾಏಕಿ ಮೆಹಬೂಬ್‌ಗೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಇನ್ನು ಅಪಘಾತದ ಬಳಿಕ ಕಾರಿನಲ್ಲಿದ್ದ ಆರೋಪಿಗಳು ಪರಾರಿಯಾಗಿದ್ದು, ಅವರಿಗಾಗಿ ಹುಡುಕಾಟ ಮುಂದುವರೆದಿದೆ ಎಂದು ಪೊಲೀಸರು ಹೇಳಿದ್ದಾರೆ.

# ಹದಗೆಟ್ಟ ರಸ್ತೆ ದುರಸ್ಥಿಗೆ ಒತ್ತಾಯ, ನಿವಾಸಿಗಳ ವಿನೂತನ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ತಮ್ಮ ಪ್ರದೇಶದ ರಸ್ತೆಯ ದಯನೀಯ ಸ್ಥಿತಿಯಿಂದ ಬೇಸತ್ತ ಹಾಲಿಡೇ ವಿಲೇಜ್ ರಸ್ತೆಯ ನಿವಾಸಿಗಳು ಭಾನುವಾರ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಗಣ ಹೋಮ (ಅಗ್ನಿ ವಿಧಿ) ನಡೆಸಲು ಯೋಜಿಸಿದ್ದರು. ಪ್ರತಿಭಟನೆಗಳು ಫ್ರೀಡಂ ಪಾರ್ಕ್‌ಗೆ ಸೀಮಿತವಾಗಿರುವುದರಿಂದ ನಿವಾಸಿಗಳು ಈ ಮೂಲಕ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲು ಮುಂದಾಗಿದ್ದರು. ಆದರೆ ರಾಜಕೀಯ ಕಾರಣದಿಂದ ಕೊನೆಯ ಕ್ಷಣದಲ್ಲಿ ಕಾರ್ಯಕ್ರಮವನ್ನು ನಿರ್ಬಂಧಿಸಲಾಗಿದೆ. ಆದಾಗ್ಯೂ, ಸಣ್ಣ ಪ್ರಮಾಣದಲ್ಲಿ ಪೂಜೆ ನಡೆಸಿದರು. ಈ ಕುರಿತು ಜೊತೆಗೆ ಮಾತನಾಡಿದ ನಿವಾಸಿ ಮನೀಶ್ ಶುಕ್ಲಾ, ಊಗಿ ರಸ್ತೆಯ ವೆಂಕಟೇಶ್ವರ ದೇವಸ್ಥಾನದಲ್ಲಿ ಹೋಮ ಕಾರ್ಯಕ್ರಮ ಇಟ್ಟುಕೊಂಡಿದ್ದೇವು. ಆದರೆ ದೇವಸ್ಥಾನದಲ್ಲಿ ಇದನ್ನು ಮಾಡದಂತೆ ಎರಡು ದಿನಗಳ ಹಿಂದೆ ನಿರ್ದೇಶನ ಬಂದಿರುವುದಾಗಿ ಅರ್ಚಕರು ಹೇಳಿದರು. **ಬಹುಶ:** ರಾಜಕೀಯ ಒತ್ತಡವೇ ಇದಕ್ಕೆ ಕಾರಣವಾಗಿರಬಹುದು ಎಂದರು. ಮುಖ್ಯರಸ್ತೆ, ಶಾಲಾ-ಕಾಲೇಜುಗಳು, ವಸತಿ ಸಮುದಾಯಗಳಿಗೆ ಸಂಪರ್ಕಕಲ್ಪಿಸುವ 2.3-ಕಿಮೀ ಉದ್ದದ ರಸ್ತೆಯನ್ನು ಪೈಪ್‌ಲೈನ್ ಕಾಮಗಾರಿಗಾಗಿ ಹಲವು ಬಾರಿ ಅಗೆಯಲಾಗಿದೆ. ಆದರೆ ಸರಿಪಡಿಸಿಲ್ಲ. ಕಳೆದ ಆರು ತಿಂಗಳ ಹಿಂದೆಯೇ ರಸ್ತೆಗೆ ವೈಟ್‌ಟಾಪಿಂಗ್ ಘೋಷಣೆ ಮಾಡಲಾಗಿದ್ದು, ಅಸಮರ್ಪಕ ಗುತ್ತಿಗೆದಾರರು ಮತ್ತು ಅಸಮರ್ಪಕ ಮೇಲ್ವಿಚಾರಣೆಯಿಂದ ಸ್ವಲ್ಪ ಪ್ರಗತಿ ಕಂಡಿದೆ ಎಂದು ನಿವಾಸಿಗಳು ಹೇಳಿದರು.

# ನಾನೂ ಸುರ್ಜೇವಾಲಾ ಭೇಟಿಗೆ ಸಮಯ ಕೇಳಿದ್ದೇನೆ: ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ರಾಜ್ಯಕ್ಕೆ ಬಂದಿರುವ ಕಾಂಗ್ರೇ ಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭೇಟಿಗೆ ನಾನು ಸಮಯ ಕೇಳಿದ್ದೇನೆ ಎಂದು ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮಾತಾಡಿದ ಅವರು, ಸುರ್ಜೇವಾಲಾ ಭೇಟಿಗೆ ಸಮಯ ಕೇಳಿದ್ದೇನೆ. ಮಂಗಳವಾರ ಮಧ್ಯಾಹ್ನ ಬರುವಂತೆ ಸುರ್ಜೇವಾಲಾ ತಿಳಿಸಿದ್ದಾರೆ. ಇದೇ ವೇಳೆ, ತಮ್ಮ ಭೇಟಿ ವೈಯಕ್ತಿಕ ಎಂದು ಹೇಳುವ ಮೂಲಕ ಕಾರಣ ತಿಳಿಸಲು ನಿರಾಕರಿಸಿದ್ದಾರೆ. ಸುರ್ಜೇವಾಲಾರಿಂದ ಶಾಸಕರ ಅಹವಾಲು ವಿಚಾರವಾಗಿ, ಪಕ್ಷ ಸಂಘಟನೆ ಬಗ್ಗೆ ಶಾಸಕರ ಜೊತೆ ಮಾತಾಡಬಹುದು. ಶಾಸಕರಿಗೆ ಬಹಿರಂಗವಾಗಿ ಮಾತಾಡದಂತೆ ಕಟ್ಟುನಿಟ್ಟಾಗಿ ಹೇಳಬಹುದು. ಜಿ.ಪಂ, ತಾ.ಪಂ ಚುನಾವಣೆ ಬರ್ತಿದೆ, ಅದರ ಬಗ್ಗೆ ಮಾತಾಡಬಹುದು. ಪಕ್ಷದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಆದಾಗ, ಕೆಲವು ಸಂದರ್ಭದಲ್ಲಿ ಹೈಕಮಾಂಡ್ ಮಧ್ಯಪ್ರವೇಶ ಮಾಡ್ತಾರೆ. ರಾಜ್ಯಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸ ಆದಾಗ ಸರಿಪಡಿಸ್ತಾರೆ. ಹಿಂದೆಯೂ ಬಂದು ಇಲಾಖಾ ಪ್ರಗತಿ ಬಗ್ಗೆ ಹೈಕಮಾಂಡ್‌ನವರು ಬಂದು ಮಾಹಿತಿ ಪಡೀತಿದ್ದರು. ನಮಗೆಲ್ಲ ಮಾರ್ಗದರ್ಶನ ಮಾಡೋದೇ ಹೈಕಮಾಂಡ್ ಎಂದು ತಿಳಿಸಿದ್ದಾರೆ. ಸುರ್ಜೇವಾಲಾ ಅವರು ಬಂದರು ಎನ್ನುವ ಕಾರಣಕ್ಕೆ ಸಿಎಂ ಆಡಳಿತದಲ್ಲಿ ಹಿಡಿತ ಕಳ್ಕೊಂಡಿದ್ದಾರೆ ಎಂದು ತಿಳಿದುಕೊಳ್ಳಬಾರದು. ನಮ್ಮ ಆಡಳಿತ ರೀತಿ ವರಿಷ್ಠರಿಗೆ ಗೊತ್ತಿದೆ ಎಂದಿದ್ದಾರೆ.

# ಮರ ಬಿದ್ದು ಮೃತಪಟ್ಟ ಅಕ್ಷಯ್ ಸಹೋದರನ ಆರೋಪ

• ಉದಯವಾಹಿನಿ, ಬೆಂಗಳೂರು

ಮರದ ಕೊಂಬೆ ಬಿದ್ದು ಮೃತಪಟ್ಟ ಅಕ್ಷಯ್ ಕುಟುಂಬದವರು ನೀಡಿರುವ ಪ್ರಕರಣವನ್ನು ವಾಪಸ್ ತೆಗೆದುಕೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ನಾವು ನೀಡಿರುವ ದೂರನ್ನು ವಾಪಸ್ ಪಡೆದುಕೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳು ನಮ್ಮ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಅಕ್ಷಯ್ ಸಹೋದರ ಬೆನಕರಾಜ್ ಆರೋಪಿಸಿದ್ದಾರೆ.

ಮರ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಅಕ್ಷಯ್‌ನ ಆಸ್ಪತ್ರೆ ಖರ್ಚನ್ನ ಸಂಪೂರ್ಣ ನೋಡಿಕೊಳ್ಳುತ್ತೇವೆ ಎಂದು ಬಿಬಿಎಂಪಿಯ ಅರಣ್ಯ ಇಲಾಖೆಯ ಉಪಸಂರಕ್ಷಣಾಧಿಕಾರಿ ಬಿಎಲ್ ಜಿ ಸ್ವಾಮಿ ಭರವಸೆ ನೀಡಿದ್ದರು. ಆದರೆ, ಇದೀಗ ಕುಟುಂಬಸ್ಥರು ಖರ್ಚು ಮಾಡಿದ ಹಣವನ್ನ ವಾಪಸ್ ಕೊಡಲು ಹಿಂದೇಟು ಹಾಕುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ. ಅಕ್ಷಯ್‌ನನ್ನು ಉಳಿಸಿಕೊಳ್ಳಲು 1,68,451 ಖರ್ಚು ಮಾಡಿದ್ದೇವೆ ನಾವು ಮಾಡಿರುವ ಖರ್ಚಿಗೂ ಬಿಬಿಎಂಪಿಗೂ ಯಾವುದೇ ಸಂಬಂಧ ಇಲ್ಲ ಎಂದು ಪತ್ರದಲ್ಲಿ ಬರೆದುಕೊಡುವಂತೆ ಒತ್ತಡ ಹಾಕಲಾಗುತ್ತಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಮೊಬಿಲಿಟಿ ಆ್ಯಪ್ ಮೂಲಕವೂ ಇನ್ಮುಂದೆ ನಮ್ಮ ಮೆಟ್ರೋ ಟಿಕೆಟ್ ಬುಕಿಂಗ್

## ಬಿಎಂಆರ್‌ಸಿಎಲ್‌ನ ಅಂಕಿ-ಅಂಶಗಳ ಪ್ರಕಾರ ಏಪ್ರಿಲ್‌ನಲ್ಲಿ 2.28 ಕೋಟಿ ಪ್ರಯಾಣಿಕರು ಮೆಟ್ರೊ ರೈಲುಗಳಲ್ಲಿ ಸಂಚರಿಸಿದ್ದಾರೆ

• ಉದಯವಾಹಿನಿ, ಬೆಂಗಳೂರು



**ಶೇ.48.14ರಷ್ಟು ಪ್ರಯಾಣಿಕರು ಸ್ಮಾರ್ಟ್‌ಕಾರ್ಡ್ ಬಳಕೆ**

ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತವು ಬಿಎಂಆರ್‌ಸಿಎಲ್ ಪ್ರಯಾಣಿಕರ ಅನುಕೂಲಕ್ಕಾಗಿ ನಾನಾ ಮೊಬಿಲಿಟಿ ಅಪ್ಲಿಕೇಶನ್‌ಗಳ ಆ್ಯಪ್ ಮೂಲಕ ಟಿಕೆಟ್‌ಗಳನ್ನು ಬುಕ್ ಮಾಡುವ ವ್ಯವಸ್ಥೆ ಕಲ್ಪಿಸಿದೆ.

ಈಗಾಗಲೇ ರ್‍ಯಾಪಿಡೊ ಆಯಪ್ ಮೂಲಕ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸುವ ಕುರಿತು ಪರಿಶೀಲನೆ ನಡೆಸುತ್ತಿದ್ದು, ಶೀಘ್ರದಲ್ಲಿಯೇ ಅದು ಸಾರ್ವಜನಿಕರಿಗೆ ಲಭ್ಯವಾಗಲಿದೆ ಎಂದು ಮೂಲಗಳು ತಿಳಿಸಿವೆ. ಒಂದೇ ಅಪ್ಲಿಕೇಶನ್ ಮೂಲಕ ಆಟೊ, ಟ್ಯಾಕ್ಸಿ ಮತ್ತು ಮೆಟ್ರೊ ಟಿಕೆಟ್‌ಗಳನ್ನು ಬುಕ್ ಮಾಡಲು ಅನುವು ಮಾಡಿಕೊಡಲು ಉದ್ದೇಶಿಸಿದೆ. ಅಲ್ಲದೆ, ರ್‍ಯಾಪಿಡೊ ಸಂಸ್ಥೆಯು ತನ್ನ ಅಪ್ಲಿಕೇಶನ್ ಮೂಲಕ ಬುಕ್ ಮಾಡಿದ ಮೊದಲ ಮೆಟ್ರೊ ಟಿಕೆಟ್‌ಗೆ ರಿಯಾಯಿತಿ ನೀಡಲು ನಿರ್ಧರಿಸಿದೆ. ಬಿಎಂಟಿಸಿ ಬಸ್ ಪಾಸ್‌ಗಳನ್ನು ವಿತರಿಸುತ್ತಿರುವ ಮತ್ತೊಂದು ಮೊಬಿಲಿಟಿ ಸಂಸ್ಥೆ ತುಮೊಕ್, ಈಗಾಗಲೇ ತನ್ನ ಅಪ್ಲಿಕೇಶನ್ ಮೂಲಕ ಮೆಟ್ರೊ ಟಿಕೆಟ್ ಬುಕಿಂಗ್‌ಗಳನ್ನು ಪ್ರಾಯೋಗಿಕವಾಗಿ ನಡೆಸುತ್ತಿದೆ. ಮುಂಬರುವ ದಿನಗಳಲ್ಲಿ ಗೂಗಲ್ ಮ್ಯಾಪ್, ನಮ್ಮ ಯಾತ್ರಿ ಮತ್ತು ರೆಡ್‌ಬಸ್ ಫ್ಲಾಟ್‌ಫಾಮ್‌ರಗಳ ಮೂಲಕವೂ ಮೆಟ್ರೊ ಟಿಕೆಟ್‌ಗಳನ್ನು ಪಡೆಯಬಹುದಾಗಿದೆ. ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ (ಒಎನ್‌ಡಿಸಿ) ಪಾಲುದಾರಿಕೆ ಹೊಂದಿರುವ ನಾನಾ ಮೊಬಿಲಿಟಿ ಅಪ್ಲಿಕೇಶನ್ ಮೂಲಕ ಟಿಕೆಟ್ ಬುಕ್ಕಿಂಗ್ ಸಾಧ್ಯವಾಗಲಿದೆ. ಸದ್ಯ ವಾಟ್ಸಾಪ್ ಮೂಲಕ ಕ್ಯೂಆರ್ ಕೋಡ್ ಪಡೆದು ಮೆಟ್ರೊದಲ್ಲಿ ಪ್ರಯಾಣ ಮಾಡಬಹುದು. ಪೇಟಿಎಂ ಮೂಲಕ ಕ್ಯೂಆರ್ ಟಿಕೆಟ್ ಜತೆಗೆ ಸ್ಮಾಟ್‌ಕಾರ್ಡ್ ರೀಚಾರ್ಜ್ ಕೂಡ ಮಾಡಬಹುದಾಗಿದೆ. ಆದರೆ ಈ ಎರಡು ಅಪ್ಲಿಕೇಷನ್‌ಗಳಲ್ಲಿ ನಿಲ್ದಾಣ ತಲುಪಲು, ನಿಲ್ದಾಣದಿಂದ ಗಮ್ಯಸ್ಥಾನ ತಲುಪಲು ಆಟೊ/ ಟ್ಯಾಕ್ಸಿ ಬುಕ್ ಮಾಡಲು ಸಾಧ್ಯವಾಗದು. ಹೀಗಾಗಿ ಮೊಬಿಲಿಟಿ ಅಪ್ಲಿಕೇಶನ್‌ಗಳ ಮೂಲಕ ಟಿಕೆಟ್ ಬುಕ್ಕಿಂಗ್‌ಗೆ ಅವಕಾಶ ಮಾಡಿಕೊಡಲಾಗುತ್ತಿದೆ.

### ಸ್ಮಾರ್ಟ್‌ಕಾರ್ಡ್‌ಗೆ ಬೇಡಿಕೆ

**ಬಿಎಂಆರ್‌ಸಿಎಲ್‌ನ ಅಂಕಿ-ಅಂಶಗಳ ಪ್ರಕಾರ ಏಪ್ರಿಲ್‌ನಲ್ಲಿ 2.28 ಕೋಟಿ ಪ್ರಯಾಣಿಕರು ಮೆಟ್ರೋ ರೈಲುಗಳಲ್ಲಿ ಸಂಚರಿಸಿದ್ದಾರೆ. ಈ ಪೈಕಿ ಶೇ.48.14ರಷ್ಟು ಪ್ರಯಾಣಿಕರು ಸ್ಮಾರ್ಟ್‌ಕಾರ್ಡ್, ಶೇ.22.81ರಷ್ಟು ಮಂದಿ ಕ್ಯೂಆರ್ ಕೋಡ್ ಹಾಗೂ ಶೇ.29.05ರಷ್ಟು ಜನರು ಟೋಕನ್ ಬಳಕೆ ಮಾಡಿದ್ದಾರೆ. ಸ್ಮಾರ್ಟ್‌ಕಾರ್ಡ್ ಬಳಕೆದಾರರಿಗೆ ಪ್ರಯಾಣ ದರದಲ್ಲಿ ಶೇ.10ರಷ್ಟು ರಿಯಾಯಿತಿ ನೀಡಲಾಗುತ್ತಿದೆ.**

**ನಾವು 10ಕ್ಕೂ ಹೆಚ್ಚು ಮೊಬಿಲಿಟಿ ಅಪ್ಲಿಕೇಶನ್‌ಗಳೊಂದಿಗೆ ಒಪ್ಪಂದ ಮಾಡಿಕೊಂಡಿರುವ ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ ಫ್ಲಾಟ್‌ಫಾರ್ಮ್ ಮೂಲಕ ಎಂಡ್-ಟು-ಎಂಡ್ ಪ್ರಯಾಣ ಬುಕಿಂಗ್ ಅನ್ನು ಸಕ್ರಿಯಗೊಳಿಸುತ್ತಿದ್ದೇವೆ. ಇದು ಬಳಕೆದಾರರು ತಾವು ಇಷ್ಟಪಡುವ ಯಾವುದೇ ಅಪ್ಲಿಕೇಶನ್ ಮೂಲಕ ಟಿಕೆಟ್‌ಗಳನ್ನು ಬುಕ್ ಮಾಡಲು ಅನುವು ಮಾಡಿಕೊಡುತ್ತದೆ, ಎನ್ನುತ್ತಾರೆ ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು.**

# ಶಿಕ್ಷಣ ಸಮಿತಿ ಆಯೋಜಿಸಿದ ಶ್ಯಾಮಲಾ ಜೋಗಯ್ಯ ಬೀಳ್ಕೊಡುಗೆ

• ಉದಯವಾಹಿನಿ, ಬೆಂಗಳೂರು



**ಮನೋಜ್ ಕುಮಾರ್ ಕೊಳ್ಳ ಅವರು ಅಭಿಪ್ರಾಯ**

ಮೌಲ್ಯಾಧಾರಿತ ಶಿಕ್ಷಣ ನೀಡುವಲ್ಲಿ ಪ್ರಾಂಶುಪಾಲರ ಪಾತ್ರ ಬಹುದೊಡ್ಡದು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೆಂ.ದಕ್ಷಿಣ ಜಿಲ್ಲಾ ಉಪನಿರ್ದೇಶಕ ಮನೋಜ್ ಕುಮಾರ್ ಕೊಳ್ಳ ಅವರು ಅಭಿಪ್ರಾಯ ಪಟ್ಟರು.

ನಗರದ ಎಚ್.ಎ.ಎಲ್ ಸಮೀಪದ ಸರ್.ಎಂ. ವಿಶ್ವೇಶ್ವರಯ್ಯ ಪದವಿ ಪೂರ್ವ ಕಾಲೇಜಿನಲ್ಲಿ ಎಚ್.ಎ.ಎಸ್. ಬಿ ಶಿಕ್ಷಣ ಸಮಿತಿ ಆಯೋಜಿಸಿದ ಶ್ಯಾಮಲಾ ಜೋಗಯ್ಯ ಅವರ ಬೀಳ್ಕೊಡುಗೆ ಸಮಾರಂಭ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಭಾವಿಸಿ ಶಿಕ್ಷಣ ನೀಡುವ ಗುರುವೃಂದ ನಮ್ಮಲ್ಲಿರುವುದು ಹೆಮ್ಮೆಯ ಸಂಗತಿ. ಶಿಕ್ಷಣ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದ ಶ್ಯಾಮಲ ಜೋಗಯ್ಯ ಅವರಂತ ಪ್ರಾಂಶುಪಾಲರ ಅವಶ್ಯಕ ಶಿಕ್ಷಣ ಕ್ಷೇತ್ರಕ್ಕೆ ಅವಶ್ಯಕವಿದೆ ಎಂದರು.

ಹಳೆ ವಿದ್ಯಾರ್ಥಿ ಪರಿಸರ ಮಂಜು ಮಾತನಾಡಿ, ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ನಡೆದು ದೇಶಕ್ಕೆ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು ಮತ್ತು ಸಮಾಜಕ್ಕೆ ನಾವು ಆಸ್ತಿಯಾಗಿ ಬದುಕಬೇಕೆಂಬ ಪರಿಪಾಠವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳವಂತೆ ಮಾಡಿದ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಮಾದರಿಯ ಶಿಕ್ಷಕಿಯಾಗಿದರು ಎಂದು ನುಡಿದರು. ಇದೇವೇಳೆ 2004-06 ಕಲಾ ವಿಭಾಗದ ವಿದ್ಯಾರ್ಥಿಗಳು ಅವರಿಗೆ ಗುರುವಂದನಾ ಸಲ್ಲಿಸಿ ಸಸಿ ಹಾಗೂ ಉಡುಗೊರೆ ನೀಡಿ ಗೌರವಿಸಿ ಆಶೀರ್ವಾದ ಪಡೆದರು. ಸಮಿತಿಯ ಉಪಾಧ್ಯಕ್ಷರಾದ ಪ್ರೋ. ಸದಾಶಿವರೆಡ್ಡಿ, ಕಾರ್ಯದರ್ಶಿ ಸೌಮ್ಯ ಮುನಿವೆಂಕಟರೆಡ್ಡಿ, ಉಪನ್ಯಾಸಕರಾದ ಡಿ.ಜಿ ನಾಗರಾಜ್, ಎಂ. ಮುನಿರಾಜು, ಬಿ.ಎಚ್. ವೀರಪ್ಪ, ಶಿಕ್ಷಕ ಮತ್ತು ವಿದ್ಯಾರ್ಥಿ ವೃಂದದವರು, ಹಳೆ ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕಾವೇರಿ ಜಲಾನಯನ ಪ್ರದೇಶಕ್ಕೆ 2 ಸಾವಿರ ಕೊಟಿ ಅನುದಾನ

• ಉದಯವಾಹಿನಿ, ಬೆಂಗಳೂರು

ಕಾವೇರಿ ಜಲಾನಯನ ಪ್ರದೇಶಕ್ಕೆ 2 ಸಾವಿರ ಕೋಟಿಗೂ ಹೆಚ್ಚು ಅನುದಾನ ನೀಡಲಾಗಿದೆ. ಪ್ರತಿ ಕ್ಷೇತ್ರವನ್ನೂ ಗಮದಲ್ಲಿಟ್ಟುಕೊಂಡು ಕೆಲಸ ಮಾಡಲಾಗುತ್ತಿದೆ.

ಮಂಡ್ಯ ಜಿಲ್ಲೆ ಒಂದಕ್ಕೆ 1 ಸಾವಿರ ಕೋಟಿಗೂ ಹೆಚ್ಚು ಅನುದಾನಕ್ಕೆ ಅನುಮೋದನೆ ನೀಡಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

92 ವರ್ಷಗಳ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಜೂನ್ ತಿಂಗಳಿನಲ್ಲಿ ಭರ್ತಿಯಾಗಿರುವ ಕೆಆರ್‌ಎಸ್ ಅಣೆಕಟ್ಟೆಗೆ ಸಿಎಂ ಡಿಸಿಎಂ ಅವರು ಬಾಗಿನ ಅರ್ಪಿಸಿ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ನಮ್ಮ ಸರ್ಕಾರ ಎರಡು ವರ್ಷಗಳ ಅಧಿಕಾರವಧಿಯಲ್ಲಿ ಕಾವೇರಿ ಅಚ್ಚುಕಟ್ಟು ಪ್ರದೇಶವನ್ನು ಹೆಚ್ಚು ಮಾಡಿದೆ. 80 ವರ್ಷಗಳ ಹಳೆಯ ಕಾಲುವೆಗಳನ್ನು ದುರಸ್ತಿಗೊಳಿಸಲಾಗಿದೆ. ತಮಿಳುನಾಡಿಗೆ 9 ಟಿಎಂಸಿ ನೀರು ಹೋಗಬೇಕಿತ್ತು ಹೆಚ್ಚು ಮಳೆ ಬಂದ ಕಾರಣಕ್ಕೆ 30 ಟಿಎಂಸಿಗಿಂತ ಹೆಚ್ಚು ನೀರು ಬಿಡಲಾಗಿದೆ. ಕಳೆದ ವರ್ಷವೂ 177 ಟಿಎಂಸಿಗಿಂತ ಹೆಚ್ಚುವರಿಯಾಗಿ 305 ಟಿಎಂಸಿ ನೀರು ಹರಿಸಲಾಗಿತ್ತು. 2022-23ರಲ್ಲಿ 400 ಟಿಎಂಸಿ ಹೆಚ್ಚುವರಿ ನೀರು ಹರಿಸಲಾಗಿದೆ. ಮೂರು ವರ್ಷಗಳಿಗೊಮ್ಮೆ ನೀರು ಹರಿವಿನ ಪ್ರಮಾಣ ಕಡಿಮೆಯಾಗುವುದನ್ನು ಅಂಕಿಅಂಶಗಳನ್ನು ನೋಡಿದರೆ ತಿಳಿಯುತ್ತದೆ ಎಂದರು. ಅಣೆಕಟ್ಟಿನಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಕಾವೇರಿ ಆರತಿ ಜಾಗ ನಿಗದಿ ಮಾಡಿದ್ದೇವೆ.



ದೇವರಿಗೆ ಪ್ರಾರ್ಥನೆ ಮಾಡಲು ಅರ್ಜಿ ಹಾಕಬೇಕೆ ಯಾರದ್ದಾದರೂ ಅನುಮತಿ ಬೇಕೆ ಬೆಂಗಳೂರಿನಲ್ಲಿ ಜಲಮಂಡಳಿಯಿಂದ ನಡೆಸಿದ ಕಾವೇರಿ ಆರತಿಗೆ 25 ಸಾವಿರ ಜನ ಸೇರಿದ್ದರು. ಇಲ್ಲಿ ಕಾವೇರಿ ಆರತಿ ನಡೆಸಿದರೆ ಮಂಡ್ಯ, ಮೈಸೂರು ಭಾಗದ 1,500 ಜನರಿಗೆ ಉದ್ಯೋಗ ದೊರಕುತ್ತದೆ. ಬೃಂದಾವನ ಉದ್ಯಾನ ಅಭಿವೃದ್ಧಿ ಮಾಡಿದರೆ ಸ್ಥಳಿಯ 3 ಸಾವಿರ ಜನರಿಗೆ ಉದ್ಯೋಗ ದೊರೆಯುತ್ತದೆ ಎಂದು ಹೇಳಿದರು.

### ಕಾವೇರಿ ಆರತಿಗೆ ಸಹಕರಿಸಿ, ವಿರೋಧಿಸಬೇಡಿ

**ನಾನು ಭಕ್ತಿ, ವಿನಮ್ರತೆಯಿಂದ ಕಾವೇರಿ ಆರತಿ ವಿರೋಧ ಮಾಡುವವರಲ್ಲಿ ಅಡ್ಡಿಪಡಿಸಬೇಡಿ. ವಿರೋಧ ಮಾಡಲೇಬೇಕು ಎಂಬ ಕಾರಣಕ್ಕೆ ವಿರೋಧಿಸಬೇಡಿ. ಸಹಕಾರ ನೀಡಿ ಎಂದು ವಿನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ನೀರಿಗೆ ಜಾತಿ, ಧರ್ಮವಿಲ್ಲ. ನೀರನ್ನು ಪೂಜೆ ಮಾಡುವುದು ನಮ್ಮ ಸಂಸ್ಕೃತಿ. ಪ್ರಯತ್ನಕ್ಕೆ ಸೋಲಾಗಬಹುದು ಪ್ರಾರ್ಥನೆಗೆ ಸೋಲಾಗುವುದಿಲ್ಲ. ಈ ರಾಜ್ಯದ ರೈತರ ಅಭಿವೃದ್ಧಿಗೆ ನಮ್ಮ ಸರ್ಕಾರ ಅನೇಕ ಅನುದಾನ ನೀಡುತ್ತಿದೆ. 19,700 ಕೋಟಿ ಹಣವನ್ನು ರೈತರಿಗೆ ನೀಡುವ ಉಚಿತ ವಿದ್ಯುಚ್ಛಕ್ತಿಗಾಗಿ ನಮ್ಮ ಸರ್ಕಾರ ನೀಡುತ್ತಿದೆ ಎಂದರು.**

# ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ

• ಉದಯವಾಹಿನಿ, ಬೆಂಗಳೂರು




**ಲಿಖಿತ ದೂರು ಬಂದರೆ ತನಿಖೆ**

ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳ ಹಿನ್ನಡೆಯ ನಡುವೆಯೇ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆಯಲ್ಲಿ ಕೋಟ್ಯಾಂತರ ರೂ. ಗೋಲ್‌ಮಾಲ್ ನಡೆದಿರುವುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಹಲವಾರು ದೂರುಗಳು ಬಂದ ಹಿನ್ನೆಲೆಯಲ್ಲಿ ತನಿಖಾ ಸಮಿತಿ ರಚಿಸಿ, ಪರಿಶೀಲಿಸಿದಾಗ ಕೋಟ್ಯಾಂತರ ರೂ. ದುರ್ಬಳಕೆಯಾಗಿರುವುದು ಪತ್ತೆಯಾಗಿದೆ. ಪ್ರಕರಣವೊಂದರಲ್ಲಿ ಕಾಮಗಾರಿಗೆ ಆದೇಶ ವಿಲ್ಲದಿದ್ದರೂ ಅಧಿಕೃತವಾಗಿ ಅನುದಾನ ಬಿಡುಗಡೆಯಾಗದಿದ್ದರೂ, ನಕಲಿ ದಾಖಲೆ ಸೃಷ್ಟಿಸಿ 16.2 ಕೋ. ರೂ.ಗಳನ್ನು ಗುತ್ತಿಗೆದಾರರೊಬ್ಬರ ಖಾತೆಗೆ ಸಂದಾಯವಾಗಿರುವುದು ಬೆಳಕಿಗೆ ಬಂದಿದೆ. ಕೆಆರ್‌ಐಡಿಎಲ್ ಬಿಬಿಎಂಪಿಯ ಐದು ವಿಭಾಗಗಳಲ್ಲಿ ಸಿಮೆಂಟ್ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಅನುಮೋದನೆ ನೀಡಿದ್ದು, ಇದರಲ್ಲಿ ಬೆಂ. ಪೂರ್ವವಲಯ ಒಂದು, ಮಹಾದೇವಪುರ ಉಪವಿಭಾಗ ಮತ್ತು ಕೊಪ್ಪಳ ವಿಭಾಗದ ನೆಲೋಗಿಪುರ ಉಪ ವಿಭಾಗದಲ್ಲಿ ನಕಲಿ ದಾಖಲೆ ಸೃಷ್ಟಿಸಿ ಹಣ ಪಡೆದಿರುವುದು ಗೊತ್ತಾಗಿದೆ.

ಅಧಿಕೃತ ಅಭಿಯಂತರ ಕೆ.ಸಿ. ರವಿಶಂಕರ್ ಅಧ್ಯಕ್ಷತೆಯಲ್ಲಿ ನಾಲ್ಕು ಸದಸ್ಯರನ್ನೊಳಗೊಂಡ ಸಮಿತಿ ಪರಿಶೀಲನೆ ವೇಳೆ ಅವ್ಯವಹಾರ ಬಯಲಾಗಿದೆ. ಕಳೆದ 2022-23ನೇ ಸಾಲಿನಲ್ಲಿ ನಡೆದಿರುವ ಕೋಟ್ಯಾಂತರ ರೂ. ಹಗರಣದಲ್ಲಿ ಬಿಬಿಎಂಪಿ ವಲಯದಲ್ಲಿ 7 ಕೋ. , ಕೊಪ್ಪಳ ವಿಭಾಗದಲ್ಲಿ 9.2 ಕೋ. ದುರ್ಬಳಕೆಯಾಗಿದೆ.

**ಅಂದಿನ ಹಣಕಾಸು ಇಲಾಖೆ ಅಧಿಕಾರಿಗಳು ಹಣ ಸಂದಾಯ ಮಾಡಿದ್ದಾರೆ. ಇದರಲ್ಲಿ ಮೇಲಾಧಿಕಾರಿಗಳ ಪಾತ್ರವೂ ಇದೆಯೆಂದು ಹೇಳಲಾಗುತ್ತಿದೆ. ವರ್ಕ್ ಆರ್ಡರ್ ಆಗಿ, ಕಾಮಗಾರಿ ಪೂರ್ಣಗೊಂಡ ನಂತರ ಜಿ.ಪಂ.ನಿಂದ ಆಡಳಿತಾತ್ಮಕವಾಗಿ ಅನುದಾನ ಬಿಡುಗಡೆಯಾಗಬೇಕು. ಆದರೆ ಕಾಮಗಾರಿಗೆ ಸಂಬಂಧಿಸಿದ ಇಲಾಖೆಗಳಿಂದ ಆದೇಶವಾಗಿ ಅನುದಾನ ಬಿಡುಗಡೆಯಾಗಬೇಕು. ಆದರೆ ಇದನ್ನು ಉಲ್ಲಂಘಿಸಲಾಗಿದೆ. ಈ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ, ಲಿಖಿತ ದೂರು ಬಂದರೆ ತನಿಖೆ ನಡೆಸಿ ಆದೇಶ ನೀಡುವುದಾಗಿ ಕೆಆರ್‌ಐಡಿಎಲ್‌ನ ಅಧ್ಯಕ್ಷ ಡಿ.ಕೆ. ಸಂಗಮೇಶ್ ತಿಳಿಸಿದ್ದಾರೆ.**

# ರೆಸಿಡೆನ್ಸಿ ರಸ್ತೆ। ಮಂದಗತಿಯಲ್ಲಿ ಕಾಮಗಾರಿ: ಸಂಚಾರಕ್ಕೆ ಅಡ್ಡಿ

• ಉದಯವಾಹಿನಿ, ಬೆಂಗಳೂರು

ರೆಸಿಡೆನ್ಸಿ ರಸ್ತೆಯ ಆಶೀರ್ವಾದ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆಯ ಜಂಕ್ಷನ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ಮುಗಿದು ವಾಹನ ಸಂಚಾರಕ್ಕೆ ಮುಕ್ತಗೊಂಡಿದೆ. ಆದರೆ, ಒಳಚರಂಡಿಯ ಕೊಳವೆಗಳನ್ನು ಅಳವಡಿಸಲು ರಸ್ತೆಯ ಎರಡೂ ಬದಿಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನಕೂಲವಾಗಿದ್ದು, ವ್ಯಾಪಾರಿಗಳು, ಗ್ರಾಹಕರು, ಸ್ಥಳೀಯ ನಿವಾಸಿಗಳು ಹೈರಾಣಾಗಿದ್ದಾರೆ.



ಬಿಬಿಎಂಪಿಯಿಂದ ವೈಟ್ ಟಾಪಿಂಗ್ ಕಾಮಗಾರಿ, ಒಳಚರಂಡಿಯ ಕೊಳವೆ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ನಗರದ ಕೇಂದ್ರ ವಲಯದ ರೆಸಿಡೆನ್ಸಿ ರಸ್ತೆಯು ಪ್ರಮುಖ ಮಾರ್ಗವಾಗಿದೆ. ಇಲ್ಲಿಂದ ಕೆ.ಆರ್. ಪುರ, ಹೊಸಕೋಟೆ, ಇಂದಿರಾನಗರ ಮಾರತ್ಹಳ್ಳಿ, ದೊಮ್ಮಲೂರು, ಹಲಸೂರು, ಐಟಿಪಿಎಲ್ ವೈಟ್‌ಫೀಲ್ಡ್, ಕಾಡುಗೋಡಿ ಸೇರಿದಂತೆ ಹಲವಾರು ಬಡಾವಣೆಗಳಿಗೆ ಬಿಎಂಟಿಸಿ ಬಸ್‌ಗಳು ಸೇರಿದಂತೆ ನೂರಾರು ವಾಹನಗಳು ಸಂಚರಿಸುತ್ತವೆ. ಕಿರಿದಾದ ರಸ್ತೆಯ ಎರಡೂ ಬದಿಯನ್ನು ಅಗೆದು ಹಾಗೆಯೇ ಬಿಟ್ಟಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದ್ದು, ಅಪಘಾತಗಳು ಸಂಭವಿಸುತ್ತಿವೆ. ಬಿಬಿಎಂಪಿ ಸಿಬ್ಬಂದಿ ನಾನಾ ಕಾರಣಗಳಿಂದ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನಗಳಲ್ಲಿ ಬರುವ ಗ್ರಾಹಕರು ವ್ಯಾಪಾರಿಗಳು ಬಿದ್ದು ಕಾಲು ಮುರಿದುಕೊಂಡಿದ್ದಾರೆ. ಈ ಎಲ್ಲಾ ಅವ್ಯವಸ್ಥೆಗಳಿಂದಾಗಿ ಇಲ್ಲಿಗೆ ಖರೀದಿಗೆ ಬರುವ ಗ್ರಾಹಕರ ಸಂಖ್ಯೆ ವಿರಳವಾಗಿದೆ' ಎಂದು ವ್ಯಾಪಾರಿಗಳು ಬೇಸರ ವ್ಯಕ್ತಪಡಿಸಿದರು. ಭಾಗದಲ್ಲಿ ಹಲವಾರು ಶಾಲಾ-ಕಾಲೇಜುಗಳಿವೆ. ವಿದ್ಯಾರ್ಥಿಗಳು ನಿತ್ಯ ಈ ಹಾದಿಯ ಮೂಲಕವೇ ಶಾಲೆ ಕಾಲೇಜುಗಳಿಗೆ ತಲುಪಬೇಕಿದೆ. ಆದರೆ, ಈ ರಸ್ತೆಯ ಎರಡೂ ಬದಿಯಲ್ಲಿ ಬೃಹತ್ ಗಾತ್ರದ ಕೊಳವೆಗಳನ್ನು ಜೋಡಿಸಿ ಇಡಲಾಗಿದೆ. ಇವು ಯಾವಾಗ ಬೇಕಾದರೂ ಬೀಳುವ ಆತಂಕವಿದೆ. ಏನಾದರೂ ಅನಾಹುತಗಳು ಸಂಭವಿಸುವ ಮುನ್ನ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಕಾಮಗಾರಿ ನಡೆಯುತ್ತಿರುವದರಿಂದ ವಾಹನಗಳು ನನ್ನ ಅಂಗಡಿಯ ಬಳಿಗೆ ಬರಲು ಸಾಧ್ಯವಾಗುತ್ತಿಲ್ಲ. ಈ ಮೊದಲು ಗ್ರಾಹಕರ ಸಂಖ್ಯೆ ಹೆಚ್ಚಾಗಿರುತ್ತಿತ್ತು. ಆದರೆ, ಇದೀಗ ಒಬ್ಬ ವ್ಯಕ್ತಿ ನಿಂತರೆ ಅದೇ ಅಪರೂಪ ಎನ್ನುವಂತಾಗಿದೆ. ಕಾಮಗಾರಿಯಿಂದಾಗಿ, ಗ್ರಾಹಕರಿಲ್ಲದೇ, ವ್ಯಾಪಾರವೂ ಕುಂಟುತ್ತಾ ಸಾಗುತ್ತಿದೆ ಎಂದು ಪಾನ್‌ಶಾಪ್ ಅಂಗಡಿಯ ಸುಹೇಲ್ ಹೇಳಿದರು. 2 ವಾರಗಳ ಹಿಂದೆಯೇ ನನ್ನ ಅಂಗಡಿಯ ಮುಂದೆ ಇರುವ ಪ್ರದೇಶವನ್ನು ಅಗೆದು, ಕೆಲಸ ಪ್ರಾರಂಭಿಸಲಾಗಿದೆ. 10 ರಿಂದ 15 ದಿನಗಳವರೆಗೆ ಯಾವುದೇ ಕೆಲಸ ಮಾಡಲಿಲ್ಲ, ದೂಳುಮಯ ವಾತಾವರಣ ನಿರ್ಮಾಣವಾಗಿದ್ದು, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಬಾರ್ ಅಂಗಡಿಯ ಅನಂತ್ ಹೇಳಿದರು.

# ದತ್ತಾತ್ರೇಯ ಹೊಸಬಾಳೆ ಮನುಸ್ಮೃತಿ ವ್ಯಕ್ತಿ: ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು



ಆರ್‌ಎಸ್‌ಎಸ್ ನಾಯಕ ದತ್ತಾತ್ರೇಯ ಹೊಸಬಾಳೆ ಮನುಸ್ಮೃತಿ ವ್ಯಕ್ತಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿರುಗೇಟು ನೀಡಿದರು. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಹೊಸಬಾಳೆ ಅವರು ಮನುಸ್ಮೃತಿಯ ವ್ಯಕ್ತಿ. ಬಡವರ್ಗದ ಜನರು ಏಳಿಗೆ ಹೊಂದುವುದು ಅವರಿಗೆ ಇಷ್ಟವಿಲ್ಲ. ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಪಾಲಿಸಿಕೊಂಡು ಬಂದಿರುವುದನ್ನು ಅವರು ಇನ್ನೂ ಮುಂದುವರಿಸುತ್ತಿದ್ದಾರೆ. ಅದಕ್ಕಾಗಿಯೇ ಅವರು ಸಮಾಜವಾದ, ಜಾತ್ಯತೀತತೆ, ಒಕ್ಕೂಟ ವ್ಯವಸ್ಥೆ, ಸ್ವಾತಂತ್ರ್ಯ, ಸಮಾನತೆ ಅಥವಾ ಭ್ರಾತೃತ್ವದಲ್ಲಿ ನಂಬಿಕೆ ಇಡುವುದಿಲ್ಲ. ಎಲ್ಲಾ ಮೌಲ್ಯಗಳನ್ನು ತಿರಸ್ಕರಿಸುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ಇದು ಅವರ ಪಕ್ಷದ ಮಾರ್ಗ, ಆರ್‌ಎಸ್‌ಎಸ್ ಮಾರ್ಗಕ್ಕೆ ನಿಜವಾಗಿಯೂ ಬದ್ಧರಾಗಿದ್ದರೆ, ಅವರು ಅಸ್ಪೃಶ್ಯತೆಯನ್ನು ತೊಡೆದು ಹಾಕುತ್ತಿದ್ದರು ಎಂದು ಟಾಂಗ್ ಕೊಟ್ಟರು. ಇದೇ ವೇಳೆ ಸೆಪ್ಟೆಂಬರ್ ಕ್ರಾಂತಿ, ಪೂರ್ಣಾವಧಿ ಸಿಎಂ, ನಾಯಕತ್ವ ಬದಲಾವಣೆ ಹೇಳಿಕೆಗಳ ಬಗ್ಗೆ ಮಾತನಾಡಿದ ಅವರು, ಹೈಕಮಾಂಡ್ ನಿರ್ಧಾರವನ್ನು ಯಾರಿಗೂ ಊಹಿಸಲು ಸಾಧ್ಯವಿಲ್ಲ ಎಂದು ಸಂದೇಶ ರವಾನಿಸಿದ್ದಾರೆ. ಈ ಮೂಲಕ ಏನೇ ನಿರ್ಧಾರ ಮಾಡುವುದಾದರೂ ಹೈಕಮಾಂಡ್ ತೀರ್ಮಾನ ಮಾಡೇ ಮಾಡುತ್ತದೆ ಎಂಬ ಖಡಕ್ ಎಚ್ಚರಿಕೆ ಕೊಟ್ಟಿದ್ದಾರೆ.

ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಹೈಕಮಾಂಡ್ ಏನು ನಿರ್ಧರಿಸುತ್ತದೆ ಅನ್ನೋದನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಅದು ಪಕ್ಷದ ಹೈಕಮಾಂಡ್ ಕೈಯಲ್ಲಿದೆ.

ಅದು ಹೈಕಮಾಂಡ್‌ಗೆ ಬಿಟ್ಟಿದ್ದು. ಮುಂದಿನ ಕ್ರಮ ತೆಗೆದುಕೊಳ್ಳುವ ಅಧಿಕಾರ ಹೈಕಮಾಂಡ್‌ಗೆ ಇದೆ. ಆದರೆ ಯಾರೂ ಅನಗತ್ಯವಾಗಿ ಸಮಸ್ಯೆಗಳನ್ನು ಸೃಷ್ಟಿಸಬಾರದು ಎಂದು ಎಚ್ಚರಿಕೆ ನೀಡಿದ್ದಾರೆ.

# ಹಳ್ಳ ಹಿಡಿದ 13 ಕೋಟಿ ರೂ ವೆಚ್ಚದ ಬಿಬಿಎಂಪಿ ಪಾಲಿಕೆ ಬಜಾರ್ ಯೋಜನೆ!

## ಸುಮಾರು ಏಳು ವರ್ಷ ತೆಗೆದುಕೊಂಡರೂ, 79 ಅಂಗಡಿಗಳನ್ನು ಅಧಿಕೃತವಾಗಿ ಹಂಚಿಕೆ ಮಾಡಲು ಬಿಬಿಎಂಪಿ ಇನ್ನೂ ಟೆಂಡರ್ ಕರೆದಿಲ್ಲ

• ಉದಯವಾಹಿನಿ, ಬೆಂಗಳೂರು

**ಒಂದು ವರ್ಷದ ಹಿಂದೆ ಅತ್ಯಂತ ಉತ್ಸಾಹ**

ದಕ್ಷಿಣ ಭಾರತದ ಮೊದಲ ಹವಾನಿಯಂತ್ರಿತ ಭೂಗತ ಮಾರುಕಟ್ಟೆ' ಎಂಬ ಹೆಸರಿನೊಂದಿಗೆ ಸುಮಾರು ಒಂದು ವರ್ಷದ ಹಿಂದೆ ಅತ್ಯಂತ ಉತ್ಸಾಹದಿಂದ ಆರಂಭಿಸಲಾದ ವಿಜಯನಗರದ ಕೃಷ್ಣದೇವರಾಯ ಪಾಲಿಕೆ ಬಜಾರ್ ಯೋಜನೆ ಹಳ್ಳ ಹಿಡಿದಿದೆ.

ರೂ. 13 ಕೋಟಿಯ ಯೋಜನೆ ಪೂರ್ಣಗೊಳ್ಳಲು ಸುಮಾರು ಏಳು ವರ್ಷ ತೆಗೆದುಕೊಂಡರೂ, 79 ಅಂಗಡಿಗಳನ್ನು ಅಧಿಕೃತವಾಗಿ ಹಂಚಿಕೆ ಮಾಡಲು ಬಿಬಿಎಂಪಿ ಇನ್ನೂ ಟೆಂಡರ್ ಕರೆದಿಲ್ಲ. ಇದೇ ವೇಳೆ ಸುಮಾರು 25 ಮಂದಿ ಮಾರಾಟಗಾರರು ಅಕ್ರಮವಾಗಿ ಮಳಿಗೆ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಆದರೆ ವ್ಯಾಪಾರವೇ ಆಗದೇ ನಷ್ಟದಲ್ಲಿದ್ದಾರೆ.

ಈ ಮಾರುಕಟ್ಟೆಯನ್ನು ನಮಗಾಗಿ ನಿರ್ಮಿಸಲಾಗಿದೆ, ಆದರೆ ನಮ್ಮನ್ನು ಹೊರಗಿಡಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾ ಬೀದಿ ವ್ಯಾಪಾರಿಗಳ ಸಂಘದ ದೇವರಾಜ್ ಎಂ ಹೇಳಿದರು. 2021 ರಲ್ಲಿ ಬೀದಿ ವ್ಯಾಪಾರಿಗಳ ಸಮೀಕ್ಷೆ ನಡೆಸಲಾಗಿತ್ತು.

ಆದರೆ ನಮಗೆ ಯಾರಿಗೂ ಅಂಗಡಿಗಳನ್ನು ನೀಡಿಲ್ಲ. ಬದಲಾಗಿ ವಿಜಯನಗರದಲ್ಲಿ ಇಲ್ಲದ, ಬೇರೆಯವರು ಬಂದುಯಾವುದೇ ಪ್ರಕ್ರಿಯೆ ಇಲ್ಲದೆ ಮಳಿಗೆಗಳನ್ನು ಪಡೆದಿದ್ದಾರೆ ಎಂದು ಆರೋಪಿಸಿದರು.

**ಬೇರೆ ಏರಿಯಾದವರಿಂದ ಅಕ್ರಮವಾಗಿ ಮಳಿಗೆ ಒತ್ತುವರಿ:** ವಿಜಯನಗರದ ಜನನಿಬಿಡ ಸರ್ವಿಸ್ ರಸ್ತೆಯಿಂದ ಬೀದಿ ವ್ಯಾಪಾರಿಗಳನ್ನು ಸ್ಥಳಾಂತರಿಸಲು ಮಾರುಕಟ್ಟೆ ಸ್ಥಾಪಿಸಲಾಯಿತು. 2021 ರಲ್ಲಿ ಸುಮಾರು 30 ಮಾರಾಟಗಾರರನ್ನು ಅಲ್ಲಿಗೆ ಸ್ಥಳಾಂತರಿಸಲು ಬಿಬಿಎಂಪಿ ಗುರುತಿಸಿತ್ತು. ಆದರೆ ಅಧಿಕೃತವಾಗಿ ಸರ್ವೆ ಮಾಡಿದವರ ಬದಲು ಬೇರೆ ಬೇರೆ ವರ್ತಕರು ಈಗ ಮಳಿಗೆಗಳನ್ನು ಒತ್ತುವರಿ ಮಾಡಿಕೊಂಡಿದ್ದು, ತಮಗೆ ಹೇಗೆ ಮಳಿಗೆ ಹಂಚಿಕೆಯಾಗಲಿದೆ ಎಂಬ ಬಗ್ಗೆ ಸ್ಪಷ್ಟತೆಯಾಗಲಿ ಇಲ್ಲ. ರಾಜಕೀಯ ಮುಖಂಡರೊಬ್ಬರ ಮೂಲಕ ಮಾಡಿದ ಮನವಿಯ ಮೇರೆಗೆ ಬಿಬಿಎಂಪಿ ಅನುಮತಿ ನೀಡಿದೆ ಎಂದು ಕೆಲವು ಮಾರಾಟಗಾರರು ಹೇಳಿಕೊಂಡಿದ್ದಾರೆ. ಆದರೆ ಅವರು ಯಾರಿಗೆ ಬಾಡಿಗೆ ಪಾವತಿಸುತ್ತಿದ್ದಾರೆ ಎಂದು ಹೇಳಲು ನಿರಾಕರಿಸಿದರು.




**ಎಷ್ಟೋ ಜನರಿಗೆ ಪಾಲಿಕೆ ಬಜಾರ್ ಬಗ್ಗೆ ತಿಳಿದಿಲ್ಲ:** ಈಗ ಮಾರುಕಟ್ಟೆಯೊಳಗೆ ವ್ಯಾಪಾರ ಮಾಡುತ್ತಿರುವವರಿಗೂ ಲಾಭವಾಗುತ್ತಿಲ್ಲ. ಬಹಳ ಕಡಿಮೆ ಜನರು ಅಲ್ಲಿಗೆ ಬರುತ್ತಿದ್ದು, ಪ್ರತಿದಿನ ನಷ್ಟವನ್ನು ಅನುಭವಿಸುತ್ತಿದ್ದಾರೆ.

ಹೊಸ ಮಾರುಕಟ್ಟೆಯನ್ನು ಉತ್ತೇಜಿಸುಲ್ಲಿ ಬಿಬಿಎಂಪಿ ಮತ್ತು ಸರ್ಕಾರ ವಿಫಲವಾಗಿದೆ ಎಂದು ವ್ಯಾಪಾರಿಗಳು ಆರೋಪಿಸುತ್ತಾರೆ. ಪಾಲಿಕೆ ಬಜಾರ್ ಬಗ್ಗೆ ಎಷ್ಟೋ ಜನರಿಗೆ ತಿಳಿದಿಲ್ಲ. ಯಾವುದೇ ಸೂಚನಾ ಫಲಕಗಳಿಲ್ಲ. ಅದರ ಮೇಲೆ ಪ್ರವೇಶದ್ವಾರದ ಹೊರಗಿನ ವೈಟ್-ಟಾಪ್ ಕೆಲಸದಿಂದ ಅದರೊಳಗೆ ಹೋಗದಂತಾಗಿದೆ ಎಂದು ಮಾರಾಟಗಾರರಲ್ಲಿ ಒಬ್ಬರಾದ ಸುರೇಶ್ ಹೇಳಿದರು.

ಈಗ ರಸ್ತೆ ನಿರ್ಮಾಣದ ಕೆಲಸ ಮಾಡುವ ಅಗತ್ಯ ಏನು ಈಗ ರಸ್ತೆ ಕಾಮಗಾರಿಯ ಅಗತ್ಯವೇನಿತ್ತು ಅದರ ಅಗತ್ಯವಿದ್ದರೆ ಉದ್ಘಾಟನೆಗೆ ಮುಂಚೆಯೇ ಅದನ್ನು ಯಾಕೆ ಮಾಡಲಿಲ್ಲ ಎಂದು ಮತ್ತೊಬ್ಬ ಮಾರಾಟಗಾರ ಪ್ರಸಾದ್ ಕೆ. ಪ್ರಶ್ನಿಸಿದರು.

ಇದನ್ನು ಮಾಡುವಹೊತ್ತಿಗೆ ಸಾರ್ವಜನಿಕರು ಮಾರುಕಟ್ಟೆಯ ಬಗ್ಗೆ ಮರೆತು ಬಿಡುತ್ತಾರೆ. ಈಗ ರಸ್ತೆಗಳನ್ನು ಅಗೆಯುವ ಬದಲು, ಮಾರುಕಟ್ಟೆಯನ್ನು ಉತ್ತೇಜಿಸಲು ಮತ್ತು ಮಳಿಗೆಗಳನ್ನು ಸರಿಯಾಗಿ ಭರ್ತಿ ಮಾಡಲು ಸರ್ಕಾರ ಗಮನಹರಿಸಬೇಕು ಎಂದು ಅವರು ಒತ್ತಾಯಿಸಿದರು.

### ಬಿಬಿಎಂಪಿ ಅಧಿಕಾರಿಗಳು ಹೇಳಿದ್ದು ಏನು

**ಅಂಗಡಿ ಹಂಚಿಕೆಗೆ ಶೀಘ್ರದಲ್ಲಿಯೇ ಟೆಂಡರ್ ಕರೆಯಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ಖಿಓಖಇ ಗೆ ತಿಳಿಸಿದ್ದಾರೆ. ಆದರೆ ಪ್ರಸ್ತುತ ಅಲ್ಲಿ ಮಳಿಗೆ ಪಡೆದವರು ಹೇಗೆ ಬಂದರು ಎಂಬುದನ್ನು ಸ್ಪಷ್ಟಪಡಿಸಿಲ್ಲ. ಅಲ್ಲಿ ವ್ಯಾಪಾರ ಮಾಡುತ್ತಿರುವವರು ವಿಜಯನಗರದವರಲ್ಲ. ಅವರು ಈ ಹಿಂದೆ ಗುರುತಿಸಲಾದ ಮೂಲ ಪಟ್ಟಿಯಲ್ಲಿ ಇಲ್ಲ. ಅವರು ಅಧಿಕೃತ ವ್ಯಾಪಾರಗಳು ಅಲ್ಲ ಎಂದು ಸಂಕೀರ್ಣದ ಹೊರಗೆ ಕಾರ್ಯನಿರ್ವಹಿಸುತ್ತಿರುವ ವ್ಯಾಪಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದೇ ರೀತಿ ಮುಂದುವರಿದರೆ ಇಡೀ ಯೋಜನೆಯೇ ಹಾಳಾಗಲಿದ್ದು, ಬಿಬಿಎಂಪಿ ಕ್ರಮ ಕೈಗೊಳ್ಳಬೇಕು ಎಂದು ದೇವರಾಜ್ ಒತ್ತಾಯಿಸಿದರು.**

# ಶಾಲೆಗೆ ಜೀವ ತುಂಬಿದ ನರೇಗಾ

## ದುಡಿಯುವ ಕೈಗಳಿಗೆ ಕೆಲಸ ನೀಡುವ ಉದ್ದೇಶದಿಂದ ಜಾರಿಗೊಳಿಸಿದ ನರೇಗಾ ಯೋಜನೆ

• **ಉದಯವಾಹಿನಿ, ತುಮಕೂರು**

ಅಳಿವಿನ ಅಂಚಿನಲ್ಲಿದ್ದ, ಶಿಥಿಲಾವಸ್ಥೆಗೆ ತಲುಪಿದ್ದ, ಮಳೆ ಬಂದರೆ ತೊಟ್ಟಿಕ್ಕುತ್ತಿದ್ದ, ಸುಣ್ಣ-ಬಣ್ಣವಿಲ್ಲದೆ ಅಂದ ಕಳೆದುಕೊಂಡಿದ್ದ ಶಾಲೆಗಳಿಗೆ ನರೇಗಾ ಯೋಜನೆ ಜೀವ ತುಂಬಿದೆ. ಯೋಜನೆಯಡಿ ಜಿಲ್ಲೆಯಲ್ಲಿ ಶಾಲಾಭಿವೃದ್ಧಿಗೆ ವರ್ಷದಲ್ಲಿ ರೂ.122 ಕೋಟಿ ವ್ಯಯಿಸಲಾಗಿದೆ. ಶಾಲೆಗಳ ಸಮಗ್ರ ಅಭಿವೃದ್ಧಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆ ಬಲತಂದುಕೊಟ್ಟಿದೆ. ಜಿಲ್ಲೆಯ ಸಾವಿರಾರು ಶಾಲೆಗಳಿಗೆ ಕಾಯಕಲ್ಪ ನೀಡಲಾಗಿದೆ. 2024-25ನೇ ಸಾಲಿನಲ್ಲಿ 3,660 ಶಾಲಾಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು.

906 ಆಟದ ಮೈದಾನ, 1,360 ಕಾಂಪೌಂಡ್, 1,394 ಶೌಚಾಲಯ ನಿರ್ಮಿಸಲಾಗಿದೆ. ಮತ್ತಷ್ಟು ಶಾಲೆಗಳ ದುರಸ್ತಿಗೆ ಯೋಜನೆ ರೂಪಿಸಲಾಗಿದೆ. ಶಾಲಾಭಿವೃದ್ಧಿ ಕಾಮಗಾರಿಗಳಿಂದ ಹೆಚ್ಚಿನ ಮಾನವ ದಿನಗಳ ಸೃಜನೆ ಸಾಧ್ಯವಾಗಿದೆ. ದುಡಿಯುವ ಕೈಗಳಿಗೆ ಕೆಲಸ ನೀಡುವ ಉದ್ದೇಶದಿಂದ ಜಾರಿಗೊಳಿಸಿದ ನರೇಗಾ ಯೋಜನೆ ಬಡವರ ಬದುಕು ಬೆಳಗುತ್ತಿದೆ. ಕಳೆದ ಆರ್ಥಿಕ ವರ್ಷದಲ್ಲಿ ಶಾಲಾಭಿವೃದ್ಧಿ ಕಾಮಗಾರಿಗಳಿಂದ ಒಟ್ಟು 3.32 ಲಕ್ಷ ಮಾನವ ದಿನ ಸೃಜಿಸಲಾಗಿದೆ. ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚಿನ ಮಾನವ ದಿನಗಳ ಸೃಜನೆಯಲ್ಲಿ ಜಿಲ್ಲೆ ಮೊದಲ ಸ್ಥಾನ ಪಡೆದಿದೆ. ರಾಜ್ಯ ಮಟ್ಟದ ಪ್ರಶಸ್ತಿಯೂ ಲಭಿಸಿದೆ. ಬರ ಪೀಡಿತ ತಾಲ್ಲೂಕುಗಳ ಜನರ ಬದುಕು ಹಸನಾಗಿಸುವುದರ ಜತೆಗೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲು ಯೋಜನೆ ಸಹಕಾರಿಯಾಗಿದೆ.

**ಕ್ರೀಡೆಯ ಆಸಕ್ತಿ:** ಗ್ರಾಮೀಣ ಭಾಗದ ಬಹುತೇಕ ಶಾಲೆಗಳಲ್ಲಿ ಅಭ್ಯಾಸಕ್ಕೆ ಪೂರಕವಾದ ಆಟದ ಮೈದಾನವಿಲ್ಲದೆ ಮಕ್ಕಳು ಕ್ರೀಡೆಗಳಿಂದ ಹಿಮ್ಮುಖವಾಗುತ್ತಿದ್ದರು. ಕೊಠಡಿಗಳಿಗೆ ಸೀಮಿತವಾಗಿದ್ದರು. ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಿದರೂ, ಅಭ್ಯಾಸಕ್ಕೆ ಮೈದಾನವಿಲ್ಲದೆ ಶಾಲೆಗಳಲ್ಲಿಯೇ ಉಳಿಯುತ್ತಿದ್ದರು. ಜಿಲ್ಲಾ ಪಂಚಾಯಿತಿ ಅಗತ್ಯ ಇರುವ ಶಾಲೆಗಳನ್ನು ಗುರುತಿಸಿ




ಒಟ್ಟು 906 ಕಡೆಗಳಲ್ಲಿ ಮೈದಾನ ಅಭಿವೃದ್ಧಿ ಪಡಿಸಲಾಗಿದೆ. ವಾಲಿಬಾಲ್, ಥ್ರೋಬಾಲ್, ಬ್ಯಾಡ್ಮಿಂಟನ್, ಕಬಡ್ಡಿ ಅಂಕಣ ಸಿದ್ಧವಾಗಿದೆ. ಇದರಿಂದ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವ ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ. ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗುತ್ತಿದೆ. ಶಾಲೆ ಆವರಣಗಳು ರಾತ್ರಿ ಸಮಯದಲ್ಲಿ ಅನೈತಿಕ ಚಟುವಟಿಕೆ ತಾಣಗಳಾಗುತ್ತಿದ್ದವು. ಇದನ್ನು ತಡೆಯುವುದು ಶಿಕ್ಷಕರಿಗೂ ಸವಾಲಾಗಿತ್ತು. ನರೇಗಾ ಯೋಜನೆಯಡಿ ಕಾಂಪೌಂಡ್ ನಿರ್ಮಿಸಿದ ನಂತರ ಶಾಲಾ ಆವರಣದಲ್ಲಿ ಪುಂಡರ ಹಾವಳಿ ತಪ್ಪಿದೆ. ಹಿಂದೆ ಮದ್ಯದ ಬಾಟಲಿಗಳು ಆವರಣದಲ್ಲಿಯೇ ಎಸೆದು ಹೋಗುತ್ತಿದ್ದರು. ಈಗ ಎಲ್ಲಾ ಚಟುವಟಿಕೆ ನಿಯಂತ್ರಣಕ್ಕೆ ಬಂದಿವೆ.

**1200 ಕೊಠಡಿ ದುರಸ್ತಿ ಗುರಿ:** ಜಿಲ್ಲೆಯ ಶಾಲೆಗಳಲ್ಲಿ 600 ಹೊಸ ಕೊಠಡಿಗಳ ಅಗತ್ಯವಿದೆ. ನರೇಗಾ ಹೊರೆತುಪಡಿಸಿ ಇತರೆ ಯೋಜನೆಗಳಲ್ಲಿ ಇದುವರೆಗೆ 400 ಕೊಠಡಿ ನಿರ್ಮಿಸಲಾಗಿದೆ. ಈ ವರ್ಷ ಉಳಿದ 200 ಕೊಠಡಿಗಳ ನಿರ್ಮಾಣ ಕಾರ್ಯ ನಡೆಯಲಿದೆ. ಎರಡು ಶೈಕ್ಷಣಿಕ ಜಿಲ್ಲೆಗಳ 15 ಸಾವಿರ ಕೊಠಡಿಗಳ ಪೈಕಿ 1900 ಕೊಠಡಿ ದುರಸ್ತಿಗೆ ಕಾಯುತ್ತಿವೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ 1200 ಕೊಠಡಿ ದುರಸ್ತಿಯ ಗುರಿ ಹೊಂದಲಾಗಿದೆ. ಅಂಗನವಾಡಿ ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಜಿ.ಪಂ ಯೋಜನೆ ರೂಪಿಸಿದೆ. ಈಗಾಗಲೇ 90 ಹೊಸ ಅಂಗನವಾಡಿ ಕಟ್ಟಡ ನಿರ್ಮಿಸಲಾಗಿದ್ದು 120 ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

**ಶಾಲಾಭಿವೃದ್ಧಿ ಸಂಕಲ್ಪ:** ಈ ಬಾರಿಯೂ 42 ಲಕ್ಷ ಮಾನವ ದಿನ ಸೃಜನೆಯ ಗುರಿ ನಿಗದಿ ಪಡಿಸಲಾಗಿದೆ. ಶಾಲೆಗಳ ಸಂಪೂರ್ಣ ಅಭಿವೃದ್ಧಿಗೆ ಸಂಕಲ್ಪ ತೊಡಲಾಗಿದೆ. ಬಾಕಿ ಉಳಿದಿರುವ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲು ಜಿ.ಪಂ ಮುಂದಾಗಿದೆ. ಮುಂದಿನ ಒಂದು ವರ್ಷದಲ್ಲಿ 984 ಶೌಚಾಲಯ 810 ಆಟದ ಮೈದಾನ 1231 ಶಾಲಾ ಕಾಂಪೌಂಡ್ ನಿರ್ಮಾಣಕ್ಕೆ ಕ್ರಿಯಾ ಯೋಜನೆ ತಯಾರಿಸಲಾಗಿದೆ. ಎಲ್ಲಾ ಕಾಮಗಾರಿಗಳು ನಿಗದಿತ ಸಮಯಕ್ಕೆ ಶುರುವಾಗಿ ಸಕಾಲಕ್ಕೆ ಪೂರ್ಣಗೊಂಡರೆ ಶಾಲೆಗಳ ಹಲವು ವರ್ಷಗಳ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

### ಹೊಸ ಪರಿಕಲ್ಪನೆ

**ದುಡಿಯುವ ಕೈಗೆ ಕೂಲಿ ಕೊಡುವುದರ ಜತೆಗೆ ಸ್ಥಳೀಯ ಸಂಪನ್ಮೂಲ ಅಭಿವೃದ್ಧಿಯ ಪರಿಕಲ್ಪನೆಯೊಂದಿಗೆ ನರೇಗಾದಲ್ಲಿ ಕೆಲಸ ಮಾಡಲಾಗುತ್ತಿದೆ. ಸಮಗ್ರ ಶಾಲಾಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ನರೇಗಾ ವಿವೇಕ ಯೋಜನೆ ಜಿಲ್ಲಾ ಪಂಚಾಯಿತಿ ಅನುದಾನದಡಿ ಶಾಲೆಯ ಚಿತ್ರಣವೇ ಬದಲಾಗುತ್ತದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು ವಿಶ್ವಾಸದ ಮಾತುಗಳನ್ನಾಡಿದರು. ಕಳೆದ ಒಂದು ವರ್ಷದಲ್ಲಿ 122 ಕೋಟಿ ನರೇಗಾ ಯೋಜನೆ 52 ಕೋಟಿ ವಿವೇಕ ಯೋಜನೆ 45 ಕೋಟಿ ಜಿಲ್ಲಾ ಪಂಚಾಯಿತಿ ಅನುದಾನ ಮತ್ತು ಇತರೆ ಇಲಾಖೆಗಳ ಅನುದಾನ ಸೇರಿ ಸುಮಾರು 250 ಕೋಟಿ ಹಣ ಶಾಲೆಗಳ ಅಭಿವೃದ್ಧಿಗೆ ವೆಚ್ಚ ಮಾಡಲಾಗಿದೆ ಎಂದು ವಿವರಿಸಿದರು.**

---

# ಚಿಕ್ಕನಾಯಕನಹಳ್ಳಿ: ಹಕ್ಕುಪತ್ರ ಸಿಗದೆ ಕಂಗಾಲಾದ ಕಾರ್ಮಿಕರು



• **ಉದಯವಾಹಿನಿ, ಚಿಕ್ಕನಾಯಕನಹಳ್ಳಿ**

ಶೆಟ್ಟಿಕೆರೆ ಗ್ರಾಮದಲ್ಲಿ ವಾಸವಿರುವ ಕೂಲಿಗಾರ ಕುಟುಂಬಗಳಿಗೆ ನಿವೇಶನ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿ ಭಾರತೀಯ ಕಿಸಾನ್ (ರೈತ) ಸಂಘದ ಅಧ್ಯಕ್ಷ ಎಚ್.ಆರ್ ಬೋಜರಾಜು ನೇತೃತ್ವದಲ್ಲಿ ಮುಖ್ಯಮಂತ್ರಿಗೆ ಅಂಚೆ ಮೂಲಕ ಮನವಿ ನೀಡಲಾಯಿತು. ಸೋಮವಾರ ಅಂಚೆ ಕಚೇರಿ ಮುಂಭಾಗ ಭಾರತೀಯ ಕಿಸಾನ್ (ರೈತ) ಸಂಘ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ನೊಂದ ನಿವೇಶನ ರಹಿತ ಕೂಲಿಕಾರರು ಸುದ್ದಿಗೋಷ್ಠಿ ನಡೆಸಿದರು. ಶೆಟ್ಟಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರದ ಸ್ವಾಧೀನದಲ್ಲಿರುವ 2 ಎಕರೆ 20 ಗುಂಟೆ ಜಮೀನಿದೆ. 70 ವರ್ಷಗಳಿಂದ ದಲಿತ ಕುಟುಂಬಗಳು ವಸತಿ ವಂಚಿತರಾಗಿ ಜೀವನ ನಡೆಸುತ್ತಿದ್ದಾರೆ. ರಾಷ್ಟ್ರೀಯ ಕಿಸಾನ್ ಪಕ್ಷದ ಅಧ್ಯಕ್ಷ ಬೋಜರಾಜು ಮಾತನಾಡಿ, ಶೆಟ್ಟಿಕೆರೆ ಗ್ರಾಮದಲ್ಲಿ ಕೂಲಿ ಕಾರ್ಮಿಕರು, ನಿರ್ಗತಿಕರು, ದಲಿತರು ವಾಸವಿದ್ದಾರೆ. ವಾಸವಿರುವ 20 ಮನೆಗೆ ಹಕ್ಕುಪತ್ರ ನೀಡದೆ ಬಲಾಢ್ಯರಿಗೆ ಹಕ್ಕುಪತ್ರ ನೀಡಿದ್ದಾರೆ.

ನೀರು, ವಿದ್ಯುತ್ ಸಂಪರ್ಕ ಕಲ್ಪಿಸಿದ್ದಾರೆ. ಆದರೆ ಹಕ್ಕುಪತ್ರ ನೀಡಿಲ್ಲ ಎಂದರು. ಅಲ್ಲಿನ ನಿರ್ಗತಿಕರಿಗೆ ಶೀಘ್ರವೇ ಹಕ್ಕುಪತ್ರ ನೀಡಬೇಕು. ಗ್ರಾಮ ಪಂಚಾಯಿತಿ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

**ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಅಜ್ಜಪ್ಪ ಮಾತನಾಡಿ, ಪ್ರಾಂತ ರೈತ ಸಂಘ ಬಗರ್ ಹುಕುಂ, ಅರಣ್ಯ, ಗೋಮಾಳ ಹಾಗೂ ಭೂ ಸಂಬಂಧಪಟ್ಟಂತೆ ಅನೇಕ ಹೋರಾಟ ಮಾಡಿ ರೈತರಿಗೆ ನ್ಯಾಯ ದೊರಕಿಸಿಕೊಟ್ಟಿದೆ. ತಾಲ್ಲೂಕಿನಲ್ಲಿ ಅನೇಕ ನಿರ್ಗತಿಕರು ನಿವೇಶನ, ಹಕ್ಕುಪತ್ರ ಸಿಗದೇ ವಂಚಿತರಾಗಿದ್ದಾರೆ. ನಿವೇಶನ ರಹಿತ ನೊಂದ ಕೂಲಿ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ನೀಡಬೇಕು. ಇಲ್ಲವಾದಲ್ಲಿ ಹೋರಾಟಕ್ಕೆ ಸಿದ್ಧವಾಗಿದ್ದೇವೆ ಎಂದರು.**

---

## ಮಿನಿ ನ್ಯೂಸ್

### ಕಳ್ಳತನ ಮಾಡುತ್ತಿದ್ದ ದಂಪತಿ ಬಂಧನ

• **ಉದಯವಾಹಿನಿ, ಚಿಕ್ಕನಾಯಕನಹಳ್ಳಿ**

ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಾರುವೇಷ ಧರಿಸಿ ಕಳ್ಳತನ ಮಾಡುತ್ತಿದ್ದ ದಂಪತಿಯನ್ನು ಪಟ್ಟಣದ ಪೊಲೀಸರು ರಾಷ್ಟ್ರೀಯ ಹೆದ್ದಾರಿ 150 ಎ ರಸ್ತೆಯಲ್ಲಿ ಜೂನ್ 22ರಂದು ಬ್ಯಾಡರಹಳ್ಳಿ ಸಮೀಪ ಬಂಧಿಸಿದ್ದಾರೆ. ಬಂಧಿತ ಆರೋಪಿ ಉದಯ್ ಹಾಗೂ ಶಾರದಾ ಮೂಲತಃ ಹಾಸನ ಜಿಲ್ಲೆಯವರು. ರಾಜ್ಯದ ಹಲವೆಡೆ ಬೆಡ್‌ಶೀಟ್ ವ್ಯಾಪಾರ, ಬಟ್ಟೆ ವ್ಯಾಪಾರದ ನೆಪದಲ್ಲಿ ಹಲವೆಡೆ ಕಳ್ಳತನ ಮಾಡಿದ್ದು ಹೊನ್ನವಳ್ಳಿ, ಗೌರಿಬಿದನೂರು, ಶ್ರೀರಾಂಪುರ ಹಾಗೂ ರಾಜ್ಯದ ಹಲವು ಪೊಲೀಸ್ ಠಾಣೆಗಳಲ್ಲಿ ಇವರ ಮೇಲೆ ಪ್ರಕರಣ ದಾಖಲಾಗಿದೆ.

### ಕೃಷಿಯಲ್ಲಿ ಆಧುನಿಕ ಪದ್ಧತಿ

• **ಉದಯವಾಹಿನಿ, ಮೈಸೂರು**

ರೈತರು ಕೃಷಿ ಹಾಗೂ ತೋಟಗಾರಿಕೆಯಲ್ಲಿ ಆಧುನಿಕ ಪದ್ಧತಿ ಅನುಸರಿಸಿ ಉತ್ತಮ ಆದಾಯ ಕಂಡುಕೊಳ್ಳಬೇಕು' ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಸಲಹೆ ನೀಡಿದರು. ತಾಲ್ಲೂಕಿನ ಯಲಚಹಳ್ಳಿಯಲ್ಲಿರುವ ತೋಟಗಾರಿಕೆ ಕಾಲೇಜಿನ ಆವರಣದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ಸಹಯೋಗದಲ್ಲಿ ಹುಣಸೂರು ತಾಲ್ಲೂಕಿನ ಕೆಬ್ಬೆಕೊಪ್ಪಲು ಗ್ರಾಮದ ರೈತರಿಗೆ ಏರ್ಪಡಿಸಿದ್ದ ತೋಟಗಾರಿಕೆ ಆಧಾರಿತ ಕೃಷಿ ಪದ್ಧತಿಯ ತರಬೇತಿ ಮತ್ತು ಪರಿಕರಗಳ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯ ಬರುವಂತಹ ಬೆಳೆಗಳನ್ನು ಬೆಳೆಯುವ ಕಡೆಗೆ ರೈತರು ಗಮನ ಕೊಡಬೇಕು' ಎಂದು ಸಲಹೆ ನೀಡಿದರು.

ಪ್ರಸ್ತುತ ದಿನಗಳಲ್ಲಿ ಬೇಸಾಯ ಕಷ್ಟದ ಕೆಲಸವಾಗಿದೆ. ಏನೇ ಕಷ್ಟವಾದರೂ ಭೂಮಿ ತಾಯಿಯನ್ನು ನಂಬಿಕೊಂಡು ಬಿತ್ತನೆ ಮಾಡುತ್ತೇವೆ. ಭೀಕರ ಬರಗಾಲ ಬಂದಾಗ ಒಣಗುತ್ತದೆ. ಒಂದೊಮ್ಮೆ ಮಳೆ ಜಾಸ್ತಿಯಾದರೂ ತೊಂದರೆ ಆಗುತ್ತದೆ. ಆದರೆ, ತೋಟಗಾರಿಕೆ ಬೆಳೆಯಲ್ಲಿ ಈ ರೀತಿ ಆಗುವುದಿಲ್ಲ' ಎಂದರು.

ದಾಳಿಂಬೆ, ಸಪೋಟ, ಪಪ್ಪಾಯಿ ಬೆಳೆಗಳನ್ನು ಸುಲಭವಾಗಿ ಬೆಳೆಯಬಹುದು. ಕಡಿಮೆ ಅವಧಿಯಲ್ಲಿ ಹೆಚ್ಚಿನ ಆದಾಯವೂ ಬರುತ್ತದೆ' ಎಂದು ತಿಳಿಸಿದರು.

### ವಾರಾಹಿ, ಮಾರಮ್ಮ ಜಾತ್ರಾ ಮಹೋತ್ಸವಕ್ಕೆ ಚಾಲನೆ

• **ಉದಯವಾಹಿನಿ, ಎಚ್.ಡಿ.ಕೋಟೆ**

ಗಣಪತಿ ಹೋಮ, ಪೂಜೆ ಮಾಡುವ ಮೂಲಕ ಪಟ್ಟಣದಲ್ಲಿರುವ ವಾರಾಹಿ ಮಾರಮ್ಮನವರ ಜಾತ್ರಾ ಮಹೋತ್ಸವಕ್ಕೆ ಅಧಿಕೃತವಾಗಿ ಸೋಮವಾರದಿಂದ ಚಾಲನೆ ನೀಡಲಾಯಿತು. ಜಾತ್ರೆಯ ಅಂಗವಾಗಿ ದೇವಸ್ಥಾನದ ಸುತ್ತಲೂ ವಿವಿಧ ಫಲ-ಪುಷ್ಪಗಳಿಂದ ವಿಶೇಷವಾದ ಅಲಂಕಾರವನ್ನು ಮಾಡಿದ್ದು, ಬಾಳೆಕಂದು, ಮಾವಿನ ತೋರಣ, ರಂಗೋಲಿ ಸೇರಿದಂತೆ ವಿವಿಧ ಅಲಂಕಾರಗಳಿಂದ ಕಂಗೊಳಿಸುತ್ತಿದ್ದ ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆದವು. ಭಕ್ತರಿಗೆ ದೇವಸ್ಥಾನದ ಆವರಣದಲ್ಲಿ ಪೂಜೆ ನೆರವೇರಿಸಲು ಅವಕಾಶ ಮಾಡಿಕೊಟ್ಟಿದ್ದರು. ಸಾರ್ವಜನಿಕರು ಸಾಗರೋಪಾದಿಯಲ್ಲಿ ಆಗಮಿಸಿ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದರು.

ಒಂಬತ್ತು ವರ್ಷಗಳ ಹಿಂದೆ ನಡೆದಿದ್ದ ಜಾತ್ರೆ ಈ ವರ್ಷ ನಡೆಯುತ್ತಿರುವುದು ಗ್ರಾಮದ ಜನತೆಯಲ್ಲಿ ಹರ್ಷ ಮತ್ತು ಸಂತೋಷವನ್ನುಂಟು ಮಾಡಿದೆ. ಜಾತ್ರೆಯ ಮಹೋತ್ಸವದ ಮೊದಲ ದಿನವಾದ ಸೋಮವಾರ ಮೈಸೂರು ಅರಮನೆ ತಂಪು ಹೆಸರಿನಲ್ಲಿ ನಡೆಯುವ ತಂಪು ಸೇವೆ ನೆರವೇರಿಸಲಾಯಿತು. ತಹಶೀಲ್ದಾರ್ ಅವರನ್ನು ಮೆರವಣಿಗೆಯ ಮೂಲಕ ದೇವಸ್ಥಾನಕ್ಕೆ ಕರೆತಂದು ತಂಪು ಪೂಜೆಯನ್ನು ಸಂಜೆ ಮಾಡಲಾಯಿತು ಎಂದು ಪಟೇಲ್ ನಾಗರಾಜು ತಿಳಿಸಿದರು. ಇಲ್ಲಿನ ಸಂಪ್ರದಾಯದಂತೆ ತಾರಕ ನದಿಯ ಬಳಿ ಮಾರಮ್ಮನವರ ಪತಿ ಎಂದು ಕರೆಯುವ ಪೋಟೋರಾಯ ಸ್ವಾಮಿಯನ್ನು ಪೂಜಿಸಿ ದೇವಸ್ಥಾನದ ಬಳಿಗೆ ತಂದು ಪ್ರತಿಷ್ಠಾಪಿಸಲಾಗುವುದು, ನಂತರ ಜಾತ್ರಾ ಮಹೋತ್ಸವಗಳು ತಯಾರಿಗಳನ್ನು ಮಾಡಿಕೊಳ್ಳುತ್ತಾರೆ. ವರಾಹಿ ಮತ್ತು ಮಾರಮ್ಮನವರ ಜಾತ್ರಾ ಮಹೋತ್ಸವ ಹಾಗೂ ಕೊಂಡೋತ್ಸವವನ್ನು 9 ವರ್ಷಗಳ ನಂತರ ಅದ್ದೂರಿಯಾಗಿ ಆಚರಿಸಲು ಪಟ್ಟಣದ ಜನತೆ ಸಜ್ಜಾಗಿದ್ದಾರೆ. ಜಾತ್ರೆಯು ಜುಲೈ 2ರವರೆಗೆ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಪೂಜೆಗಳು ನಡೆಯಲಿವೆ. ಪಟ್ಟಣದ ಮನೆ ಮನೆಗಳು, ದೇಗುಲಗಳು ವಿದ್ಯುತ್ ದೀಪಾಲಂಕಾರ, ಸುಣ್ಣ ಬಣ್ಣಗಳಿಂದ ಸಿಂಗಾರಗೊಳ್ಳುತ್ತಿವೆ. ಕೊಂಡೋತ್ಸವಕ್ಕೆ ಕೊಂಡ ಸಜ್ಜುಗೊಳಿಸಲು ಕಗ್ಗಲಿ ಸೌದೆಯನ್ನು ಈಗಾಗಲೇ ಸಂಗ್ರಹಿಸಲಾಗಿದೆ. ಮಂಗಳವಾರ ದಿನ ರಾತ್ರಿ 9 ಗಂಟೆಗೆ ಮಡೆ ಹಾಗೂ ಕೊಂಡದ ಕಗ್ಗಲಿ ಸೌದೆಗೆ ಅಗ್ನಿ ಸ್ಪರ್ಶ ಮಾಡಲಾಗುತ್ತದೆ. ಜು. 2ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಕೊಂಡ ಹಾಯುವ ಕಾರ್ಯಕ್ರಮ ನಡೆಯಲಿದೆ.



---

# ಕೋಲಾರದ ಮಾನ ಮರ್ಯಾದೆ ಹರಾಜು: ಶಾಸಕಿ ರೂಪಕಲಾ

• **ಉದಯವಾಹಿನಿ, ಕೋಲಾರ**

ರಾಜಕೀಯದಲ್ಲಿರುವ ಪ್ರಭಾವಿ ನಾಯಕರು ಜಿಲ್ಲೆಯ ಮಾನ ಮರ್ಯಾದೆ ಹರಾಜು ಹಾಕುತ್ತಿದ್ದಾರೆ' ಎಂದು ಕೆಜಿಎಫ್ ಕಾಂಗ್ರೆಸ್ ಶಾಸಕಿ ರೂಪಕಲಾ ಶಶಿಧರ್ ಆಕ್ರೋಶ ವ್ಯಕ್ತಪಡಿಸಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲೆಗೆ ಏಕೆ ಈ ಗತಿ ಬಂದಿದೆ ಮುಂದೆ ಯಾವ ಪರಿಸ್ಥಿತಿ ಬರಬಹುದು ರಾಜಕೀಯ ಅಸೂಯೆ, ದ್ವೇಷ ಏಕೆ ತಮ್ಮ ಮುಂದೆ ಯಾರೂ ಬೆಳೆಯಬಾರದೇ ಜನರು ಆಶೀರ್ವಾದ ಮಾಡಿದರೂ ತಮಗೆ ಅಷ್ಟೊಂದು ಹಿಂಸೆ ಆಗುತ್ತಿದೆಯೇ ಎಂದು ಪ್ರಶ್ನಿಸಿದರು.

ರೈತರು, ಬಡವರು ಕಟ್ಟಿದ ಎರಡು ಸಹಕಾರಿ ಸಂಸ್ಥೆಗಳನ್ನು ಉಳಿಸುವಲ್ಲಿ ರಾಜಕೀಯ ನಾಯಕರು, ಪ್ರಭಾವಿಗಳು ಎಷ್ಟು ಸಕ್ರಿಯವಾಗಿ ಕೆಲಸ ಮಾಡಿದ್ದಾರೆ ಯೋಜನೆ ಮಾಡಿ. ರೈತರು, ಬಡವರ ಕಷ್ಟಗಳಿಗೆ ಯಾರು ಕಣ್ಣೀರು ಹಾಕಿದ್ದಾರೆ ಕಟ್ಟಿ ಮನೆ ಒಡೆದು ಹಾಕಿದರೆ ಆ ಮನೆ ಮಾಲೀಕನಿಗೆ ಎಷ್ಟು ನೋವಾಗುವುದಿಲ್ಲ ಹೇಳಿ' ಎಂದು ಬೇಸರ ವ್ಯಕ್ತಪಡಿಸಿದರು.

'ಕೆಲವರು ಅಸೂಯೆ, ದ್ವೇಷ ಸಾಧಿಸುತ್ತಿದ್ದಾರೆ. ಸಹಕಾರ ಸಂಸ್ಥೆ ಕಟ್ಟಿ ಬೆಳೆಸುವವರು ನಾಯಕರು.



ಕಟ್ಟಿದ ಸಂಸ್ಥೆಗಳನ್ನು ನೆಲಕಚ್ಚುವಂತೆ ಮಾಡಿ ಅಹಂಕಾರ ಮೆರೆಯುವುದು ನಾಯಕರ ಲಕ್ಷಣವಲ್ಲ' ಎಂದು ಹೇಳಿದರು. ಬ್ಯಾಲಹಳ್ಳಿ ಗೋವಿಂದಗೌಡರು ಕಾಂಗ್ರೆಸ್‌ನವರೇ ಅಲ್ಲ ಎಂಬ ಕೆಲ ಶಾಸಕರ ಹೇಳಿಕೆಗೆ ಪ್ರತಿಕ್ರಿಯಿಸಿ, ಜನನಾಯಕರಿಗೆ ಯಾವುದೇ ಪಕ್ಷ ಬೇಕಾಗಿಲ್ಲ. ಚುನಾವಣೆ ಸಮಯದಲ್ಲಿ ಬಳಸಿಕೊಂಡಾಗ ಅವರು ಯಾವ ಪಕ್ಷದವರಾಗಿದ್ದರು ಎಂಬುದನ್ನೇ ಅವರೇ ನಿರ್ಧಾರ ಮಾಡಲಿ. ಅವರ ಬಳಿ ಸಹಾಯ ಕೋರಿ ಹೋಗುವವರು ನಿರ್ಧಾರ ಮಾಡಲಿ' ಎಂದ 'ರಾಜಕಾರಣಿ ಮಗಳಾಗಿ ಒಮ್ಮೆ ಸೋತ ಮೇಲೆ ಜನರ ಸೇವೆ ಮಾಡಿಕೊಂಡು ನಾನು ಮುಂದೆ ಬಂದಿದ್ದೇನೆ. ನಂತರ ಅವರ ಆಶೀರ್ವಾದದಿಂದ ಮುಂದೆ ಬಂದೆ. ಇಲ್ಲದಿದ್ದರೆ ನಾನು ಏನೂ ಸಾಧನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಕೆಲವರು ನನ್ನನ್ನು ತುಳಿದು ಹಾಕುತ್ತಿದ್ದರು. ನನ್ನನ್ನು ಅವಮಾನ ಮಾಡಿದರೂ ನಾನು ಖುಷಿ ಪಡುತ್ತೇನೆ. ನನ್ನನ್ನು ಆಶೀರ್ವದಿಸುವವರಿಗೆ ನ್ಯಾಯ ಕೊಡಿಸುವುದು ನನ್ನ ಕೆಲಸ. ರೈತರು, ಮಹಿಳೆಯರಿಗೆ ನ್ಯಾಯ ಸಿಕ್ಕಬೇಕು' ಎಂದು ಹೇಳಿದರು.

---

# ಹದಗೆಟ್ಟ ಗ್ರಾಮೀಣ ರಸ್ತೆ: ಸಂಚಾರ ಆಯೋಮಯ



• **ಉದಯವಾಹಿನಿ, ಬಂಗಾರಪೇಟೆ**

ಹಿಂದುಳಿದ ಗ್ರಾಮ ಪಂ. ಎಂಬ ಹಣೆಪಟ್ಟಿಗೆ ದೋಣಿಮಡಗು ಸೇರಿದೆ. ಇಲ್ಲಿನ ಸಂಪರ್ಕ ರಸ್ತೆಗಳು ಹದಗೆಟ್ಟಿವೆ. ಮೂಲ ಸೌಕರ್ಯಗಳಿಂದ ವಂಚಿತ ಜನರು ಸುಗಮ ಸಂಚಾರವಿಲ್ಲದೆ ಜೀವ ಕೈಯಲ್ಲಿ ಹಿಡಿದು ಕೊಂಡು ಪ್ರಯಾಣಿಸುತ್ತಿದ್ದಾರೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ಕುರಿತು ನಿರ್ಲಕ್ಷ್ಯ ವಹಿಸುತ್ತಿದ್ದು, ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದ್ದಾರೆ.

**ಹದಗೆಟ್ಟ ಗ್ರಾಮೀಣ ರಸ್ತೆಗಳು:** ತಾಲ್ಲೂಕಿನ ಗಡಿ ಭಾಗದ ಮಲ್ಲೇಶ್ ಪಾಳ್ಯ, ಸಾಕರಸನಹಳ್ಳಿ, ಕದರಿನತ್ತ, ಕುಂದರಸನಹಳ್ಳಿ, ಪೋಲೇನಹಳ್ಳಿ, ತಳೂರು, ಬತ್ತಲಹಳ್ಳಿ ಆನೆಗಳ ಕಾಟ ಒಂದು ಕಡೆಯಾದರೆ ತೋಟಗಳಿಗೆ ಸಂಚರಿಸಲು ಸೂಕ್ತ ರಸ್ತೆಗಳು ಇಲ್ಲದೆ ಪರದಾಡುವ ಸ್ಥಿತಿ ಇದೆ.

ಗ್ರಾಮೀಣ ಪ್ರದೇಶದಿಂದ ಜಿಲ್ಲಾ ಮುಖ್ಯ ರಸ್ತೆ, ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು, ರೈತರ ಹೊಲಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ಹಾಳಾಗಿವೆ.

ರಸ್ತೆಯುದ್ದಕ್ಕೂ ಜಲ್ಲಿಕಲ್ಲು ರಸ್ತೆಯಲ್ಲಿ ಗುಂಡಿ ಬಿದ್ದಿವೆ. ಈ ರಸ್ತೆಯಲ್ಲಿ ಯಾವುದೇ ವಾಹನಗಳು ಸಂಚರಿಸಲು ಹಿಂದೇಟು ಹಾಕುವಂತಾಗಿದೆ. ಈ ರಸ್ತೆಯಲ್ಲಿ ಹೊಲ-ಗದ್ದೆಗಳಿಗೆ ತೆರಳುವ ಸಮಯದಲ್ಲಿ ಆನೆ ದಾಳಿ ಮಾಡಿದರೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಈ ಹಿಂದೆ ನರೇಗಾ ಯೋಜನೆಯಡಿ ರೈತರ ರಸ್ತೆ ಅಭಿವೃದ್ಧಿಪಡಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಜನಪ್ರತಿನಿಧಿಗಳು ಅಧಿಕಾರಿಗಳು ಸ್ಪಂದಿಸಿಲ್ಲ.

ಸಂಬಂಧಪಟ್ಟ ಅಧಿಕಾರಿಗಳು ಅತಿ ಜರೂರಾಗಿ ರಸ್ತೆಯನ್ನು ಶೀಘ್ರದಲ್ಲಿ ದುರಸ್ತಿ ಮಾಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

**ಚುನಾವಣೆ ಸಂದರ್ಭದಲ್ಲಿ ಮಾತ್ರ ಊರಿಗೆ ಬರುವ ಜನಪ್ರತಿನಿಧಿಗಳು ನಂತರ ಈ ಕಡೆ ತಲೆ ಹಾಕುವುದೇ ಇಲ್ಲ. ರಸ್ತೆ ಪೂರ್ಣ ಹಾಳಾಗಿದ್ದರೂ ದುರಸ್ತಿ ಮಾಡಿಸುವವರಿಲ್ಲ.**
**- ಬಸಪ್ಪ, ರೈತ ಸಾಕರಸನಹಳ್ಳಿ**

**ಸಾಕರಸನಹಳ್ಳಿ ಗ್ರಾಮದಿಂದ ಕದಿರಿನತ್ತ ಗ್ರಾಮದ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡಿ ಬಸ್ ಸಂಚರಿಸಿದರೆ ಅನುಕೂಲವಾಗುತ್ತದೆ.**
**- ಎಸ್.ಕೆ ವೆಂಕಟಸ್ವಾಮಿ, ರೈತ ಸಾಕರಸನಹಳ್ಳಿ**

**ಗಡಿ ಭಾಗದಲ್ಲಿರುವ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿ ಮಾಡುವುದರಿಂದ ರೈತರಿಗೆ ಕೃಷಿ ಮಾಡಲುತರಕಾರಿ ಮಾರುಕಟ್ಟೆಗೆ ಸಾಗಿಸಲು ಸಹಕಾರಿ.**
**- ಶಿವಕುಮಾರ್ .ಎಸ್, ಹೈನುಗಾರ**

---

# ಅರ್ಹರಿಗೆ ತಡ ಮಾಡದೆ ಸಾಲ ವಿತರಿಸಿ: ಜಿ.ಪಂ ಸಿಇಒ ಸೂಚನೆ

• **ಉದಯವಾಹಿನಿ, ಕೋಲಾರ**




ಬ್ಯಾಂಕ್‌ಗಳು ಕೇವಲ ಸಾರ್ವಜನಿಕರಿಂದ ಹಣವನ್ನು ಠೇವಣಿ ಮಾಡಿಸಿಕೊಂಡು ಲಾಭ ಮಾಡಿಕೊಳ್ಳುವ ಉದ್ದೇಶವನ್ನಷ್ಟೇ ಇಟ್ಟುಕೊಳ್ಳದೆ ಅರ್ಹರಿಗೆ ಅಗತ್ಯ ಸಾಲ ನೀಡಲು ಮುತುವರ್ಜಿ ವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಪ್ರವೀಣ್ ಪಿ.ಬಾಗೇವಾಡಿ ಹೇಳಿದರು.ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾ ಲೀಡ್ ಬ್ಯಾಂಕ್‌ನಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಬ್ಯಾಂಕರ್‌ಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಕೆಲ ಖಾಸಗಿ ಬ್ಯಾಂಕ್‌ಗಳು ನಿರ್ಲಕ್ಷ್ಯ ತೋರುತ್ತಿರುವುದು ಸರಿಯಲ್ಲ, ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ, ಸುರಕ್ಷಾ ವಿಮಾ ಯೋಜನೆ ಹಾಗೂ ಜನಧನ್ ಯೋಜನೆಯಡಿ ಅರ್ಹ ಎಲ್ಲಾ ಗ್ರಾಹಕರನ್ನು ನೋಂದಣಿ ಮಾಡಿಸಲು ಬ್ಯಾಂಕ್ ಅಧಿಕಾರಿಗಳು, ಸಿಬ್ಬಂದಿ ಶ್ರಮ ವಹಿಸಬೇಕು ಎಂದು ಸೂಚಿಸಿದರು. ಪಿಎಂ ಸ್ವನಿಧಿ, ಸೂರ್ಯಘರ್, ಪಿಎಂಇಜಿಪಿ, ಮುದ್ರಾ, ಸ್ವಾವಲಂಬಿ ಸಾರಥಿ ಸೇರಿದಂತೆ ವಿವಿಧ ಇಲಾಖೆ ಹಾಗೂ ನಿಗಮ ಮಂಡಳಿಗಳ ಸಬ್ಸಿಡಿ, ಸಹಾಯಧನ ಯೋಜನೆಗಳ ಬಗ್ಗೆ ಬ್ಯಾಂಕ್‌ಗಳು ಅಸಡ್ಡೆ ತೋರಬಾರದು. ಅರ್ಹತೆ ಇರುವವರಿಗೆ ತಡ ಮಾಡದೆ ಸಾಲ ವಿತರಿಸಬೇಕು. ಜನಸಾಮಾನ್ಯರ ಕಲ್ಯಾಣಕ್ಕಾಗಿ ಬ್ಯಾಂಕ್‌ಗಳು ಬದ್ಧತೆ ತೋರಬೇಕು ಎಂದು ಕಿವಿಮಾತು ಹೇಳಿದರು. ಕೃಷಿ, ತೋಟಗಾರಿಕೆ, ಹೈನೋದ್ಯಮ, ಶಿಕ್ಷಣಕ್ಕೆ ಹೆಚ್ಚಿನ ಸಾಲ ವಿತರಿಸಬೇಕು. ಇದರಿಂದ ಹಲವರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ಲಭಿಸಿ, ಅನುಕೂಲವಾಗಲಿದೆ ಎಂದು ತಿಳಿಸಿದರು. ಕೆನರಾ ಬ್ಯಾಂಕ್ ಸಹಾಯಕ ಮಹಾಪ್ರಬಂಧಕ ಅಶೋಕ್ ಕುಮಾರ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸಿರುವ ಯೋಜನೆಗಳ ಅನುಷ್ಠಾನದಲ್ಲಿ ಎಲ್ಲಾ ಬ್ಯಾಂಕ್‌ಗಳ ಪಾತ್ರ ಬಹಳ ಮುಖ್ಯ ಎಂದರು. ಕೃಷಿ, ಸಣ್ಣ, ಮಧ್ಯಮ ಕೈಗಾರಿಕೆಗಳ ವಲಯ, ಗೃಹ, ವಾಹನ, ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ನಿಗದಿಪಡಿಸಿರುವ ಸಾಲದ ಗುರಿಯನ್ನು ನಿಗದಿತ ಕಾಲಾವಧಿಯೊಳಗೆ ತಲುಪಲು ಜಿಲ್ಲೆಯ ಎಲ್ಲಾ ಬ್ಯಾಂಕ್‌ಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ನುಡಿದರು.

**ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಮಹದೇವ್ ಜೋಶಿ ಮಾತನಾಡಿ, 'ಬ್ಯಾಂಕ್‌ಗಳ ಮೇಲೆ ಸಾರ್ವಜನಿಕರು ಅಪಾರವಾದ ವಿಶ್ವಾಸವನ್ನು ಇಟ್ಟಿದ್ದು, ಅದನ್ನು ಉಳಿಸಿಕೊಳ್ಳಲು ಎಲ್ಲರ ಸಹಕಾರ ಅಗತ್ಯ' ಎಂದದರು. ಇದೇ ವೇಳೆ ಜಿಲ್ಲಾ ಲೀಡ್ ಬ್ಯಾಂಕ್‌ನಿಂದ ತಯಾರಿಸಿದ್ದ ಜಿಲ್ಲಾ ಸಾಲ ಯೋಜನೆ ಕಿರುಹೊತ್ತಿಗೆಯನ್ನು ಅತಿಥಿಗಳು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಆರ್‌ಬಿಐ ಅಧಿಕಾರಿ ಶೀಲ್ ಪ್ರಿಯಾ ಗೌತಮ್, ನಬಾರ್ಡ್ ಬ್ಯಾಂಕ್ ಅಧಿಕಾರಿ ಸಾಕೇತ್ ಕುಮಾರ್, ಆರ್ಸೆಟಿ ತರಬೇತಿ ಸಂಸ್ಥೆ ನಿರ್ದೇಶಕ ಯಲ್ಲೇಶ್ ಸಿ. ಇದ್ದರು.**

---

# ಫ್ಲೆಕ್ಸ್ ಬ್ಯಾನರ್ ಅಳವಡಿಕೆಗೆ ಬೇಕು ಅಂಕುಶ

• **ಉದಯವಾಹಿನಿ, ಚಾಮರಾಜನಗರ**



ರಾಜಕೀಯ ಪಕ್ಷಗಳ ಸಭೆ, ಸಮಾರಂಭ, ಸಮಾವೇಶ, ನಾಯಕರ, ಗಣ್ಯರ, ಚಿತ್ರ ನಟರ ಹುಟ್ಟುಹಬ್ಬ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಉತ್ಸವ, ಹಬ್ಬ, ಜಾತ್ರೆ ಹೀಗೆ ಯಾವುದೇ ಸನ್ನಿವೇಶವಾದರೂ ಜಿಲ್ಲೆಯಲ್ಲಿ ಫ್ಲೆಕ್ಸ್, ಬ್ಯಾನರ್‌ಗಳ ಅಬ್ಬರ ಹೆಚ್ಚಾಗುತ್ತಿದೆ. ನಗರ, ಪಟ್ಟಣಗಳ ಪ್ರಮುಖ ವೃತ್ತಗಳು, ಅಪಾಯಕಾರಿ ತಿರುವುಗಳು, ಜನನಿಬಿಡ ಸ್ಥಳಗಳು ಫ್ಲೆಕ್ಸ್‌ಗಳಿಂದ ತುಂಬಿ ತುಳುಕುತ್ತವೆ.ನಗರದ ಅಂದಗೆಡಿಸುತ್ತಿರುವ, ಅಪಘಾತಗಳಿಗೆ ಕಾರಣವಾಗುತ್ತಿರುವ ಫ್ಲೆಕ್ಸ್ ಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಸಂಬಂಧಪಟ್ಟ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಕ್ರಮ ಜರುಗಿಸದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿದೆ. ಫ್ಲೆಕ್ಸ್, ಬ್ಯಾನರ್ ಅಳವಡಿಕೆಗೂ ಮುನ್ನ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಕಡ್ಡಾಯ. ನಿಗದಿತ ಶುಲ್ಕ ಪಾವತಿಸಿ ಸ್ಥಳೀಯಾಡಳಿತ ಗುರುತಿಸಿರುವ ಸ್ಥಳಗಳಲ್ಲಿ ಮಾತ್ರ ಅಳವಡಿಕೆ ಮಾಡಬೇಕು. ಫ್ಲೆಕ್ಸ್‌ನ ಕೆಳಭಾಗದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಪರವಾನಗಿಯ ಸಂಖ್ಯೆ ಹಾಗೂ ಎಷ್ಟು ದಿನ ಅಳವಡಿಕೆ ಮಾಡಲಾಗುತ್ತದೆ ಎಂಬ ಮಾಹಿತಿಯನ್ನೂ ನಮೂದಿಸಬೇದು. ಫ್ಲೆಕ್ಸ್ ಅಳವಡಿಕೆ ಅವಧಿ ಮುಗಿದ ಕೂಡಲೇ ಅವುಗಳನ್ನು ತೆರವುಗೊಳಿಸಬೇಕು. ಆದರೆ, ಜಿಲ್ಲೆಯಲ್ಲಿ ನಿಯಮಗಳು ಪಾಲನೆಯಾಗುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿವೆ. ಬಹುತೇಕ ಫ್ಲೆಕ್ಸ್, ಬ್ಯಾನರ್‌ಗಳಲ್ಲಿ ಅನುಮತಿ ಸಂಖ್ಯೆಯಾಗಲಿ, ದಿನಾಂಕವಾಗಲಿ ಕಾಣಸಿಗುವುದಿಲ್ಲ.

---

# ಕಾಂಗ್ರೆಸ್‌ನ ನಾಯಕರ ಹೋರಾಟ-ಗುದ್ದಾಟ: ಅಂದು ಠಾಣೆ; ಕೆಪಿಸಿಸಿ ಮೆಟ್ಟಿಲು

## ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಿಂದ ಆಕ್ರೋಶಗೊಂಡಿದ್ದ ಮುಖಂಡರು ಸುಧಾಕರ್ ವಿರುದ್ಧ ಹೋರಾಟ ತೀವ್ರಗೊಳಿಸಿದರು

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಡಾ.ಕೆ.ಸುಧಾಕರ್ ಸಚಿವರಾಗಿದ್ದ ವೇಳೆ ಅವರ ವಿರುದ್ಧ ಹೋರಾಟ ನಡೆಸಿ ಪೊಲೀಸ್ ಠಾಣೆಗಳ ಮೆಟ್ಟಿಲು ಹತ್ತಿದ ಕಾಂಗ್ರೆಸ್ ನಾಯಕರು, ಈಗ ಸ್ವಪಕ್ಷೀಯ ಶಾಸಕರ ವಿರುದ್ಧ ಹೋರಾಟಕ್ಕಾಗಿ ಕೆಪಿಸಿಸಿ, ಕಾಂಗ್ರೆಸ್ ರಾಜ್ಯ ನಾಯಕರ ಮನೆಗಳ ಮೆಟ್ಟಿಲು ಹತ್ತುತ್ತಿದ್ದಾರೆ. ಅಧಿಕಾರ ಇಲ್ಲದಿದ್ದಾಗಲೂ ಒಂದು ಬಗೆಯ, ಈಗ ಸ್ವಪಕ್ಷದ ಶಾಸಕರೇ ಅಧಿಕಾರದಲ್ಲಿರುವಾಗ ಮತ್ತೊಂದು ಬಗೆಯ ಹೋರಾಟ ನಡೆಸಿದ್ದಾರೆ. ಇದು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ರಾಜಕಾರಣದ ನಾನಾ ಮಜಲುಗಳನ್ನು ಬಿಚ್ಚಿಡುತ್ತಿದೆ. ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿನ ಕೈ ಒಡಕು ಜಿಲ್ಲೆಯ ರಾಜಕೀಯದಲ್ಲಿ ಸದ್ಯ ಚರ್ಚೆಯ ಪ್ರಮುಖ ವಿಷಯ.

ಠಾಣೆಗಳಲ್ಲಿ ದಾಖಲಾದ ಪ್ರಕರಣಗಳಿಂದ ಆಕ್ರೋಶಗೊಂಡಿದ್ದ ಮುಖಂಡರು ಸುಧಾಕರ್ ವಿರುದ್ಧ ಹೋರಾಟ ತೀವ್ರಗೊಳಿಸಿದರು. ಈ ಪ್ರಕರಣಗಳು ಸುಧಾಕರ್ ಅವರಿಗೆ ವಿರೋಧಿ ಅಲೆಯನ್ನು ಸಹ ಹೆಚ್ಚಿಸಿತು. ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ, 2019ರ ವಿಧಾನಸಭೆ ಉಪ ಚುನಾವಣೆಯಲ್ಲಿ ಸುಧಾಕರ್ ವಿರುದ್ಧ ಸ್ಪರ್ಧಿಸಿದ್ದ ನಂದಿ ಅಂಜನಪ್ಪ ಹಾಗೂ ಅವರ ಬೆಂಬಲಿಗರ ಮೇಲೆ ಪಿಎಲ್‌ಡಿ ಬ್ಯಾಂಕ್ ಚುನಾವಣೆ ವೇಳೆ ಪ್ರಕರಣ ದಾಖಲಾಯಿತು. ಬಾಬು



ಜಗಜೀವನ ರಾಮ್ ಭವನದ ವಿಚಾರವಾಗಿ ಹೋರಾಟ ನಡೆಸಿದ ಮಾಜಿ ಶಾಸಕ ಹಾಗೂ ದಲಿತ ನಾಯಕ ಎಸ್.ಎಂ.ಮುನಿಯಪ್ಪ ಅವರ ಮೇಲೂ ದೂರು ದಾಖಲಾಯಿತು. ಆ ನಂತರ ಕಾವು ಜೋರಾದಂತೆ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಲಾಯರ್ ನಾರಾಯಣಸ್ವಾಮಿ' ವಿರುದ್ಧವೂ ಪ್ರಕರಣಗಳು ದಾಖಲಾದವು. ಕೋಚಿಮುಲ್ ಮಾಜಿ ನಿರ್ದೇಶಕ ವೆಂಕಟೇಶ್, ಮುಖಂಡ ನುಗುತನಹಳ್ಳಿ ರವಿ ಅವರು ಸಹ ಪೊಲೀಸ್ ಠಾಣೆ ಹತ್ತಲು ಕಾರಣ ಸುಧಾಕರ್ ಎನ್ನುವುದು ಕ್ಷೇತ್ರದ ಜನರಾಡುವ ಮಾತು.

### ಒಕ್ಕಲಿಗ ಮುಖಂಡರಿಗೇ ಪೆಟ್ಟು

**ಡಾ.ಕೆ.ಸುಧಾಕರ್ ವಿರುದ್ಧ ಹೋರಾಟ ನಡೆಸಿ ಠಾಣೆಗಳ ಮೆಟ್ಟಿಲು ಹತ್ತಿದವರಲ್ಲಿ ಕಾಂಗ್ರೆಸ್ ಜೆಡಿಎಸ್‌ನ ಒಕ್ಕಲಿಗ ಸಮುದಾಯದ ಮುಖಂಡರೇ ಹೆಚ್ಚಿದ್ದರು. ಇದು ಸಹ ಸುಧಾಕರ್ ಅವರಿಗೆ ಕ್ಷೇತ್ರದಲ್ಲಿ ವಿರೋಧಿ ಅಲೆ ಬೆಳೆಸುವಲ್ಲಿ ಪ್ರಮುಖವಾದ ಅಂಶ. ರಕ್ಷಾ ರಾಮಯ್ಯ ಕಾಂಗ್ರೆಸ್ ಅಭ್ಯರ್ಥಿ ಆಗಬೇಕು ಎಂದು ಒತ್ತಾಯಿಸಿದವರಲ್ಲಿ ಒಕ್ಕಲಿಗ ಮುಖಂಡರೇ ಹೆಚ್ಚಿದ್ದರು. ಜೆಡಿಎಸ್ ಸೋಲಿನ ಸುಳಿವು ಅರಿತು ಆ ಪಕ್ಷದ ಸಾಂಪ್ರದಾಯಿಕ ಮತದಾರರು ಎನಿಸಿದ್ದ ಬಹುಸಂಖ್ಯೆಯ ಒಕ್ಕಲಿಗರು 'ಕೈ' ಅಭ್ಯರ್ಥಿಗೆ ಮತ ನೀಡಿದರು. ಈಗ ಪ್ರದೀಪ್ ಈಶ್ವರ್ ವಿರುದ್ಧ ದೂರು ನೀಡಿ ಪತ್ರಕ್ಕೆ ಸಹಿ ಹಾಕಿದ 28 ಮುಖಂಡರಲ್ಲಿ ವಿವಿಧ ಸಮುದಾಯ ಮುಖಂಡರು ಇದ್ದರೂ ಒಕ್ಕಲಿಗ ನಾಯಕರೇ ಹೆಚ್ಚಿದ್ದಾರೆ.**

**'ಡಾ.ಕೆ.ಸುಧಾಕರ್ ಅಧಿಕಾರ ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ಮುಖಂಡರ ಮೇಲೆ ಪ್ರಕರಣ ದಾಖಲಿಸುತ್ತಿದ್ದಾರೆ ಎಂದು ಧಿಕ್ಕಾರದ ಘೋಷಣೆ ಕೂಗಿದ್ದರು. ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಪ್ರಕಾಶ್ ತಾಯಿ, 'ನಮ್ಮ ಹುಟ್ಟೆ ಉರಿಸ್ತೀರಾ. ಎಕ್ಕುಟ್ಟಿ ಹೋಗತ್ತೀರಾ' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. 'ಅಧಿಕಾರ ಎಷ್ಟು ದಿನ ಇರುತ್ತದೆ ಎಂದು ನೋಡುತ್ತೇವೆ' ಎಂದು ಸುಧಾಕರ್ ಮತ್ತು ಬಿಜೆಪಿ ವಿರುದ್ಧ ಬಂಧನದ ವೇಳೆ ಪ್ರಕಾಶ್ ತೀವ್ರ ವಾಗ್ದಾಳಿ ನಡೆಸಿದ್ದರು.**

2022ರ ಜೂನ್‌ನಲ್ಲಿ ಜರಬಂಡಹಳ್ಳಿ ಗ್ರಾಮ ಪಂಚಾಯಿತಿಯ 27 ಫಲಾನುಭವಿಗಳಿಗೆ ಬಿ.ಆರ್.ಅಂಬೇಡ್ಕರ್ ಮತ್ತು ಬಸವ ವಸತಿ ಯೋಜನೆಯಡಿ ಮನೆ ಮಂಜೂರಾತಿ ಪತ್ರಗಳನ್ನು (ಫೋಟೊ ಫ್ರೇಮ್) ವಿತರಣೆ ವಿಚಾರವಾಗಿ ನಡೆದ ಜಟಾಪಟಿ ವಿಚಾರವಾಗಿ ಮಂಚೇನಹಳ್ಳಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಿ.ಎನ್.ಪ್ರಕಾಶ್ ಮೇಲೂ ಪ್ರಕರಣ ದಾಖಲಾಯಿತು. ಅವರನ್ನು ಬಂಧಿಸಲಾಯಿತು.

ಕಾಂಗ್ರೆಸ್ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಿರುವುದಕ್ಕೆ ಹಾಗೂ ಅವರನ್ನು ಬಂಧಿಸಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಮಂಚೇನಹಳ್ಳಿ ಠಾಣೆ ಎದುರು ದೊಡ್ಡ ಸಂಖ್ಯೆಯಲ್ಲಿ ಸೇರಿ ಪ್ರತಿಭಟಿಸಿದರು.

ಹೀಗೆ ಸುಧಾಕರ್ ಅವರನ್ನು ಮಣಿಸಬೇಕು ಎಂದು ಹೋರಾಟ ನಡೆಸಿದ ಮುಖಂಡರು ಯಶಸ್ವಿಯೂ ಆದರು. ಆದರೆ ಈಗ ತಮ್ಮದೇ ಪಕ್ಷದ ಶಾಸಕ ಪ್ರದೀಪ್ ಈಶ್ವರ್ ಧೋರಣೆ ವಿರುದ್ಧವೇ ಈ ಮುಖಂಡರು ಈಗ ಹೋರಾಟ ನಡೆಸುತ್ತಿದ್ದಾರೆ. ಶಾಸಕರು ಅವರ ಬೆಂಬಲಿಗರಿಂದ ಟೀಕೆಗಳನ್ನೂ ಎದುರಿಸುತ್ತಿದ್ದಾರೆ.

ಶಾಸಕರ ಧೋರಣೆಗಳಿಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿ ಈ ಹಿರಿಯ ಮುಖಂಡರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಅವರಿಗೆ ಈಗಾಗಲೇ ದೂರು ನೀಡಿದ್ದಾರೆ.

ಕೆಪಿಸಿಸಿಯಿಂದ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಒಬ್ಬ ವೀಕ್ಷಕರನ್ನು ನೇಮಿಸಿ, ಹಿರಿಯ ಮುಖಂಡರ ಸಮಿತಿ ರಚಿಸಬೇಕು. ಹಳೇ ನೇಮಕಾತಿ ರದ್ದುಪಡಿಸಬೇಕು. ಸರ್ಕಾರಿ ನಾಮನಿರ್ದೇಶನ ಮತ್ತು ಬ್ಲಾಕ್ ಕಾಂಗ್ರೆಸ್ ಹುದ್ದೆಗಳಿಗೆ ಹೊಸದಾಗಿ ನೇಮಕ ಮಾಡಿ ಪಕ್ಷ ಉಳಿಸಿ ಎಂದು ದೂರಿನಲ್ಲಿ ಕೋರಿದ್ದಾರೆ.

ಅಂತರಾಳದಿಂದ..
EDITORIAL

# ಚುನಾವಣಾ ಆಯೋಗದ ಬುಟ್ಟಿಯೊಳಗಿಂದ ಹೊರಬಂದ ಎನ್‌ಆರ್‌ಸಿ ಹಾವು

ಬಿಹಾರ ವಿಧಾನಸಭಾ ಚುನಾವಣೆಯ ಸೋಲುಗೆಲುವಿನ ಹಾರ ಎಲ್ಲಿ ತನಗೆ ಉರುಳಾಗಿ ಬಿಡುತ್ತದೆಯೋ ಎನ್ನುವ ಆತಂಕ, ಒತ್ತಡ ಪ್ರಧಾನಿ ಮೋದಿಯವರನ್ನು ತೀವ್ರವಾಗಿ ಕಾಡುತ್ತಿರುವಂತಿದೆ. ಜೆಡಿಯು ಜೊತೆಗೆ ಕೈ ಜೋಡಿಸಿಯೂ ಬಿಜೆಪಿ ಗೆಲುವಿನ ಕುರಿತಂತೆ ಆತ್ಮವಿಶ್ವಾಸವನ್ನು ಹೊಂದಿಲ್ಲ. ಈ ಕಾರಣಕ್ಕಾಗಿಯೇ, ಪಹಲ್ಯಾಮ್ ದಾಳಿಯ ಬಳಿಕ ನಡೆದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯನ್ನು ಅವರು ಬಿಹಾರ ಚುನಾವಣೆಯಲ್ಲಿ ಬಳಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ ಎನ್ನುವ ಆರೋಪ ಪ್ರಧಾನಿ ಮೋದಿಯ ಮೇಲಿದೆ. ಪಹಲ್ಗಾಮ್ ದಾಳಿ ನಡೆದಾಗ ಅವರು ಕಾಶ್ಮೀರಕ್ಕೆ ತೆರಳದೇ ಬಿಹಾರಕ್ಕೆ ತೆರಳಿ ಭಾಷಣ ಮಾಡಿರುವುದು ತೀವ್ರ ಟೀಕೆಗೆ ಗುರಿಯಾಯಿತು. ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಬಳಿಕ ಮನೆ ಮನೆಗೆ ಸಿಂಧೂರ ಹಂಚುವ ಮೂಲಕ ಸೇನೆಯ ತ್ಯಾಗ ಬಲಿದಾನವನ್ನು ಅವರು ನಗದೀಕರಿಸುವ ಪ್ರಯತ್ನ ಮಾಡಿದರು. ಇದು ಕೂಡ ನಿರೀಕ್ಷಿತ ಪರಿಣಾಮಗಳನ್ನು ಬೀರದೇ ಇದ್ದಾಗ ಆತುರಾತುರವಾಗಿ ಅವರು ಜಾತಿ ಗಣತಿಯ ಬಗ್ಗೆ ಒಲವು ವ್ಯಕ್ತಪಡಿಸಿದರು. ಜನಗಣತಿಯ ಜಾತಿಗಣತಿಯನ್ನು ಕೂಡ ನಡೆಸಲಾಗುವುದು ಎಂದು ಘೋಷಿಸಿದರು. ಆದರೆ ಇದೀಗ ಹೊರ ಬಿದ್ದ ಜನಗಣತಿ ಅಧಿಸೂಚನೆಯಲ್ಲಿ ಗೊಂದಲವಿದ್ದು, ಜಾತಿಗಣತಿಯ ಬಗ್ಗೆ ಉಲ್ಲೇಖಗಳಿಲ್ಲ ಎನ್ನುವ ಆರೋಪವನ್ನು ವಿರೋಧ ಪಕ್ಷಗಳು ಮಾಡುತ್ತಿವೆ. ಇವೆಲ್ಲದರ ನಡುವೆ ಇದೀಗ ಪ್ರಧಾನಿ ಮೋದಿಯವರು ಎನ್‌ಆರ್‌ಸಿ ಎನ್ನುವ ಹಾವನ್ನು ಚುನಾವಣಾ ಆಯೋಗದ ಬುಟ್ಟಿಯಲ್ಲಿಟ್ಟು ಆಡಿಸುವುದಕ್ಕೆ ಹೊರಟಿದ್ದಾರೆ. ಬಿಹಾರದಲ್ಲಿ ಚುನಾವಣೆಗೆ ಇನ್ನೇನು ಕೆಲವೇ ತಿಂಗಳು ಇದೆ ಎನ್ನುವಷ್ಟರಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಗೆ ಇಳಿದಿದೆ. ಮತ ಚಲಾಯಿಸುವವರು ಭಾರತೀಯ ಪೌರರು ಹೌದೇ ಎನ್ನುವುದನ್ನು ಚುನಾವಣಾ ಆಯೋಗ ಪರಿಶೀಲಿಸಲು ಮುಂದಾಗಿದೆ. ಸುಮಾರು ಎಂಟು ಕೋಟಿ ಮತದಾರರು ತಾವು ಭಾರತದ ಪೌರರು ಎನ್ನುವುದನ್ನು ಚುನಾವಣಾ ಆಯೋಗಕ್ಕೆ ಸಾಬೀತು ಪಡಿಸಿದ ಬಳಿಕ ಅವರು ಮತದಾನಕ್ಕೆ ಅರ್ಹತೆಯನ್ನು ಪಡೆಯುತ್ತಾರೆ. 2003ರ ಪರಿಷ್ಕೃತ ಪಟ್ಟಿಯಲ್ಲಿರುವ 4.96 ಕೋಟಿ ಮಂದಿಯ ಹೆಸರುಗಳನ್ನು ಹೊರತು ಪಡಿಸಿ, ಇತರರು ತಮ್ಮ ಹುಟ್ಟಿದ ವರ್ಷಗಳ ಆಧಾರದಲ್ಲಿ ಸೂಕ್ತ ದಾಖಲೆಗಳನ್ನು ಚುನಾವಣಾ ಆಯೋಗಕ್ಕೆ ನೀಡಬೇಕಾಗುತ್ತದೆ. ಆಧಾರ್ ಕಾರ್ಡ್, ವೋಟರ್ ಐಡಿಗಳು ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹ ದಾಖಲೆಯಲ್ಲ ಎನ್ನುವುದನ್ನು ಚುನಾವಣಾ ಆಯೋಗ ಈಗಾಗಲೇ ಸ್ಪಷ್ಟಪಡಿಸಿದೆ. ಚುನಾವಣಾ ಆಯೋಗ ನೀಡಿರುವ ಮಾಹಿತಿಯ ಪ್ರಕಾರ, ಬಿಹಾರದ ಶೇಕಡ 37ರಷ್ಟು ಮತದಾರರು ತಮ್ಮ ಪುರಾವೆಯನ್ನು ಸಲ್ಲಿಸಬೇಕಾಗುತ್ತದೆ.

**ಮಹಾರಾಷ್ಟ್ರದ ಚುನಾವಣೆಯಲ್ಲಿ ಮತದಾರ ಪಟ್ಟಿಯಲ್ಲಿ ಆಗಿರುವ ಏರುಪೇರಿಗೆ ಈವರೆಗೆ ಚುನಾವಣಾ ಆಯೋಗ ಸ್ಪಷ್ಟೀಕರಣ ನೀಡಿಲ್ಲ. ಅಷ್ಟೇ ಅಲ್ಲ, ಮಹಾರಾಷ್ಟ್ರದ ಮತಚಲಾವಣೆಯ ಸಂದರ್ಭದ ದಾಖಲೆಗಳನ್ನು ನೀಡುವುದಕ್ಕೂ ಅದು ಹಿಂದೇಟು ಹಾಕುತ್ತಿದೆ. ಇದೇ ಹೊತ್ತಿಗೆ ಬಿಹಾರದಲ್ಲಿ ಪೌರತ್ವದ ಹೆಸರಿನಲ್ಲಿ, ಲಕ್ಷಾಂತರ ಜನರ ಮತಗಳ ಹಕ್ಕನ್ನೇ ಕಿತ್ತುಕೊಳ್ಳಲು ಮುಂದಾಗಿದೆ. ಈ ಅಲ್ಪಾವಧಿಯಲ್ಲಿ ಬೇರೆ ಬೇರೆ ಕಾರಣಗಳಿಂದ ತಮ್ಮ ದಾಖಲೆಗಳನ್ನು ನೀಡಲು ಮತದಾರರು ವಿಫಲರಾದರೆ, ಅವರು ಮತಚಲಾಯಿಸುವಂತಿಲ್ಲ ಮಾತ್ರವಲ್ಲ, ಆಯೋಗವು ಅವರನ್ನು ಪರೋಕ್ಷವಾಗಿ ದೇಶದ ಪೌರತ್ವದಿಂದಲೇ ಹೊರಗಿಟ್ಟಂತಾಗುತ್ತದೆ. ಶೇ. 30 ಕ್ಕೂ ಅಧಿಕ ಮಂದಿ ಪೌರರನ್ನು ಹೊರಗಿಟ್ಟು ಬಿಹಾರದಲ್ಲಿ ಚುನಾವಣೆ ನಡೆಸಲು ಹೊರಟಿರುವ ಚುನಾವಣಾ ಆಯೋಗದ ನಡೆಯ ಬಗ್ಗೆ ಈಗಾಗಲೇ ವಿರೋಧ ಪಕ್ಷಗಳು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿವೆ.**

1987 ಜುಲೈ 1ರ ಮುನ್ನ ಜನಿಸಿದ ಮತದಾರರು ತಮ್ಮ ಜನನ ದಿನಾಂಕ ಹಾಗೂ ಹುಟ್ಟಿದ ಸ್ಥಳದ ಪುರಾವೆಯನ್ನು ತೋರಿಸಬೇಕು. 1987 ಜುಲೈ 1 ಹಾಗೂ 2004 ಡಿಸೆಂಬರ್ 2ರ ನಡುವೆ ಜನಿಸಿದ ಮತದಾರರು ತಮ್ಮ ಹೆತ್ತವರ ಜನನ ದಿನಾಂಕ ಹಾಗೂ ಹುಟ್ಟಿದ ಸ್ಥಳವನ್ನು ಸಾಬೀತುಪಡಿಸುವ ದಾಖಲೆಗಳನ್ನು ಸಲ್ಲಿಸಬೇಕು. ಬಿಹಾರದಲ್ಲಿ ಇದು ಕೇವಲ 25 ದಿನಗಳ ಒಳಗೆ ನಡೆಯಬೇಕಾಗಿದೆ. ಅನಕ್ಷರತೆ, ಬಡತನ ಇತ್ಯಾದಿಗಳಿಗಾಗಿ ಕುಖ್ಯಾತವಾಗಿರುವ ಬಿಹಾರದಲ್ಲಿ ಈ ದಾಖಲೆಗಳನ್ನು ಒದಗಿಸಲು ಮತದಾರರು ಎಷ್ಟರಮಟ್ಟಿಗೆ ಯಶಸ್ವಿಯಾಗಬಹುದು ಎನ್ನುವುದು ಅನುಮಾನ ಪಡುವ ವಿಷಯವಾಗಿದೆ. ಆದರೆ ಚುನಾವಣಾ ಆಯೋಗ ಈ ಬಗ್ಗೆ ಯಾವುದೇ ಆತಂಕಗಳನ್ನು ಹೊಂದಿಲ್ಲ. ಒಂದು ವೇಳೆ ಈ ದಾಖಲೆಗಳನ್ನು ಒದಗಿಸಲು ವಿಫಲರಾದರೆ, ಈ ಬಾರಿ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಸಂಖ್ಯೆಯ ಮತದಾರರು ಮತದಾನದಿಂದ ವಂಚಿತರಾಗುತ್ತಾರೆ ಮಾತ್ರವಲ್ಲ ಅವರು ದಾಖಲೆಗಳನ್ನು ಸಾಬೀತು ಮಾಡುವವರೆಗೆ ಈ ದೇಶದ ಪೌರತ್ವದಿಂದಲೂ ಚುನಾವಣಾ ಆಯೋಗದ ದೃಷ್ಟಿಯಿಂದ ವಂಚಿತರಾಗುತ್ತಾರೆ.

ಕಳವಳಕಾರಿ ವಿಷಯವೆಂದರೆ, ಇದು ಕೇವಲ ಬಿಹಾರಕ್ಕಷ್ಟೇ ಸೀಮಿತವಾದ ಪರಿಷ್ಕರಣೆಯಲ್ಲ. ಚುನಾವಣಾ ಆಯೋಗವು ಈ ವರ್ಷ ಬಿಹಾರದಿಂದ ಮೊದಲ್ಗೊಂಡು ಆರು ರಾಜ್ಯಗಳಲ್ಲಿ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯನ್ನು ನಡೆಸಲಿದೆ ಮತ್ತು ಇದರ ಆಧಾರದಲ್ಲಿ ಯಾರು ಪೌರರು, ಯಾರು ಅಕ್ರಮ ವಲಸಿಗರು ಎನ್ನುವುದನ್ನು ಚುನಾವಣಾ ಆಯೋಗವೇ ನಿರ್ಧರಿಸಿ, ಅವರು ಮತದಾನ ಮಾಡಬೇಕೇ ಬೇಡವೇ ಎನ್ನುವುದನ್ನು ತೀರ್ಮಾನಿಸಲಿದೆ. ಈ ಹಿಂದೆ ಸಿಎಎ ಹೆಸರಿನಲ್ಲಿ ಎನ್‌ಆರ್‌ಸಿಯನ್ನು ಸರಕಾರ ಹೇಗೆ ಮುಂದಿಟ್ಟಿತು ಮತ್ತು ಅದರ ವಿರುದ್ಧ ದೇಶ ಹೇಗೆ ಒಂದಾಗಿ ಪ್ರತಿಭಟಿಸಿತು ಎನ್ನುವುದನ್ನು ನೋಡಿದ್ದೇವೆ. ಎನ್‌ಆರ್‌ಸಿ ವಿರುದ್ಧ ಭಾರೀ ಆಂದೋಲನ ಆರಂಭವಾಗುತ್ತಿದ್ದಂತೆಯೇ ಅಂತಹದೊಂದು ಯೋಜನೆಯೇ ನಮ್ಮ ಬಳಿ ಇಲ್ಲ ಎಂದು ಪ್ರಧಾನಿ ಮೋದಿಯವರು ತಿಳಿಸಿದರು. ಆದರೆ ಅದಾಗಲೇ ಅಮಿತ್ ಶಾ 'ಕ್ರೊನೋಲಜಿಯನ್ನು ವಿವರಿಸಿಯಾಗಿತ್ತು. ಎನ್‌ಆರ್‌ಸಿ ಸಾಧ್ಯವಿಲ್ಲ ಎಂದಾಗ, ಪೌರತ್ವ ನೋಂದಣಿಯಲ್ಲಿ ಅದನ್ನು ತುರುಕಿಸುವ ಪ್ರಯತ್ನ ನಡೆಯಿತು.



ವಿಶ್ವಾಸ್.ಡಿ.ಗೌಡ
ಉದಯವಾಹಿನಿ, ವಿಶೇಷ




# ಕರ್ನಾಟಕದಲ್ಲಿ ರೈಸ್ ಮಿಲ್ ಮಾಲೀಕರು ಎದುರಿಸುತ್ತಿರುವ ಸಮಸ್ಯೆಗಳು

ಕರ್ನಾಟಕ ಕೃಷಿ ರಾಜ್ಯವಾಗಿದ್ದು, ಇದರಲ್ಲಿ ಅಕ್ಕಿ ಮುಖ್ಯ ಆಹಾರ ಧಾನ್ಯವಾಗಿದೆ. ಬಹುತೇಕ ಜಿಲ್ಲೆಗಳಲ್ಲಿ ಅಕ್ಕಿ ಉತ್ಪಾದನೆ ನಡೆಯುತ್ತಿದ್ದು, ಈ ಅಕ್ಕಿಯನ್ನು ಗೋದಾಮಿನಿಂದ ಗ್ರಾಹಕರ ತೊಟ್ಟಿಲಿಗೆ ತಲುಪಿಸಲು

ಪ್ರಮುಖ ಪಾತ್ರವಹಿಸುವವರು ರೈಸ್ ಮಿಲ್ ಮಾಲೀಕರು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಉದ್ಯಮವು ಹಲವಾರು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ರೈಸ್ ಮಿಲ್ ಮಾಲೀಕರಿಗೆ ಆರ್ಥಿಕ, ನಿರ್ವಹಣಾತ್ಮಕ ಹಾಗೂ ನೀತಿ ರೂಪಣಾ ಮಟ್ಟದಲ್ಲಿ ಎದುರಾಗುತ್ತಿರುವ ಸವಾಲುಗಳು ದೊಡ್ಡತಾಗುತ್ತಿವೆ.

**ವಿದ್ಯುತ್ ಹಾಗೂ ಇಂಧನ ವೆಚ್ಚದ ಹೆಚ್ಚಳ:** ರೈಸ್ ಮಿಲ್ಲುಗಳಲ್ಲಿ ಅಕ್ಕಿಯನ್ನು ಉತ್ಪಾದನೆ ಮಾಡಲು ಅನೇಕ ಮೆಷಿನ್‌ಗಳ ಬಳಕೆ ಅಗತ್ಯವಿದೆ. ಇವು ಕಾರ್ಯನಿರ್ವಹಿಸಲು ವಿದ್ಯುತ್ ಮತ್ತು ಕೆಲವೊಮ್ಮೆ ಡೀಸೆಲ್ ಅವಶ್ಯಕವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವಿದ್ಯುತ್ ದರಗಳಲ್ಲಿ ಆಗುತ್ತಿರುವ ನಿರಂತರ ಏರಿಕೆ ಹಾಗೂ ಡೀಸೆಲ್ ಬೆಲೆಯ ಸ್ಥಿರತೆಯ ಕೊರತೆ, ಮಿಲ್ ಮಾಲೀಕರಿಗೆ ಆರ್ಥಿಕ ಒತ್ತಡವನ್ನುಂಟು ಮಾಡುತ್ತಿದೆ.

**ಕಾರ್ಮಿಕ ಕೊರತೆ:** ದಿನದಿಂದ ದಿನಕ್ಕೆ ಗ್ರಾಮೀಣ ಪ್ರದೇಶಗಳಿಂದ ಕಾರ್ಮಿಕರು ನಗರಗಳತ್ತ ವಲಸೆ ಯಾಗುತ್ತಿರುವುದರಿಂದ ರೈಸ್ ಮಿಲ್ಲುಗಳಿಗೆ ಕ-skilled ಕಾರ್ಮಿಕರು ಲಭ್ಯವಾಗುತ್ತಿಲ್ಲ.

ಇದರೊಂದಿಗೆ, ಶ್ರಮದ ವೇತನವೂ ಏರಿಕೆಯಾಗಿದ್ದು, ನಿರ್ವಹಣಾ ವೆಚ್ಚ ಹೆಚ್ಚಾಗಿದೆ. ಪಾಳಿ ಪದೆ ಕಾರ್ಮಿಕರ ಅಭಾವದಿಂದಾಗಿ ಕಾರ್ಖಾನೆಗಳು ನಿಲ್ಲುವ ಪರಿಸ್ಥಿತಿಯೂ ಉಂಟಾಗುತ್ತಿದೆ.

**ಸರಕಾರಿ ನೀತಿ ಮತ್ತು ಲೈಸೆನ್ಸ್ ಸಮಸ್ಯೆಗಳು:** ಅಕ್ಕಿ ಖರೀದಿ, ಮಾರಾಟದ ಸಂಬಂಧ ನಿಯಮಿತವಾಗಿ ಬದಲಾವಣೆಯಾಗುತ್ತಿರುವ ಸರಕಾರಿ ನೀತಿಗಳು ರೈಸ್ ಮಿಲ್ ಮಾಲೀಕರನ್ನು ಗೊಂದಲಕ್ಕೆ ದೂಡುತ್ತಿದೆ. ವಿವಿಧ ಲೈಸೆನ್ಸ್ ಮತ್ತು ಪ್ರಮಾಣಪತ್ರಗಳ ನವೀಕರಣ, ಪರೀಕ್ಷೆ, ಲೆಕ್ಕಪತ್ರ ವೀಕ್ಷಣೆ ಮೊದಲಾದವುಗಳಲ್ಲಿ ನಿರಂತರ ತೊಂದರೆಗಳಿದ್ದು, ಈ ಕ್ಷೇತ್ರವನ್ನು ಬಹಳಷ್ಟು Babureaucratic ಆಗಿ ಮಾಡಿದೆ. ಕೆಲವೊಮ್ಮೆ ನಿಗದಿತ ಅವಧಿಗೆ ಸರಿಯಾಗಿ ಭತ್ತವನ್ನು ಸರಬರಾಜು ಮಾಡದಿರುವ ಪರಿಣಾಮ, ಅವರ ಇಡೀ ಉತ್ಪಾದನಾ ಚಕ್ರವೇ ಕುಸಿಯುತ್ತದೆ.

**ಖಾಸಗಿ ಕಾರ್ಪೊರೇಟ್ ಸ್ಪರ್ಧೆ:** ಇತ್ತೀಚಿನ ದಿನಗಳಲ್ಲಿ ಹಲವಾರು ಖಾಸಗಿ ದೊಡ್ಡ ಕಂಪನಿಗಳು ಪ್ರೊಸೆಸ್‌ಡ್ ಅಕ್ಕಿಯನ್ನು ಪ್ಯಾಕಿಂಗ್ ಮೂಲಕ ಮಾರುಕಟ್ಟೆಗೆ ತರಲಾರಂಭಿಸಿವೆ. ಇವು ತಮ್ಮ ಬೆಲೆ ನಿರ್ವಹಣಾ ತಂತ್ರ, ಬೃಹತ್ ಉತ್ಪಾದನೆ ಹಾಗೂ ಆಕರ್ಷಕ ಪ್ಯಾಕಿಂಗ್ ಮೂಲಕ ಸಣ್ಣಮಟ್ಟದ ರೈಸ್ ಮಿಲ್ಲುಗಳ ವ್ಯಾಪಾರವನ್ನು ಕಡಿಮೆ ಮಾಡುತ್ತಿವೆ. ಇದರಿಂದ ಸ್ಥಳೀಯ ಮಿಲ್ಲುಗಳಿಗೆ ಗ್ರಾಹಕರ ಬೆಂಬಲ ಕುಗ್ಗುತ್ತಿದೆ.

**ಪರಿಸರ ನಿಯಮಗಳು ಅಪಘಾತ ಭೀತಿ**

**ಇತ್ತೀಚೆಗೆ ಪರಿಸರ ನಿಯಮಗಳು ಗಟ್ಟಿಯಾಗಿ ಜಾರಿಗೆ ಬರುತ್ತಿದ್ದು, ನೀರು ಶುದ್ಧೀಕರಣ, ಬಾಯಲರ್ ಸುರಕ್ಷತೆ, ಧೂಳಿನ ನಿಯಂತ್ರಣ ಮೊದಲಾದ ಪರಿಕರಗಳನ್ನು ಹೊಂದಿರಬೇಕೆಂಬ ಬಲವಂತ ಬಂದಿದೆ. ಆದರೆ ಸಣ್ಣಮಟ್ಟದ ಮಿಲ್ಲುಗಳಿಗೆ ಈ ಎಲ್ಲಾ ವ್ಯವಸ್ಥೆ ಅಳವಡಿಸಿಕೊಳ್ಳುವುದು ಭಾರೀ ವೆಚ್ಚದ ವಿಷಯ.**

**ಬೆಲೆ ಸ್ಥಿರತೆಯ ಕೊರತೆ:** ಅಕ್ಕಿ ಹಾಗೂ ಭತ್ತದ ಬೆಲೆಗಳು ರೈತರ ಮಾರಾಟದಿಂದ ಹಿಡಿದು ಮಾರುಕಟ್ಟೆದವರ ಹಂಚಿಕೆಯವರೆಗೆ ಸ್ಥಿರವಿಲ್ಲ.

ಕೆಲವೊಮ್ಮೆ ಮಾರುಕಟ್ಟೆ ಬೆಲೆಯು ಖರ್ಚಿಗಿಂತ ಕಡಿಮೆಯಾದಾಗ ಮಿಲ್ ಮಾಲೀಕರಿಗೆ ನಷ್ಟವಾಗುವ ಸಾಧ್ಯತೆ ಹೆಚ್ಚು. ಜತೆಗೆ, ಖರೀದಿದಾರರ ವಿಳಂಬ ಹಾಗೂ ಸಾಲದ ಸಂಸ್ಕೃತಿಯು ನಗದು ಹರಿವಿನಲ್ಲಿ ತೊಂದರೆ ಉಂಟುಮಾಡುತ್ತದೆ.

**ತಾಂತ್ರಿಕ ಸ್ವಯಂಸೇವಾ ದಕ್ಷಿಣತೆ ಇಲ್ಲದಿರುವುದು:** ಅನೇಕ ಹಳೆಯ ರೈಸ್ ಮಿಲ್ಲುಗಳು ಇನ್ನೂ ಪುರಾತನ ತಂತ್ರಜ್ಞಾನವನ್ನು ಬಳಸುತ್ತಿದ್ದು, ಹೊಸ ತಂತ್ರಜ್ಞಾನದಲ್ಲಿ ಮಾರುಕಟ್ಟೆ ಸ್ಪರ್ಧೆಯಲ್ಲಿ ತಕ್ಷಣವಾಗಿ ನಿಂತುಕೊಳ್ಳಲು ಸಾಧ್ಯವಿಲ್ಲ. ಹೊಸ ಯಂತ್ರೋಪಕರಣ ಖರೀದಿಗೆ ಸಾಲ ಸೌಲಭ್ಯಗಳು ಅಥವಾ ಸರಳ ಯೋಜನೆಗಳ ಕೊರತೆ ಕೂಡ ಸಮಸ್ಯೆಯಾಗಿದೆ. ಅಲ್ಲದೇ, ಯಂತ್ರೋಪಕರಣ ನಿರ್ವಹಣೆಗೆ ಪರಿಣತಿ ಇರುವ ತಾಂತ್ರಿಕರ ಕೊರತೆಯೂ ಸಹ ಎದುರಾಗುತ್ತಿದೆ.

ಇವೆಲ್ಲ ಸವಾಲುಗಳ ನಡುವೆಯೂ ರೈಸ್ ಮಿಲ್ ಮಾಲೀಕರು ತಮ್ಮ ಉದ್ಯಮವನ್ನು ಉಳಿಸಿಕೊಂಡು, ಆಹಾರದ ಶ್ರಂಖಲೆಯಲ್ಲಿ ಅವಿಭಾಜ್ಯ ಪಾತ್ರವಹಿಸುತ್ತಿದ್ದಾರೆ. ಸರ್ಕಾರದಿಂದ ಸರಿಯಾದ ಬೆಂಬಲ, ನೀತಿಯಲ್ಲಿ ಸದುದ್ದೇಶ, ತಾಂತ್ರಿಕ ಸಹಾಯ, ಸಾಲ ಸೌಲಭ್ಯ ದೊರಕಿದರೆ, ಈ ಉದ್ಯಮ ಮತ್ತೆ ಬೆಳಕಿಗೆ ಬರಬಹುದು. ರೈಸ್ ಮಿಲ್ ಉದ್ಯಮವನ್ನು ಉಳಿಸುವುದು ಆಹಾರ ಭದ್ರತೆಯ ದೃಷ್ಟಿಯಿಂದ, ಗ್ರಾಮೀಣ ಆರ್ಥಿಕತೆಯ ದೃಷ್ಟಿಯಿಂದ ಕೂಡ ಅತ್ಯಂತ ಅಗತ್ಯ. ಈ ಕುರಿತಂತೆ ನಿರಂತರ ಸಂವಾದ, ನೀತಿ ಪರಿಷ್ಕರಣೆ ಭದ್ರ ನೆರವಿನ ಅಗತ್ಯವಿದೆ.



# ರಾಷ್ಟ್ರೀಯ ವೈದ್ಯರ ದಿನಾಚರಣೆ ಪ್ರಯುಕ್ತ ವೈದ್ಯರೆಲ್ಲರಿಗೂ ಹಾರ್ದಿಕ ಶುಭಾಶಯಗಳು



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ವೈದ್ಯಲೋಕಕ್ಕೆ ಕೀರ್ತಿ ತಂದುಕೊಟ್ಟ, ಮಾನವೀಯತೆಯ ಸಾಕಾರಮೂರ್ತಿ ಪ್ರಸಿದ್ಧ ಡಾಕ್ಟರ್: ಬಿ ಸಿ ರಾಯ್ ರವರ ಸ್ಮರಣಾರ್ಥ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಪ್ರತಿವರ್ಷದಂತೆ ಈ ವರ್ಷ 2025 ಜುಲೈ ,01 ರಂದು ಇಡೀ ರಾಷ್ಟ್ರಾದ್ಯಂತ ಆಚರಿಸುವುದು ಉತ್ತಮ ಆರೋಗ್ಯಕರ ಬೆಳವಣಿಗೆ. ಈ ರಾಷ್ಟ್ರೀಯ ವೈದ್ಯರ ದಿನಾಚರಣೆಯಲ್ಲಿ ವೈದ್ಯರೆಲ್ಲರಿಗೂ ಶುಭಾಶಯಗಳನ್ನು ಕೋರುವುದು ನಾಗರೀಕರಾದ ನಮ್ಮೆಲ್ಲರ ಜವಾಬ್ದಾರಿ,ಹೊಣೆಗಾರಿಕೆ ಮತ್ತು ಕರ್ತವ್ಯವೂ ಹೌದು.

ವೈದ್ಯ ಲೋಕಕ್ಕೆ ಸವಾಲಾಗಿರುವ ಕೆಲವು ಭಯಾನಕ ರೋಗಗಳನ್ನ ಪತ್ತೆ ಮಾಡಿ ನಿಜಕ್ಕೂ ವೈದ್ಯರು ತಮ್ಮ ಪ್ರಾಣದ ಮೇಲಿನ ಹಂಗನ್ನು ತೊರೆದು ರೋಗಿಯನ್ನು ಉಳಿಸಿಕೊಳ್ಳಲು ರಾತ್ರಿ-ಹಗಲು ಶ್ರಮಿಸುತ್ತಾರೆ.

ವೈದ್ಯರೆಲ್ಲರೂ ದೇವರಿಗೆ ಸಮ. ಅದರಲ್ಲೂ ಕಳೆದ 2020 ಮತ್ತು 2021ನೇ ಈ ಎರಡು ವರ್ಷಗಳು ಸತತವಾಗಿ ಕೊರೋನಾ ಎಂಬ ಹಾವಳಿ ದೇಶದಲ್ಲಿ ಆವರಿಸಿಕೊಂಡು ಹೈರಾಣ ಮಾಡುತ್ತಿರುವ ಸಂದರ್ಭದಲ್ಲಂತೂ ಬಹಳಷ್ಟು ವೈದ್ಯರು ಶ್ರಮಪಟ್ಟಿದ್ದಾರೆ.

ಈ ಸಂದರ್ಭದಲ್ಲಿ ಪ್ರಾಣ ಕಳೆದುಕೊಂಡ ಕೆಲವು ವೈದ್ಯರುಗಳ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲಿ ಎಂದು ಆ ಕಾಣದ ಕಲ್ಪನೆಯ ಭಗವಂತನಲ್ಲಿ ಪ್ರಾರ್ಥಿಸೋಣ. ಇಂದು ರಾಷ್ಟ್ರೀಯ ವೈದ್ಯರ ದಿನಾಚರಣೆ ಪ್ರಯುಕ್ತ ರಾಷ್ಟ್ರದ ಎಲ್ಲಾ ಸಜ್ಜನ ನಾಗರೀಕರ ಪರವಾಗಿ ಹೃದಯವಂತರು ಹಾಗೂ ಕರುಣಾಮಯಿ ವೈದ್ಯರೆಲ್ಲರಿಗೂ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. **ಶುಭಾಶಯಗಳನ್ನು ಕೋರುವ**


# ಜು.2ರಿಂದ 4 ದಿನ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಕೊಂಚ ಬಿಡುವು ನೀಡಿದ್ದ ಮಳೆರಾಯ ಇದೀಗ ಮತ್ತೆ ಅಬ್ಬರಿಸುವ ಸಾಧ್ಯತೆಯಿದ್ದು, ಜು.2ರಿಂದ 5ರ ವರೆಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.


ಕಳೆದೆರೆಡು ವಾರದಿಂದ ಕರಾವಳಿ, ಮಲೆನಾಡು ಭಾಗದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿತ್ತು. ಸದ್ಯ ಹವಾಮಾನ ಇಲಾಖೆ ಮಳೆ ಮೂನ್ಸುಚನೆ ನೀಡಿದ್ದು, ಇಂದಿನಿಂದ ರಾಜ್ಯದ ಬಹುತೇಕ ಕಡೆ ಮಳೆಯಾಗುವ ಬಗ್ಗೆ ಸಾಧ್ಯತೆಯಿದೆ. ಕರಾವಳಿ ಕರ್ನಾಟಕದಲ್ಲಿ ವರುಣನ ಅಬ್ಬರ ತಗ್ಗಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಜು.1 ಉಡುಪಿ, ದಕ್ಷಿಣ ಕನ್ನಡ ಹೊರತುಪಡಿಸಿ ಉಳಿದ

ಎಲ್ಲಾ ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ನೀಡಲಾಗಿದೆ. ಇನ್ನುಳಿದಂತೆ ಜು.2ರಿಂದ 5ರವರೆಗೆ ರಾಜ್ಯಾದ್ಯಂತ ಯೆಲ್ಲೋ ಅಲರ್ಟ್ ನೀಡಲಾಗಿದೆ. 93 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಜೂನ್‌ನಲ್ಲಿ ಕೆಆರ್‌ಎ ಭರ್ತಿಯಾಗಿರುವ ಹಿನ್ನೆಲೆ ಸೋಮವಾರ ಸಿಎಂ ಸಿದ್ದರಾಮಯ್ಯ ಅವರು ಬಾಗಿನ ಅರ್ಪಿಸಿದರು. ಅತ್ತ ತಮಿಳುನಾಡಿನ ಮೆಟ್ಟೂರು ಜಲಾಶಯವು ಕೂಡ ಭರ್ತಿಯಾಗಿದೆ.



ಇನ್ನೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದ ಜಿಲ್ಲೆಯ ಜಲಪಾತಗಳಿಗೆ ಜೀವ ಕಳೆ ಬಂದಿದ್ದು, ಅಘನಾಶಿನಿ ನದಿಗೆ ಹೆಚ್ಚಿನ ನೀರು ಹರಿದು ಬಂದಿದೆ. ಉಂಚಳ್ಳಿ ಜಲಪಾತದಲ್ಲಿ ಹೆಚ್ಚಿನ ನೀರು ರಭಸವಾಗಿ ಹರಿಯುವ ಮೂಲಕ ತನ್ನ ಸೌಂದರ್ಯ ಹೆಚ್ಚಿಸಿಕೊಂಡಿದೆ. ನಾರಾಯಣಪುರ ಜಲಾಶಯದಿಂದ 1 ಲಕ್ಷ ಕ್ಯೂಸೆಕ್ ನೀರು ಬಿಡುಗಡೆ ಹಿನ್ನೆಲೆ ರಾಯಚೂರು ತಾಲ್ಲೂಕಿನ ಕೃಷ್ಣಾ ನದಿ ದಂಡೆಯಲ್ಲಿರುವ ಕಾಡ್ಲೂರು ಉಪೇಂದ್ರ ತೀರ್ಥ ಕರಾರ್ಚಿತ ಪ್ರಾಣ ದೇವರ ದೇವಸ್ಥಾನ ಜಲಾವೃತಗೊಂಡಿದೆ.


## ಮಲಯಮಾರುತ



ಕಟ್ಟೆ ಎಂ ಎಸ್ ಕೃಷ್ಣಸ್ವಾಮಿ
ಸಾಹಿತಿ ಬರಹಗಾರ

ನಗು ಮುಖದವಳೇ
ನಲಿ ಶುಕದವಳೇ
ನವಿಲಂತೆ ಕುಣಿದವಳೇ
ಜಿಂಕೆಯಂತೆ ಜಿಗಿದವಳೇನಗು
ಮಾಯ ಮೃಗದಂತೆ ಬಂದವಳೇ
ಬಾನ ಚುಕ್ಕಿಯಂತೆ ಮಿಂಚಂವಳೇ
ನೀ ಅನುರಾಗದ ಮೋಹದಲಿ
ಒಂದಾದ ಹೃದಯಗಳ ಕೊಂದವಳೇ
ಅಂದದ ಹೂವಿನ ಶೃಂಗಾರದಲಿ
ನೋವಿನ ಶಯ್ಯೇಯ ಮುಳ್ಳಾದವಳೇ..
ತಂಪಾದ ವಸಂತ ಗಾಳಿಯಲಿ
ಬಿರುಗಾಳಿಯಾಗಿ ನೀ ಬಂದವಳೇ..
ಸುರಿಯುವ ವರ್ಷಾಧಾರೆಯಲಿ
ಬಿರು ಮಿಂಚು ಗುಡುಗಾದವಳೇ..
ಬೀರು ಸ್ವಾರ್ಥದ ನುಡಿಯಲ್ಲಿ
ಅರ್ತಿಯ ಮನವ ಜರಿದವಳೇ..
ಬಾಳಿನ ದೋಣಿ ಮುಳುಗಿ ತೇಲುತಲಿ
ಬಿಸಿಲಿನ ಬೇಗೆಯಲಿ
ಬೇಯುತಲಿ..
ನಾದ ಸ್ವರದಲಿ ಅಪಸ್ವರ
ಮೂಡಿ
ಬಿಸುಡು
ಮಲಯಮಾರುತ
ರಾಗವಾದೆ..






• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಆಗ ಗುಹನು ಪುನಃ ತನ್ನ ಪಟ್ಟಣಕ್ಕೆ ಹೋಗಿ ತನ್ನ ಜ್ಞಾತಿಗಳನ್ನು ಕರೆಯಿಸಿಕೊಂಡು ಭರತಾದಿಗಳನ್ನೂ ಸೇನೆಯನ್ನೂ ದಾಟಿಸಲು ಅವರಿಗೆ ಆಜ್ಞಾಪಿಸಿದನು. ಅವರು ಮಹಾಪ್ರಸಾದ ವೆಂದು ಗುಹನ ಮಾತನ್ನು ಶಿರಸಾವಹಿಸಿ ಸ್ವಸ್ತಿಕಾಕಾರದಲ್ಲಿ ನಿರ್ಮಿಸಲ್ಪಟ್ಟ ಐದುನೂರು ನಾವೆಗಳನ್ನು ತಂದರು. ಅವುಗಳಲ್ಲೊಂದು ಉತ್ತಮವಾದ ನಾವೆಯಲ್ಲಿ ಗುಹನು ಭರತನನ್ನೂ ಶತ್ರುಘ್ನನನ್ನ ಸುಮಿತ್ರಾದೇವಿ ಕೌಸಲಾದೇವಿ ಮೊದಲಾದ ರಾಜಸ್ತ್ರೀಯರನ್ನೂ ಪುರೋಹಿತರಾದ ವಸಿಷ್ಠ ವಾಮದೇವಾದಿಗಳನ್ನೂ ಏರಿಸಿಕೊಂಡನು. ಮಿಕ್ಕವರು ತಮ್ಮ ತಮ್ಮ ಮನಸ್ಸಿಗೆ ಬಂದ ನಾವೆಗಳಲ್ಲಿ ತಮ್ಮ ತಮ್ಮ ವಸ್ತುಗಳನ್ನು ತೆಗೆದುಕೊಂಡು ಏರುತ್ತಿರಲು ಆ ಜನರ ಸಂಭ್ರಮಧ್ವನಿಯ ಕೋಲಾಹಲವು ಸ್ವರ್ಗಲೋಕವನ್ನು ತುಡುಕುತ್ತಿತ್ತು. ಕೆಲವು ನಾವೆಗಳಲ್ಲಿ ಸ್ತ್ರೀಯರನ್ನೂ ಕೆಲವು ನಾವೆಗಳಲ್ಲಿ ಕುದುರೆಗಳನ್ನೂ ಕೆಲವು ನಾವೆಗಳಲ್ಲಿ, ದ್ರವ್ಯದ ಹೇರುಗಳನ್ನೂ ಏರಿಸಿ ಅಂಬಿಗರು ಆ ಸೇನೆಯನ್ನು ದಾಟಿಸಿದರು. ಈ ಪ್ರಕಾರ ಕೆಲವರು ನಾವೆಗಳಿಂದಲೂ ಕೆಲವರು ತೆಪ್ಪಗಳಿಂದಲೂ ಕೆಲವರು ಕುಂಭಗಳಿಂದಲೂ ಕೆಲವರು ಹರವಿಗಳಿಂದಲೂ ಕೆಲವರು ಈಜುವುದರಿಂದಲೂ ಗಂಗಾನದಿ ಯನ್ನು ದಾಟಿ ಮಧ್ಯಾಹ್ನ ಸಮಯದಲ್ಲಿ ಪ್ರಯಾಗದಲ್ಲಿದ್ದ ಅಕ್ಷಯವಟದ ಸಮೀಪಕ್ಕೆ ಹೋದರು. ಅವರು ತಮ್ಮ ತಮ್ಮ ಮನಸ್ಸಿಗೆ ಬಂದ ಸ್ಥಳಗಳಲ್ಲಿ ಪಾಳೆಯವಿಳಿದು ಕುದುರೆಗಳಿಗೆ ನೀರುಕುಡಿಸಿ ದಾರಿಯ ಬಳಲಿಕೆಯನ್ನು ಪರಿಹರಿಸಿಕೊಳ್ಳತೊಡಗಿದರು.

**ಭರದ್ವಾಜ ಮುನಿಗಳೊಡನೆ ಭರತನ ಸಂದರ್ಶನ**

ಆಮೇಲೆ ಭರತನು ಭರದ್ವಾಜಾಶ್ರಮವನ್ನು ನೋಡಬೇಕೆಂಬ ಬುದ್ಧಿಯಿಂದ ಆ ಆಶ್ರಮದ ಒಂದು ಹರದಾರಿಯಲ್ಲಿ ತನ್ನ ಬಲವನು ನಿಲಿಸಿ ಆಯುಧಗಳನ್ನು ಬಿಟ್ಟು ತಕ್ರಶ ಸಹನ ಪುರೋಹಿತನಾದ ವಸಿಷ್ಠ ಮುನೀಶ್ವರನನ್ನೂ ಗುರುಗಳಾದ ವಾಮದೇವಾದಿಗಳನ್ನೂ ಪ್ರಧಾನರನ್ನೂ ಕರೆದುಕೊಂಡು ಬಿಳಿಯಪಟ್ಟೆಯ ವಸ್ತ್ರವನ್ನು ಹೊದ್ದುಕೊಂಡು ಭರದ್ವಾಜಮುನೀಶ್ವರನ ಸಮೀಪಕ್ಕೆ ಹೋದನು. ಆ ಮುನಿಯು ವಸಿಷ್ಠ ಮುನೀಶ್ವರನನ್ನು ಕಂಡು ಎದ್ದು ನಿಂತುಕೊಂಡು ತನ್ನ ಶಿಷ್ಯರಿಂದ ಅರ್ಘ್ಯಪಾದ್ಯಾದಿ ಸತ್ಕಾರಗಳನ್ನು ಮಾಡಿಸಿದನು. ಸಮೀಪಕ್ಕೆ ಬಂದು ಅಭಿನಂದಿಸಿದ ಭರತನನ್ನು ಕಂಡು ಆತನು ದಶರಥರಾಯನ ಮಗನೆಂದು ನಿಶ್ಚಯಿಸಿ ಭರತಶತ್ರುಘ್ನರಿಗೂ ಅರ್ಘ್ಯಪಾದ್ಯಾದಿಸತ್ಕಾರಗಳನ್ನು ಮಾಡಿಸಿ ಕಂದಮೂಲ ಫಲಾಹಾರಗಳನ್ನು ಯಥಾಕ್ರಮದಿಂದ ಕೊಟ್ಟು ಭರತನನ್ನು ಕುರಿತು ಎಲೈ ರಾಜಕುಮಾರನೆ, ನಿನ್ನ ಆಯೋಧ್ಯಾಪಟ್ಟಣದಲ್ಲಿ ಭಂಡಾರ ಚತುರಂಗಬಲಗಳೂ ನಿನ್ನ ಮಂತ್ರಿಗಳೂ ಮಿತ್ರರೂ ಸೌಖ್ಯದಿಂದಿರುವರೆ ಎಂದು ಕೇಳಿದನು. ದಶರಥನು ಮೃತನಾದನೆಂಬುದನ್ನರಿತು ಅವನ ವಿಷಯವನ್ನು ಕೇಳಲಿಲ್ಲ. ಭರತನು ವಸಿಷ್ಠನನ್ನು ಮುಂದಿಟ್ಟುಕೊಂಡು ಭರದ್ವಾಜಮುನಿಗಳೆ, ನಿಮಗೆ ಕುಶಲವೆ ನಿಮಗೆ ನಿರ್ವಿಘ್ನವಾಗಿ ಅಗ್ನಿಹೋತ್ರವು ನಡೆಯುತ್ತಿರುವುದೆ ನಿಮ್ಮ ಆಶ್ರಮದಲ್ಲಿರುವ ಮೃಗಪಕ್ಷಿಗಳೂ ಮುನಿಗಳೂ ಸುಖವಾಗಿರುವರೆ ಎಂದು ಕೇಳಿದನು.

ಮುಂದುವರಿಯುವುದು...

# ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವ ಮುನ್ನ...!

ಆರೋಗ್ಯ ಸಮಸ್ಯೆಯ ಆಧಾರ ಮೇಲೆ ವೈದ್ಯರು ರಕ್ತ ಪರೀಕ್ಷೆ ಮೂತ್ರ ಪರೀಕ್ಷೆ, ಆನುವಂಶಿಕ ಪರೀಕ್ಷೆ ಅಥವಾ ಇಮೇಜಿಂಗ್ ಪರೀಕ್ಷೆಯಂತಹ ಯಾವುದೇ ರೀತಿಯ ವೈದ್ಯಕೀಯ ಪರೀಕ್ಷೆಯನ್ನು ಶಿಫಾರಸು ಮಾಡಬಹುದು. ಆದರೆ ಆ ಪರೀಕ್ಷೆಯನ್ನು ಮಾಡುವ ಮೊದಲು, ಖಂಡಿತವಾಗಿಯೂ ವೈದ್ಯರ ಬಳಿ ಕೆಲವೊಂದು ಪ್ರಶ್ನೆಗಳನ್ನು ಕೇಳಿ, ನಿಮ್ಮ ಗೊಂದಲವನ್ನು ನಿವಾರಿಸಿಕೊಳ್ಳುವುದು ಅತ್ಯಗತ್ಯ

ಯಾವುದೇ ಆರೋಗ್ಯ ಸಮಸ್ಯೆಗೆ ನಾವು ವೈದ್ಯರ ಬಳಿಗೆ ಹೋದಾಗ, ಸಣ್ಣ ಪುಟ್ಟ ಆರೋಗ್ಯ ಸಮಸ್ಯೆ ಬಿಟ್ಟು, ದೀರ್ಘಾವಧಿಯವರಗೆ ಕಾಣಿಸಿ ಕೊಂಡಿರುವ ಆರೋಗ್ಯ ಸಮಸ್ಯೆಗಳಾದರೆ ವೈದ್ಯರು ಚಿಕಿತ್ಸೆ ನೀಡುವ ಮೊದಲು, ನಮಗೆ ಕಾಣಿಸಿಕೊಂಡಿರುವ ಆರೋಗ್ಯ ಸಮಸ್ಯೆಗಳು ಏನೆಂಬುದನ್ನು ಮೊದಲಿಗೆ ಕಂಡು ಹಿಡಿಯಲು ಪ್ರಯತ್ನಿಸುತ್ತಾರೆ. ರೋಗಿಯನ್ನು ಹೊರಗಿನಿಂದ ನೋಡುವ ಮೂಲಕ ಆತನಲ್ಲಿ/ಆಕೆಯಲ್ಲಿ ಇರುವ ಆರೋಗ್ಯ ಸಮಸ್ಯೆಗಳನ್ನು ಪತ್ತೆಹಚ್ಚಲು ಸಾಧ್ಯವಿಲ್ಲ. ಇದಕ್ಕಾಗಿ, ಕೆಲವು ವೈದ್ಯಕೀಯ ಪರೀಕ್ಷೆಗಳನ್ನು ಮಾಡ ಬೇಕಾಗುತ್ತದೆ.



ಇದಕ್ಕಾಗಿ ಸಮಸ್ಯೆಯ ಮೂಲ ಪತ್ತೆಹಚ್ಚಲು ಕೆಲವೊಂದು ಬಗೆಯ ಆರೋಗ್ಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ಸಲಹೆ ನೀಡುತ್ತಾರೆ.


**ರಕ್ತ, ಮೂತ್ರದ ಪರೀಕ್ಷೆ :** ಮೊದಲ ವಿಧದ ಪರೀಕ್ಷೆಯು ದೇಹದ ದ್ರವ ವಿಶ್ಲೇಷಣೆಯಾಗಿದ್ದು ಇದರಲ್ಲಿ ರಕ್ತ ಮೂತ್ರ, ಕೀವು ಇತ್ಯಾದಿಗಳನ್ನು ಪರೀಕ್ಷಿಸುವ ಮೂಲಕ ರೋಗದ ಕಾರಣವನ್ನು ಕಂಡುಹಿಡಿಯಲು ಪ್ರಯತ್ನಿಸಲಾಗುತ್ತದೆ. ಇವುಗಳಲ್ಲಿ ಪ್ರಮುಖವಾದವು ರಕ್ತ ಮತ್ತು ಮೂತ್ರ ಪರೀಕ್ಷೆಗಳು, ಆದರೆ ಗ್ರಂಥಿ ಕ್ಷಯ ಇತ್ಯಾದಿ ಕೆಲವು ಕಾಯಿಲೆಗಳಲ್ಲಿ, ಗಡ್ಡೆಯಲ್ಲಿ ತುಂಬಿರುವ ಕೀವು ಪರೀಕ್ಷಿಸಿದ ನಂತರವೇ ಅದು ಮಾರಕವಾಗಿದೆಯೇ ಅಥವಾ ಇಲ್ಲವೇ ಎಂದು ತಿಳಿಯುತ್ತದೆ. **ಜೆನೆಟಿಕ್ ಪರೀಕ್ಷೆ:** ಎರಡನೇ ವಿಧದ ಪರೀಕ್ಷೆಯು ಜೆನೆಟಿಕ್ ಪರೀಕ್ಷೆಯಾಗಿದೆ. ಈ ಪರೀಕ್ಷೆಯಲ್ಲಿ, ಡಿಎನ್‌ಎ, ಕ್ರೋಮೋಸೋಮ್‌ಗಳು ಅಥವಾ ದೇಹದ ಮತ್ತು ರಕ್ತದ ಪ್ರೋಟೀನ್‌ಗಳನ್ನು ಪರೀಕ್ಷಿಸಲಾಗುತ್ತದೆ. ದೇಹದಲ್ಲಿ ಯಾವುದೇ ಅಸಹಜತೆ ಬೆಳೆಯುತ್ತಿದ್ದರೆ ಅಥವಾ ಜೆನೆಟಿಕ್ ಕಾರಣಗಳಿಂದ ಅದು ಬೆಳೆಯುವ ಸಾಧ್ಯತೆಯಿದ್ದರೆ, ಅದನ್ನು ಜೆನೆಟಿಕ್ ಪರೀಕ್ಷೆಯ ಮೂಲಕ ಕಂಡು ಹಿಡಿಯಬಹುದು.

**ಇಮೇಜಿಂಗ್ ಪರೀಕ್ಷೆಗಳು:** ಮೂರನೇ ವಿಧದ ಪರೀಕ್ಷೆ ಇಮೇಜಿಂಗ್ ಪರೀಕ್ಷೆ. ಇದರಲ್ಲಿ, ರಕ್ತ ಅಥವಾ ಯಾವುದೇ ದ್ರವವನ್ನು ದೇಹದಿಂದ ತೆಗೆದುಕೊಳ್ಳಲಾಗುವುದಿಲ್ಲ, ಅಥವಾ ಯಾವುದೇ ಸಿರಿಂಜ್, ಸೂಜಿ ಅಥವಾ ಯಾವುದೇ ಉಪಕರಣವನ್ನು ದೇಹ ದಲ್ಲಿ ಬಳಸಲಾಗುವುದಿಲ್ಲ. ಇದು ಕೇವಲ ಒಂದು ಸ್ಕ್ರೀನಿಂಗ್ ಪ್ರಕ್ರಿಯೆ ಯಾಗಿದ್ದು, ದೇಹದೊಳಗಿನ ಎಲ್ಲಾ ಅಂಗಗಳು ಸರಿಯಾಗಿ ಕಾರ್ಯ ನಿರ್ವಹಿ ಸುತ್ತಿವೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಲು ಕ್ಯಾಮೆರಾದ ಮೂಲಕ ಪ್ರಯತ್ನಿಸಲಾಗುತ್ತದೆ. ಅಲ್ಟ್ರಾಸೌಂಡ್, ಎಕ್ಸ್-ರೇ, ಎಂಆರ್‌ಐ, ಸಿಟಿ ಸ್ಕ್ಯಾನ್, ಪಿಟಿಐ ಸ್ಕ್ಯಾನ್ ಇತ್ಯಾದಿಗಳು ಇಮೇಜಿಂಗ್ ಪರೀಕ್ಷೆಯ ಭಾಗವಾಗಿದೆ.

# ಶುಂಠಿ ಬಳಸೋದ್ರಿಂದ ಕೂದಲು ಬೆಳೆಯುತ್ತೆ...!

ಕೂದಲು ಉದುರುವ ಸಮಸ್ಯೆ ಬಹಳಷ್ಟು ಮಂದಿಯನ್ನು ಕಾಡುತ್ತದೆ. ನಿಮ್ಮಲ್ಲೂ ಈ ಸಮಸ್ಯೆ ಇದ್ದರೆ ಶುಂಠಿಯು ಕೂದಲನ್ನು ಬೆಳೆಸಲು, ಬಲಶಾಲಿಯಾಗಿಸಲು ಸಹಾಯ ಮಾಡುತ್ತದೆ. ಪ್ರತಿಯೊಬ್ಬರೂ ತಮ್ಮ ಕೂದಲು ಬಲವಾಗಿ, ಉದ್ದವಾಗಿ, ದಪ್ಪವಾಗಿರಬೇಕೆಂದು ಬಯಸುತ್ತಾರೆ. ಆದರೆ ರಾಸಾಯನಿಕ ಉತ್ಪನ್ನಗಳನ್ನು ಬಳಸುವುದರಿಂದ ನಿಮ್ಮ ಕೂದಲಿಗೆ ಹಾನಿಯಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕರೂ ಕೂಡಾ ಬೋಳು ತಲೆ ಮತ್ತು ಕೂದಲು ಉದುರುವಿಕೆಯಿಂದ ಬಳಲುತ್ತಿದ್ದಾರೆ. ಕೂದಲಿನ ಬೆಳವಣಿಗೆಯ ಚಿಕಿತ್ಸೆಯ ಬೇಡಿಕೆಯೂ ಹೆಚ್ಚುತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ನೀವು ನೈಸರ್ಗಿಕ ವಸ್ತುಗಳ ಕಡೆಗೆ ಗಮನಹರಿಸುವುದು ಉತ್ತಮ. ಪೋಷಣೆಯ ಜೊತೆಗೆ ನಿಮ್ಮ ಕೂದಲಿಗೆ ಬಲವನ್ನು ನೀಡುವುದು ಮುಖ್ಯ.





**ಹೋಮಿಯೋಪತಿಯ ಸಹಾಯ:** ನೀವು ನೈಸರ್ಗಿಕ ವಿಧಾನಗಳಲ್ಲಿ ಕೂದಲು ಬೆಳೆಸಲು ಬಯಸಿದರೆ ಹೋಮಿಯೋಪತಿಯ ಸಹಾಯವನ್ನು ಪಡೆಯುವುದು ಪ್ರಯೋಜನಕಾರಿಯಾಗಬಲ್ಲದು. ಸರಿಯಾದ ಚಿಕಿತ್ಸೆಗಾಗಿ ನೀವು ಹೆಚ್ಚು ಚಿಂತಿಸಬೇಕಾಗಿಲ್ಲ ಎಂದು ಹೋಮಿಯೋಪತಿ ಚಿಕಿತ್ಸಾಲಯದ ಹೋಮಿಯೋಪತಿ ವೈದ್ಯೆಸ್ಮೃತಿ ಜುನ್‌ಜುನ್‌ವಾಲಾ ತಿಳಿಸಿದ್ದಾರೆ. ಕೂದಲು ಬೆಳೆಯಲು ಶುಂಠಿಯನ್ನು ಬಳಸುವ ವಿಧಾನಗಳು ಮತ್ತು ಅದರ ಪ್ರಯೋಜನಗಳನ್ನು ತಿಳಿಸಿದ್ದಾರೆ. ಶುಂಠಿಯ ಸಹಾಯದಿಂದ ಬೋಳು ತಲೆಯ ಮೇಲೆ ಕೂದಲು ಬೆಳೆಯಲು ಹೇಗೆ ಸಾಧ್ಯ ಎನ್ನುವುದನ್ನು ತಿಳಿಯೋಣ. **ಕೂದಲು ಮತ್ತೆ ಬೆಳೆಯಲು ಶುಂಠಿ ಸಹಾಯ ಮಾಡುತ್ತದೆಯೇ:** ಅಡುಗೆಯಲ್ಲಿ ಬಳಸುವ ಸಾಮಾನ್ಯ ಶುಂಠಿಯು ಉತ್ಕರ್ಷಣ ನಿರೋಧಕಗಳು ಜಿಂಜರಾಲ್‌ನಂತಹ ಕೆಲವು ಸಕ್ರಿಯ ಸಂಯುಕ್ತಗಳಿಂದ ಸಮೃದ್ಧವಾಗಿದೆ. ಇವು ನೆತ್ತಿಯಲ್ಲಿ ರಕ್ತ ಪರಿಚಲನೆ ಸುಧಾರಿಸುತ್ತದೆ ಮತ್ತು ತಲೆಯ ಬೋಳಾಗಿರುವ ಭಾಗಗಳಲ್ಲಿ ಕೂದಲು ಕಿರುಚೀಲಗಳನ್ನು ಉತ್ತೇಜಿಸುತ್ತದೆ. ಈ ಕೂದಲು ಕಿರುಚೀಲಗಳು ನಿಮ್ಮ ಹೊಸ ಕೂದಲು ಬೆಳೆಯಲು ಅವಕಾಶ ನೀಡುತ್ತವೆ.

**ಕೂದಲಿಗೆ ಶುಂಠಿಯನ್ನು ಹಚ್ಚುವುದರಿಂದಾಗುವ ಪ್ರಯೋಜನಗಳು:** ಕೂದಲಿಗೆ ಶುಂಠಿಯನ್ನು ಹಚ್ಚುವುದರಿಂದಾಗುವ ಪ್ರಯೋಜನಗಳ ಬಗ್ಗೆ ಮಾತನಾಡುತ್ತಾ, ಶುಂಠಿ ನಮ್ಮ ಕೂದಲಿನ ಬೆಳವಣಿಗೆಗೆ ತುಂಬಾ ಪ್ರಯೋಜನಕಾರಿ. ಇದರ ಆಂಟಿಫಂಗಲ್ ಗುಣಗಳು ತಲೆಹೊಟ್ಟು ಮತ್ತು ನೆತ್ತಿಯ ಹೊರಪದರ ಬೆಳೆಯುವುದನ್ನು ತಡೆಯುತ್ತದೆ. ಶುಂಠಿಯ ನಿರಂತರ ಬಳಕೆಯು ಕೂದಲಿಗೆ ಹೊಳಪನ್ನು ನೀಡುತ್ತದೆ. ಶುಂಠಿಯು ವಿಟಮಿನ್‌ಗಳು ಖನಿಜಗಳು ಮತ್ತು ಕೊಬ್ಬಿನಾಮ್ಲಗಳಿಂದ ಸಮೃದ್ಧವಾಗಿದೆ. ಇದು ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುವುದಲ್ಲದೆ, ಕೂದಲುಮುರಿಯುವುದನ್ನೂ ತಡೆಯುತ್ತದೆ.

## ಶುಂಠಿ ಎಣ್ಣೆ

**ಒಂದು ಕಪ್ ತೆಂಗಿನ ಎಣ್ಣೆ ಮತ್ತು ಅರಳೆಣ್ಣೆಯನ್ನು ತೆಗೆದುಕೊಂಡು ಅದರಲ್ಲಿ ಕತ್ತರಿಸಿದ ಶುಂಠಿ ತುಂಡುಗಳನ್ನು ಹಾಕಿ ಕುದಿಸಿ ನಂತರ ಕೆಲವು ದಿನಗಳವರೆಗೆ ಬಿಡಿ. ಈ ಎಣ್ಣೆಯನ್ನು ನಿಯಮಿತವಾಗಿ ಬಳಸುವುದರಿಂದ, ನಿಮ್ಮ ಕೂದಲಿನ ಮೇಲೆ ಪರಿಣಾಮ ಬೀರುವುದನ್ನು ನೀವು ಕಾಣುತ್ತೀರಿ. ಶುಂಠಿ ನೀರು ಉತ್ತಮ ಗುಣಮಟ್ಟದ ಕೂದಲನ್ನು ಪಡೆಯಲು, ಶುಂಠಿ ನೀರನ್ನು ಕುದಿಸಿ ಅದನ್ನು ತಲೆಗೆ ಸ್ನಾನ ಮಾಡುವಾಗ ಬಳಸಿ. ಇದು ಕೂದಲಿನ ಬೆಳವಣಿಗೆಗೆ ಪ್ರಯೋಜನಕಾರಿಯಾಗಿದೆ.**



**ಕೂದಲ ಬೆಳವಣಿಗೆಗೆ ಶುಂಠಿಯನ್ನು ಹೇಗೆ ಬಳಸುವುದು:** ಕೂದಲು ಚೆನ್ನಾಗಿ ಬೆಳೆಯಲು ಶುಂಠಿಯನ್ನು ಈ ಕೆಳಗಿನ ವಿಧಾನಗಳಲ್ಲಿ ಬಳಸಬಹುದು. ಇದರಲ್ಲಿ ಮೊದಲ ವಿಧಾನವೆಂದರೆ ಶುಂಠಿ ಹೇರ್ ಪ್ಯಾಕ್ ಇದನ್ನು ತಯಾರಿಸಲು, ನೀವು ಮೊಸರು, ತೆಂಗಿನ ಎಣ್ಣೆ ಮತ್ತು ಅರಳೆಣ್ಣೆಯಲ್ಲಿ ಶುಂಠಿ ರಸವನ್ನು ಬೆರೆಸಿ ಕೂದಲು ತೊಳೆಯುವ ಅರ್ಧ ಗಂಟೆ ಮೊದಲು ನೆತ್ತಿಗೆ ಹಚ್ಚಬೇಕು. ಈ ಪಾಕವಿಧಾನ ಹೊಸ ಕೂದಲಿನ ಬೆಳವಣಿಗೆಯಲ್ಲಿ ಪ್ರಯೋಜನಕಾರಿಯಾಗಿದೆ.

### ರಷ್ಯಾ ರಣ ಭೀಕರ ವಾಯುದಾಳಿ: ಆಪರೇಷನ್ ಸ್ಪೈಡರ್‌ವೆಬ್‌ಗೆ ಪ್ರತೀಕಾರ

# ಉಕ್ರೇನ್ ಮೇಲೆ ಇದುವರೆಗಿನ ಅತಿದೊಡ್ಡ ವೈಮಾನಿಕ ದಾಳಿ

**ಕೀವ್:** ಉಕ್ರೇನ್ ಮೇಲೆ ರಷ್ಯಾ ಮುಂಜಾನೆ ಅತಿದೊಡ್ಡ ವೈಮಾನಿಕ ದಾಳಿ ನಡೆಸಿದೆ. ಇದರೊಂದಿಗೆ 3 ವರ್ಷಗಳ ಸಂಘರ್ಷ ಕೊನೆಗೊಳ್ಳುವ ವಿಶ್ವಾಸ ಮತ್ತಷ್ಟು ಕಮರಿದೆ. ಶಾಂತಿ-ಮಾತುಕತೆ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ. 2022ರಲ್ಲಿ ವರ್ಷಗಳ ಹಿಂದೆ ರಷ್ಯಾ-ಉಕ್ರೇನ್ ಯುದ್ಧ ಆರಂಭವಾದ ಬಳಿಕ ರಷ್ಯಾ ನಡೆಸಿದ ಅತಿದೊಡ್ಡ ವಾಯು ದಾಳಿ ಇದೆಂದು ಹೇಳಲಾಗಿದೆ. ಇತ್ತೀಚೆಗೆ ರಷ್ಯಾಕ್ಕೆ ರಹಸ್ಯವಾಗಿ ಡ್ರೋನ್‌ಗಳನ್ನು ಕೊಂಡೊಯ್ದು ಉಕ್ರೇನ್ ನಡೆಸಿದ 'ಆಪರೇಷನ್ ಸ್ಪೈಡರ್‌ವೆಬ್'ಗೆ ಪ್ರತೀಕಾರವಾಗಿ ರಷ್ಯಾ ಈ ದಾಳಿ ನಡೆಸಿದೆ. ರಷ್ಯಾ ಒಟ್ಟು ಒಂದೇ ರಾತ್ರಿ 537 ವೈಮಾನಿಕ ದಾಳಿಗಳನ್ನು ನಡೆಸಿದೆ. ಇದರಲ್ಲಿ477 ಡ್ರೋನ್ ಹಾಗೂ 60 ಕ್ಷಿಪಣಿಗಳು ಸೇರಿವೆ. ಈ ಪೈಕಿ 249 ಅನ್ನು ಹೊಡೆದುರುಳಿಸಲಾಯಿತು. 266 ಅಸ್ತ್ರಗಳನ್ನು ಎಲೆಕ್ಟ್ರಾನಿಕ್ ಜಾಮರ್ ಮೂಲಕ ತಡೆಯಲಾಗಿದ್ದು, ಅವು ವಿಫಲಗೊಂಡಿವೆ ಎಂದು ಉಕ್ರೇನ್ ವಾಯುಪಡೆ ಹೇಳಿದೆ. ರಷ್ಯಾದ ದಾಳಿ ಬೆನ್ನಲ್ಲೇ ಪೋಲೆಂಡ್ ಮತ್ತು ಮಿತ್ರ ದೇಶಗಳು ಮುನ್ನೆಚ್ಚರಿಕಾ ಕ್ರಮವಾಗಿ ವಾಯುರಕ್ಷಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಿವೆ.

**ಅಮೆರಿಕದ ಜತೆ ಚರ್ಚೆ:** ಮತ್ತೊಂದು ಬೆಳವಣಿಗೆಯಲ್ಲಿ, ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಮುಖ್ಯಸ್ಥ ಜಾನ್ ರಾಠಯಟ್‌ಕ್ಲಿಫ್ ಜತೆ ದೂರವಾಣಿ ಮೂಲಕ ಚರ್ಚೆ ನಡೆಸಿರುವುದಾಗಿ ರಷ್ಯಾದ ವಿದೇಶಾಂಗ ಗುಪ್ತಚರ ವಿಭಾಗದ ಮುಖ್ಯಸ್ಥ ಸೆರ್ಜಿ ನಾರಿಶ್ಕಿನ್ ಹೇಳಿದ್ದಾರೆ. ಉಭಯ ದೇಶಗಳು ಪರಸ್ಪರ ಹಿತಾಸಕ್ತಿಯುಳ್ಳ ವಿಚಾರಗಳ ಬಗ್ಗೆ ಚರ್ಚೆ ನಡೆಸಿವೆ ಎಂದು ಟೆಲಿಗ್ರಾಂ ವೇದಿಕೆಯ ಮೂಲಕ ಭಾನುವಾರ ರಷ್ಯಾದ ಅಧಿಕಾರಿ ಮಾಹಿತಿ ನೀಡಿದ್ದಾರೆ.



ಮೂರು ವರ್ಷಗಳ ಸಂಘರ್ಷ

**ಎಫ್-16 ಪೈಲಟ್ ಸಾವು:** ರಷ್ಯಾದ ವಾಯುದಾಳಿ ವೇಳೆ ಉಕ್ರೇನ್‌ಗೆ ಸೇರಿದ 'ಎಫ್-16' ಯುದ್ಧ ವಿಮಾನ ಧ್ವಂಸಗೊಂಡಿದ್ದು ಪೈಲಟ್ ಮೃತಪಟ್ಟಿದ್ದಾರೆ. ಎಫ್-16 ಯುದ್ಧವಿಮಾನದ ಮೂಲಕ ರಷ್ಯಾದ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಉಕ್ರೇನ್ ವಾಯುಪಡೆ ಹೊಡೆದುರುಳಿಸುತ್ತಿತ್ತು. ಈ ವೇಳೆ ಉಕ್ರೇನ್ ಯುದ್ಧವಿಮಾನ ಪತನಗೊಂಡಿತು. ಪೈಲಟ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

**ಗ್ರಾಮ ವಶವೆಂದ ರಷ್ಯಾ:** ಉಕ್ರೇನ್-ರಷ್ಯಾ ಗಡಿಯಲ್ಲಿರುವ ಡೊನೆಟ್ಸ್ಕ್ ಪ್ರಾಂತ್ಯದ ನೋಕ್ರೈನ್‌ಕಾ ಗ್ರಾಮವನ್ನು ವಶಪಡಿಸಿಕೊಂಡಿರುವುದಾಗಿ ರಷ್ಯಾ ಹೇಳಿದೆ. ಉಕ್ರೇನ್‌ನ ಡೊನೆಟ್ಸ್ಕ್ ಪ್ರಾಂತ್ಯವು ಭಾಗಶಃ ರಷ್ಯಾ ಆಕ್ರಮಿತ ಪ್ರದೇಶದಲ್ಲಿದ್ದು, ಇಲ್ಲಿನ ಕೆಲವೊಂದು ಭಾಗಗಳಲ್ಲಿ ರಷ್ಯಾ ಪ್ರಾಬಲ್ಯ ಸಾಧಿಸಿದೆ. ಆದರೆ ಈ ಪ್ರಯತ್ನದಲ್ಲಿ ಸಾಕಷ್ಟು ಯೋಧರು ಮತ್ತು ಶಸ್ತಾಸ್ತ್ರಗಳನ್ನು ರಷ್ಯಾ ಕಳೆದುಕೊಂಡಿದೆ.

**ನೆಲಬಾಂಬ್ ಒಪ್ಪಂದ ರದ್ದು:** ಈ ಮಧ್ಯೆ, ನೆಲಬಾಂಬ್ ಉತ್ಪಾದನೆ, ಸಂಗ್ರಹ, ಬಳಕೆಯನ್ನು ನಿರ್ಬಂಧಿಸುವ ಒಟ್ಟಾವಾ ಒಪ್ಪಂದದಿಂದ ಉಕ್ರೇನ್ ಹೊರಬಂದಿರುವುದಾಗಿ ದೇಶದ ಅಧ್ಯಕ್ಷ ಝೆಲೆನ್‌ಸ್ಕಿ ಭಾನುವಾರ ಘೋಷಿಸಿದ್ದಾರೆ. 1997ರಲ್ಲಿ ಈ ಒಪ್ಪಂದಕ್ಕೆ ಉಕ್ರೇನ್ ಸಹಿ ಹಾಕಿತ್ತು. ಒಪ್ಪಂದವನ್ನು ರದ್ದುಗೊಳಿಸಿ ಹೊರಬರುವ ಮೂಲಕ ರಷ್ಯಾ ಸೇನೆಯ ವಿರುದ್ಧ ನೆಲಬಾಂಬ್ ಬಳಕೆ ಮೂಲಕ ಸಂಘರ್ಷ ಹೆಚ್ಚಿಸುವ ಸುಳಿವನ್ನು ಉಕ್ರೇನ್ ನೀಡಿದೆ. ರಷ್ಯಾ ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಹೀಗಾಗಿ ಉಕ್ರೇನ್ ಯೋಧರು ಮತ್ತು ನಾಗರಿಕರ ವಿರುದ್ಧ ದಾಳಿಗೆ ನೆಲಬಾಂಬ್ ಬಳಸುತ್ತಿದೆ. ಇದಕ್ಕೆ ಪ್ರತೀಕಾರವಾಗಿ ಉಕ್ರೇನ್ ಸಹ ಇನ್ನು ಮುಂದೆ ನೆಲಬಾಂಬ್ ಬಳಸುವ ನಿರೀಕ್ಷೆಯಿದೆ.

**ರಷ್ಯಾದ ಡ್ರೋನ್, ಕಾಪ್ಟರ್ ನಾಶ**

**ರಷ್ಯಾ ದಾಳಿಗೆ ಪ್ರತಿಯಾಗಿ ಉಕ್ರೇನ್ ಸಹ ಕ್ರಿಮಿಯಾದಲ್ಲಿರುವ ವಾಯುನೆಲೆ ಮೇಲೆ ರಾತ್ರೋರಾತ್ರಿ ಡ್ರೋನ್ ದಾಳಿ ಮಾಡಿದೆ. ಈ ವೇಳೆ ರಷ್ಯಾದ ಕಿರೋವ್ಸ್ಕೆ ವಾಯುನೆಲೆಯಲ್ಲಿದ್ದ ಡ್ರೋನ್‌ಗಳು ಎಂಐ-8, ಎಂಐ-26 ಹೆಲಿಕಾಪ್ಟರ್‌ಗಳು, ವಾಯು ರಕ್ಷಣಾ ವ್ಯವಸ್ಥೆ, ಶಸ್ತಾಸ್ತ್ರ ಸಂಗ್ರಹಗಾರಗಳು ನಾಶವಾಗಿವೆ ಎಂದು ಉಕ್ರೇನ್ ಹೇಳಿದೆ.**

> **ಸಂಘರ್ಷ ವಲಯದಿಂದ ದೂರದಲ್ಲಿರುವ ಪಶ್ಚಿಮ ಉಕ್ರೇನ್‌ನ ಪ್ರದೇಶಗಳನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ. ಆದರೆ, ದಾಳಿಯಲ್ಲಿ72 ವರ್ಷದ ಒಬ್ಬ ಉಕ್ರೇನ್ ನಾಗರಿಕರ ಮೃತಪಟ್ಟಿದ್ದಾರೆ. ರಷ್ಯಾದ ಡ್ರೋನ್ ಕಾರ್‌ಗೆ ಅಪ್ಪಳಿಸಿದಾಗ ಅದು ಸ್ಫೋಟಗೊಂಡು ಅವರು ಮೃತಪಟ್ಟಿದ್ದಾರೆ**
>
> **-ನಿಪ್ರೊಪೆಟ್ರೊವ್‌ಸ್ಕ್ , ಗವರ್ನರ್ ಸೆರ್ಹಿ ಲೈಸಕ್**

## ಭಾರತ- ಅಮೆರಿಕ ನಡುವೆ ವ್ಯಾಪಾರ ಒಪ್ಪಂದ

**ನವದೆಹಲಿ:** ಭಾರತ, ಅಮೆರಿಕ ನಡುವಿನ ಬಹುನಿರೀಕ್ಷಿತ ಮಧ್ಯಂತರ ವ್ಯಾಪಾರ ಒಪ್ಪಂದ ಜು. 8 ರೊಳಗೆ ಘೋಷಣೆಯಾಗುವ ಸಾಧ್ಯತೆಗಳಿವೆ.ಮುಖ್ಯ ಸಮಾಲೋಚಕ, ವಾಣಿಜ್ಯ ಇಲಾಖೆಯ ವಿಶೇಷ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ನೇತೃತ್ವದ ಭಾರತೀಯ ತಂಡವು ಮಾತುಕತೆಗಳನ್ನು ಅಂತಿಮಗೊಳಿಸಲು ವಾಷಿಂಗ್ಟನ್‌ಗೆ ತಲುಪಿದೆ.ವಿಶ್ವಾದ್ಯಂತ ದೇಶಗಳ ಮೇಲೆ ಪರಸ್ಪರ ಸುಂಕಗಳನ್ನು ವಿಧಿಸಲು ಟ್ರಂಪ್ ಅವರ ಗಡುವು ಜುಲೈ 9 ರಂದು ಕೊನೆಗೊಳ್ಳುತ್ತಿರುವುದರಿಂದ ಈ ಒಪ್ಪಂದವು ಸಕಾಲದಲ್ಲಿ ಬಂದಿದೆ. ಭಾರತದ ಆಮದುಗಳ ಮೇಲಿನ 26 ಪ್ರತಿಶತ ಸುಂಕಗಳನ್ನು



ಅಮೆರಿಕ ಜುಲೈ 9ರವರೆಗೆ ಸ್ಥಗಿತಗೊಳಿಸಿದೆ ಇದನ್ನು ಟ್ರಂಪ್ ಏಪ್ರಿಲ್ 2 ರಂದು ವ್ಯಾಪಾರ ಅಂತರವನ್ನು ಕಡಿಮೆ ಮಾಡಲು ಘೋಷಿಸಿದ್ದರು ಆದರೆ 10 ಪ್ರತಿಶತದ ಮೂಲ ಸುಂಕ ಇನ್ನೂ ಇದೆ. ಭಾರತವು ಹೆಚ್ಚುವರಿ 26 ಪ್ರತಿಶತ ಸುಂಕದಿಂದ ಸಂಪೂರ್ಣ ವಿನಾಯಿತಿಯನ್ನು ಕೋರುತ್ತಿದೆ. ಈ ವರ್ಷದ ಅಕ್ಟೋಬರ್ ವೇಳೆಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಹು-ವಲಯ, ಸಮಗ್ರ ಮೊದಲ ಹಂತದ ಕಡೆಗೆ ಎರಡೂ ಕಡೆಯವರು ಕೆಲಸ ಮಾಡುತ್ತಿದ್ದಾರೆ.ಇತ್ತೀಚೆಗೆ, ಟ್ರಂಪ್ ಭಾರತದೊಂದಿಗೆ ಕೆಲಸದಲ್ಲಿ ಪ್ರಮುಖ ವ್ಯಾಪಾರ ಒಪ್ಪಂದದ ಬಗ್ಗೆ ಪದೇ ಪದೇ ಸುಳಿವು ನೀಡಿದ್ದಾರೆ. ಕಳೆದ ವಾರ, ತಮ್ಮ ಆಡಳಿತವು ಎಲ್ಲಾ ವ್ಯಾಪಾರ ಅಡೆತಡೆಗಳನ್ನು ತೆಗೆದುಹಾಕಲು ನೋಡುತ್ತಿದೆ ಎಂದು ಅವರು ಹೇಳಿದರು, ಅದನ್ನು ಅವರು ಯೋಚಿಸಲಾಗದು ಎಂದು ಕರೆದರು. ಪ್ರಸ್ತಾವಿತ ವ್ಯಾಪಾರ ಒಪ್ಪಂದದಲ್ಲಿ ಜವಳಿ, ರತ್ನಗಳು ಮತ್ತು ಆಭರಣಗಳು, ಚರ್ಮದ ಸರಕುಗಳು, ಉಡುಪುಗಳು, ಪ್ಲಾಸ್ಟಿಕ್‌ಗಳು, ರಾಸಾಯನಿಕಗಳು, ಸೀಗಡಿ, ಎಣ್ಣೆ ಬೀಜಗಳು, ದ್ರಾಕ್ಷಿಗಳು ಮತ್ತು ಬಾಳೆಹಣ್ಣುಗಳಂತಹ ಕಾರ್ಮಿಕ-ತೀವ್ರ ವಲಯಗಳಿಗೆ ಸುಂಕ ರಿಯಾಯಿತಿಗಳನ್ನು ಭಾರತ ಬಯಸುತ್ತಿದೆ.

# ಪಾದರಕ್ಷೆಗಳ ಬಳಕೆ ಮಾಡಿಕೊಂಡಿದ್ದು ವ್ಯಾಪಕ ಟೀಕೆಗೆ ಗುರಿ

### ಕೊಲ್ಹಾಪುರಿ ಚಪ್ಪಲಿ ವಿನ್ಯಾಸ ಕದ್ದಿದ್ದನ್ನು ಕೊನೆಗೂ ಒಪ್ಪಿಕೊಂಡ ಪ್ರಸಿದ್ಧ ಫ್ಯಾಷನ್ ಬ್ರ್ಯಾಂಡ್ ಪ್ರಾಡಾ

• **ಉದಯವಾಹಿನಿ, ಪ್ಯಾರಿಸ್**

ಇಟಾಲಿಯನ್ ಐಷಾರಾಮಿ ಫ್ಯಾಷನ್ ಬ್ರ್ಯಾಂಡ್ ಪ್ರಾಡಾ ತನ್ನ ಸ್ಪ್ರಿಂಗ್-ಸಮ್ಮರ್ 2026 ಪುರುಷರ ಸಂಗ್ರಹಣೆಯಲ್ಲಿ ಕೊಲ್ಹಾಪುರಿ ಚಪ್ಪಲಿಗಳನ್ನು ಹೋಲುವ ಪಾದರಕ್ಷೆಗಳ ಬಳಕೆ ಮಾಡಿಕೊಂಡಿದ್ದು ವ್ಯಾಪಕ ಟೀಕೆಗೆ ಗುರಿಯಾಗಿದೆ. ಇದರ ಬೆನ್ನಲ್ಲೇ ಟೀಕೆಗೆ ಅಧಿಕೃತವಾಗಿ ಪ್ರತಿಕ್ರಿಯಿಸಿದ್ದು, ವಿನ್ಯಾಸಗಳು ಸಾಂಪ್ರದಾಯಿಕ ಭಾರತೀಯ ಕರಕುಶಲತೆಯಿಂದ ಸ್ಫೂರ್ತಿ ಪಡೆದಿವೆ ಎಂದು ಒಪ್ಪಿಕೊಂಡಿದೆ. ಭೌಗೋಳಿಕ ಸೂಚ್ಯಂಕ ಸ್ಥಾನಮಾನವನ್ನು ಹೊಂದಿರುವ ಪರಂಪರೆಯ ಭಾರತೀಯ ಉತ್ಪನ್ನವಾದ ಕೊಲ್ಹಾಪುರಿ ಚಪ್ಪಲಿಗಳಿಗೆ ಬಲವಾದ ಹೋಲಿಕೆಯನ್ನು ಹೊಂದಿರುವ ಚರ್ಮದ ಚಪ್ಪಲಿಗಳನ್ನು ಪ್ರಾಡಾ ತನ್ನ ಇತ್ತೀಚಿನ ಫ್ಯಾಷನ್ ಶೋವೊಂದರಲ್ಲಿ ಬಳಕೆ ಮಾಡಿಕೊಂಡಿತ್ತು. ಇದು ವಿವಾದಕ್ಕೆ ಎಡೆ ಮಾಡಿಕೊಟ್ಟಿತ್ತು. ಆದರೆ, ಬ್ರ್ಯಾಂಡ್‌ನ ಮೂಲ ಪ್ರದರ್ಶನ ಟಿಪ್ಪಣಿಗಳಲ್ಲಿ ಚಪ್ಪಲಿಗಳ ಭಾರತೀಯ ಮೂಲದ ಬಗ್ಗೆ ಯಾವುದೇ ಉಲ್ಲೇಖವಿಲ್ಲದೆ, ಸಾಮಾನ್ಯವಾಗಿ ತನ್ನದೇ ಬ್ರ್ಯಾಂಡ್ ಎಂಬ ರೀತಿಯಲ್ಲಿ ಬಿಂಬಿಸಲಾಗಿತ್ತು.

**ಜಿಐ ಟ್ಯಾಗ್ ದುರ್ಬಳಕೆಗೆ ವಿರೋಧ:** ಇದಕ್ಕೆ ಭಾರತೀಯ ಫ್ಯಾಷನ್ ಪ್ರೀಯರು ಹಾಗೂ ಮಹಾರಾಷ್ಟ್ರದ ಕುಶಲಕರ್ಮಿಗಳ ಗುಂಪುಗಳಿಂದ ವಿರೋಧ ವ್ಯಕ್ತವಾಗಿತ್ತು. ಈ ವಿಷಯಕ್ಕೆ ಪ್ರತಿಕ್ರಿಯೆಯಾಗಿ, ಪ್ರಾಡಾದ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಮುಖ್ಯಸ್ಥ ಮತ್ತು ಕಂಪನಿಯ ಮಾಲೀಕನ ಪುತ್ರ ಲೊರೆಂಜೊ ಬೆರ್ಟೆಲ್ಲಿ, ಮಹಾರಾಷ್ಟ್ರ ವಾಣಿಜ್ಯ, ಕೈಗಾರಿಕೆ, ಕೃಷಿ ಮಂಡಳಿ ಔಪಚಾರಿಕ ಪತ್ರವೊಂದನ್ನು ಕಳುಹಿಸಿ, ಚಪ್ಪಲಿಯ ಮೂಲ ವಿನ್ಯಾಸವನ್ನು ಬಳಕೆ ಮಾಡಿಕೊಂಡಿರುವುದಾಗಿ ಒಪ್ಪಿಕೊಂಡಿದ್ದಾರೆ.



ಇತ್ತೀಚಿನ ಪ್ರಾಡಾ ಪುರುಷರ 2026ರ ಫ್ಯಾಷನ್ ಪ್ರದರ್ಶನದಲ್ಲಿ ಕಾಣಿಸಿಕೊಂಡಿರುವ ಚಪ್ಪಲಿಗಳು ಶತಮಾನಗಳಷ್ಟು ಹಳೆಯದಾದ ಸಾಂಪ್ರದಾಯಿಕ ಭಾರತೀಯ ಕರಕುಶಲ ಪಾದರಕ್ಷೆಗಳಿಂದ ಸ್ಫೂರ್ತಿ ಪಡೆದಿವೆ ಎಂದು ನಾವು ಒಪ್ಪಿಕೊಳ್ಳುತ್ತೇವೆ ಎಂದು ಬೆರ್ಟೆಲ್ಲಿ ಪತ್ರದಲ್ಲಿ ಬರೆದಿದ್ದಾರೆ.

ಮಹಾರಾಷ್ಟ್ರ ವಾಣಿಜ್ಯ, ಕೈಗಾರಿಕೆ. ಕೃಷಿ ಮಂಡಳಿ ಈ ಹಿಂದೆ ಕೊಲ್ಹಾಪುರಿಗಳಿಗೆ ಸಂಬಂಧಿಸಿದ ಜಿಐ ಟ್ಯಾಗ್ ಅನ್ನು ಪರಿಗಣಿಸಿ ಸರಿಯಾದ ಮನ್ನಣೆ ಇಲ್ಲದೆ ವಿನ್ಯಾಸವನ್ನು ಬಳಕೆ ಮಾಡಿರುವುದು ಸಾಂಪ್ರದಾಯಿಕ ಕುಶಲಕರ್ಮಿಗಳ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿತ್ತು. ಅಲ್ಲದೇ, ಗುಣಲಕ್ಷಣದ ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿತ್ತು. ಮಂಡಳಿಯು ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಸಂಪರ್ಕಿಸಿ, ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಿಸಿತ್ತು. ಈ ಎಲ್ಲಾ ಟೀಕೆಗಳ ಬೆನ್ನಲ್ಲೇ ಪ್ರಾಡಾ ಕಂಪನಿಯ ತಪ್ಪೊಪ್ಪಿಗೆ ವಿವಾದದ ತೀವ್ರತೆಯನ್ನು ಕಡಿಮೆ ಮಾಡಬಹುದಾದರೂ, ಈ ಪ್ರಕರಣವು ಮತ್ತೊಮ್ಮೆ ಜಾಗತಿಕ ಗಮನವನ್ನು ಸೆಳೆದಿದೆ.

ಭಾರತೀಯ ಕರಕುಶಲ ರೂಪಗಳು ಐಷಾರಾಮಿ ಸೌಂದರ್ಯ ಶಾಸ್ತ್ರದ ಮೇಲೆ ಹೆಚ್ಚು ಪ್ರಭಾವ ಬೀರುತ್ತಿರುವುದರಿಂದ, ಹೆಚ್ಚು ಜವಾಬ್ದಾರಿಯುತ ಪ್ರಾತಿನಿಧ್ಯ, ಅವುಗಳ ಹಿಂದಿನ ಸಮುದಾಯಗಳ ಸ್ಪಷ್ಟವಾದ ಮನ್ನಣೆಗೆ ಬೇಡಿಕೆ ಹೆಚ್ಚುತ್ತಿದೆ.

**ವಾಣಿಜ್ಯಿಕ ಬಳಕೆ ಮಾಡಿಲ್ಲ ಸ್ಪಷ್ಟನೆಕೊಟ್ಟ ಇಟಲಿ ಬ್ರ್ಯಾಂಡ್**

**ಪಾದರಕ್ಷೆಗಳು ಇನ್ನೂ ಆರಂಭಿಕ ವಿನ್ಯಾಸದ ಹಂತದಲ್ಲಿವೆ ಮತ್ತು ಅವುಗಳನ್ನು ವಾಣಿಜ್ಯೀಕರಿಸಲಾಗುವುದಿಲ್ಲ. ವಾಣಿಜ್ಯಿಕ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವುದಕ್ಕೂ ಮುನ್ನ ಸ್ಥಳೀಯ ಭಾರತೀಯ ಕುಶಲಕರ್ಮಿರನ್ನು ವಿಶ್ವಾಸಕ್ಕೆ ಪಡೆಯಲಾಗುವುದು. ಅವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ. ಪ್ರಾಡಾ ವಕ್ತಾರರು ಕೂಡ ವಿನ್ಯಾಸವನ್ನು ನಕಲು ಮಾಡಿರುವದನ್ನು ದೃಢಪಡಿಸಿದ್ದು, ಕಂಪನಿಯು ಯಾವಾಗಲೂ ಕರಕುಶಲತೆ, ಪರಂಪರೆ ಮತ್ತು ವಿನ್ಯಾಸ ಸಂಪ್ರದಾಯಗಳನ್ನು ಆಚರಿಸುತ್ತದೆ ಎಂದು ಹೇಳಿದ್ದಾರೆ.**

## ಬಿಜೆಪಿ ಜತೆಗಿನ ಮೈತ್ರಿ ಸಮರ್ಥಿಸಿಕೊಂಡ ಪಳನಿಸ್ವಾಮಿ

**ಚೆನ್ನೈ:** ಬಿಜೆಪಿ ಜೊತೆಗಿನ ತಮ್ಮ ಪಕ್ಷದ ಚುನಾವಣಾ ಮೈತ್ರಿಯನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಿರುವ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ ಪಳನಿಸ್ವಾಮಿ, 30 ವರ್ಷಗಳಿಗೂ ಹೆಚ್ಚು ಕಾಲ ತಮಿಳುನಾಡನ್ನು ಆಳಿದ ತಮ್ಮ ಪಕ್ಷದ ಮೇಲೆ ಯಾರೂ, ಎಷ್ಟೇ ದೊಡ್ಡವರಾಗಿದ್ದರೂ, ಪ್ರಾಬಲ್ಯ ಸಾಧಿಸಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಎಐಎಡಿಎಂಕೆ ಮೇಲೆ ಬಿಜೆಪಿ ಮೇಲುಗೈ ಸಾಧಿಸುತ್ತದೆ ಎಂಬ ಬಲವಾದ ಟೀಕೆಯನ್ನು ಉಲ್ಲೇಖಿಸಿದ ಪಳನಿಸ್ವಾಮಿ, ತಮ್ಮ ಪಕ್ಷವು 50 ವರ್ಷಗಳಿಗಿಂತ ಹಳೆಯದು; ಅದು ಸುಮಾರು 31 ವರ್ಷಗಳಿಂದ ತಮಿಳುನಾಡನ್ನು ಮುನ್ನಡೆಸುತ್ತಿದೆ ಮತ್ತು ಅಂತಹ ಪಕ್ಷದ ಮೇಲೆ ಯಾರೂ ಪ್ರಾಬಲ್ಯ ಸಾಧಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಆಡಳಿತ ಪಕ್ಷ ಡಿಎಂಕೆ ಮತ್ತು ವಿಸಿಕೆ ಸೇರಿದಂತೆ ಪಕ್ಷಗಳು



ಬಿಜೆಪಿ ಜೊತೆಗಿನ ಎಐಎಡಿಎಂಕೆ ಮೈತ್ರಿಯನ್ನು ತೀವ್ರವಾಗಿ ಟೀಕಿಸಿವೆ.

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಮಾಜಿ ಸಿಎಂ, 2026 ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಏಕೈಕ ಅತಿದೊಡ್ಡ ಪಕ್ಷವಾಗಿ ಬಹುಮತದೊಂದಿಗೆ ಸರ್ಕಾರ ರಚಿಸುವ ವಿಶ್ವಾಸ ವ್ಯಕ್ತಪಡಿಸಿದರು. 2026ರ ವಿಧಾನಸಭಾ ಚುನಾವಣೆಗೆ ಮುನ್ನ ಬಲಿಷ್ಠ ಮೈತ್ರಿಕೂಟ ರಚಿಸುವ ವಿಶ್ವಾಸ ವ್ಯಕ್ತಪಡಿಸಿದ ಪಳನಿಸ್ವಾಮಿ, ಬಿಜೆಪಿ ಜೊತೆಗಿನ ಮೈತ್ರಿ ಕೇವಲ ಮೊದಲ ಹಂತ ಎಂದು ಹೇಳಿದರು.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದಕ್ಕಾಗಿ ಎಐಎಡಿಎಂಕೆಯನ್ನು ಟೀಕಿಸಿದ್ದಕ್ಕಾಗಿ ಸ್ಟಾಲಿನ್ ಅವರನ್ನು ಟೀಕಿಸಿದ ಪಳನಿಸ್ವಾಮಿ, ಮುಖ್ಯಮಂತ್ರಿ ಏಕೆ ಕಾಳಜಿ ವಹಿಸುತ್ತಿದ್ದಾರೆ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

**ನಾಯಕರ ವಿರುದ್ಧದ ಪ್ರಕರಣ**

**ಸ್ಟಾಲಿನ್ ಭಯದಿಂದ ಆವರಿಸಿಕೊಂಡಿದ್ದಾರೆ, ಸಿಎಂ ತಮ್ಮ ಪಕ್ಷ, ಬಿಜೆಪಿ ನಡುವಿನ ಮೈತ್ರಿಯನ್ನು ಸಹಿಸಲು ಸಾಧ್ಯವಿಲ್ಲ, ತಮ್ಮ ಪಕ್ಷ ಅಧಿಕಾರಕ್ಕೆ ಬಂದ ನಂತರ ಡಿಎಂಕೆ ನಾಯಕರ ವಿರುದ್ಧದ ಪ್ರಕರಣಗಳನ್ನು ಮತ್ತೆ ಪ್ರಾರಂಭಿಸಲಾಗುವುದು ಎಂದು ಪ್ರತಿಪಾದಿಸಿದ ಅವರು, ನೀವು ಮುಂದೆ ನೋಡಲಿರುವ ಪಳನಿಸ್ವಾಮಿ ವಿಭಿನ್ನವಾಗಿರುತ್ತಾರೆ.**

## ಎಚ್ಚೆತ್ತ ಆಡಳಿತ, ಜಗನ್ನಾಥ ಯಾತ್ರೆಗೆ ಕಟ್ಟೆಚ್ಚರ

**ಪುರಿ:** ಪುರಿಯ ಶ್ರೀ ಗುಂಡಿಚಾ ದೇವಸ್ಥಾನದ ಬಳಿ ಕಾಲ್ತುಳಿತದಲ್ಲಿ ಮೂವರು ಸಾವನ್ನಪ್ಪಿ 50 ಜನರು ಗಾಯಗೊಂಡ ಒಂದು ದಿನದ ನಂತರ, ಸಾವಿರಾರು ಭಕ್ತರು ಸಹೋದರ ದೇವರುಗಳಾದ ಬಲಭದ್ರ, ದೇವಿ ಸುಭದ್ರ, ಜಗನ್ನಾಥ ದೇವರ ದರ್ಶನ ಪಡೆಯಲು ಸಾಲುಗಟ್ಟಿ ನಿಂತಿದ್ದಾರೆ. ಘಟನೆಯನ್ನು ಗಮನ ದಲ್ಲಿಟ್ಟುಕೊಂಡು, ಶ್ರೀ ಗುಂಡಿಚಾ ದೇವಸ್ಥಾನದ ಮುಂದೆ ಬ್ಯಾರಿಕೇಡ್‌ಗಳನ್ನು ನಿರ್ಮಿಸಲಾಗಿದೆ, ದೇವಾಲಯದ ಒಳಗೆ ಇರುವ ಅಡಪ ಮಂಟಪದಲ್ಲಿ ದೇವರುಗಳ ಸುಗಮ ದರ್ಶನಕ್ಕಾಗಿ ವಿವಿಧ ಸರತಿ ಸಾಲುಗಳನ್ನು ಮಾಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಾವು ಜಾಗರೂಕರಾಗಿದ್ದೇವೆ ಭಗವಂತನ ಕೃಪೆಯಿಂದ ಎಲ್ಲವೂ ಸರಾಗವಾಗಿ ನಡೆಯುತ್ತಿದೆ. ಭಕ್ತರು ಯಾವುದೇ ತೊಂದರೆಯಿಲ್ಲದೆ ಶ್ರೀ ಗುಂಡಿಚಾ ದೇವಸ್ಥಾನವನ್ನು ಪ್ರವೇಶಿ ಸುತ್ತಿದ್ದಾರೆ ಎಂದು ರಥಯಾತ್ರೆಯ ಸಮಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು



ಮೇಲ್ವಿಚಾರಣೆ ಮಾಡುವಜವಾಬ್ದಾರಿಯನ್ನು ವಹಿಸಲಾಗಿರುವ ಎಡಿಜಿ ಶ್ರೇಣಿಯ ಐಪಿಎಸ್ ಅಧಿಕಾರಿ ಸೌಮೇಂದ್ರ ಪ್ರಿಯದರ್ಶಿ ಹೇಳಿದರು.

ಅಡಪ ಮಂಟಪದ ಮೇಲೆ ಜಗನ್ನಾಥ ದೇವರ ದರ್ಶನ ಮಾಡಿದರೆ ತಮ್ಮ ಪಾಪಗಳನ್ನು ತೊಳೆದುಕೊಳ್ಳಬಹುದು ಎಂದು ಭಕ್ತರು ನಂಬುತ್ತಾರೆ.

ರಥಯಾತ್ರೆ ಉತ್ಸವಗಳಿಗೆ ಸಂಬಂಧಿಸಿದ ಸಮಾರಂಭದ ಸಂದರ್ಭದಲ್ಲಿ ನಿನ್ನೆ ಬೆಳಿಗ್ಗೆ ಪುರಿಯ ಶ್ರೀಗುಂಡಿಚಾ ದೇವಸ್ಥಾನದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ ಮತ್ತು ಸುಮಾರು 50 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಳಿಗ್ಗೆ 4.20 ರ ಸುಮಾರಿಗೆ ದೇವಾಲಯದ ಮುಂದೆ ನಿಲ್ಲಿಸಲಾಗಿದ್ದ ರಥಗಳ ಬಳಿ ಸಾವಿರಾರು ಭಕ್ತರು ಜಮಾಯಿಸಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಅವರು ಹೇಳಿದರು.

## ಓಮನ್ ಕೊಲ್ಲಿಯಲ್ಲಿ ಬೆಂಕಿಬಿದ್ದಿದ್ದ ಹಡಗಿನ ಸಿಬ್ಬಂದಿಯನ್ನು ರಕ್ಷಿಸಿದ ಭಾರತೀಯ ನೌಕಾಪಡೆ

**ಓಮನ್:** ಭಾರತೀಯ ನೌಕಾಪಡೆಯ ಯುದ್ಧನೌಕೆ ಐಎನ್‌ಎಸ್ ತಬಾರ್, ಓಮನ್ ಕೊಲ್ಲಿಯಲ್ಲಿ ಬೆಂಕಿ ಅವಘಡಕ್ಕೆ ಸಿಲುಕಿದ್ದ ಎಂಟಿ ಯಿ ಚೆಂಗ್ 6 ಎಂಬ ಹಡಗಿನ ಸಿಬ್ಬಂದಿಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದೆ. ಈ ಹಡಗಿನಲ್ಲಿ 14 ಭಾರತೀಯ ಸಿಬ್ಬಂದಿ ಕೂಡ ಇದ್ದರು ಎಂದು ಮೂಲಗಳು ಖಚಿತಪಡಿಸಿವೆ. ಈ ಕುರಿತು ಮಾಹಿತಿ ನೀಡಿರುವ ಭಾರತೀಯ ನೌಕಾಪಡೆಯ ವಕ್ತಾರ, ಓಮನ್ ಕೊಲ್ಲಿಯಲ್ಲಿ ಅಪಾಯದ ಕರೆ ಸ್ವೀಕರಿಸುತ್ತಿದ್ದಂತೇ, ಈ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಭಾರತೀಯ ನೌಕಾಪಡೆಯ ಯುದ್ಧನೌಕೆ ಐಎನ್‌ಎಸ್ ತಬಾರ್ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸಿದೆ ಎಂದು ಸ್ಪಷ್ಟಪಡಿಸಿದೆ. ಎಂಟಿ ಯಿ ಚೆಂಗ್ 6 ಎಂಜಿನ್ ಕೋಣೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಸಂಪೂರ್ಣ ವಿದ್ಯುತ್ ವೈಫಲ್ಯ ಉಂಟಾಗಿದ್ದರಿಂದ ಹಡಗಿನ ಚಲನೆಯನ್ನು ನಿಲ್ಲಿಸಲಾಗಿತ್ತು. ಅಪಾಯದ ಕರೆ ಸ್ವೀಕರಿಸಿದ ಐಎನ್‌ಎಸ್ ತಬಾರ್, ತಕ್ಷಣ ಅಗ್ನಿಶಾಮಕ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಅಲ್ಲದೇ ಹಡಿಗನಲ್ಲಿದ್ದ ಭಾರತೀಯ ಮೂಲದವರೂ ಸೇರಿದಂತೆ ಎಲ್ಲಾ ಸಿಬ್ಬಂದಿಯನ್ನು ರಕ್ಷಿಸಿತು. ಎಂಟಿಯಿ ಚೆಂಗ್ 6 ಗುಜರಾತ್ನ ಕಾಂಡ್ಲಾದಿಂದ ಓಮನ್‌ನ ಶಿನಾಸ್‌ಗೆ ಪ್ರಯಾಣಿಸುತ್ತಿತ್ತು. ಇದರಲ್ಲಿ 14 ಭಾರತೀಯ ಸಿಬ್ಬಂದಿ ಇದ್ದರು. ಭಾರತೀಯ ನೌಕಾಪಡೆಯ ಯುದ್ಧನೌಕೆ ಐಎನ್‌ಎಸ್ ತಬಾರ್‌ನಡೆಸಿದ ಕಾರ್ಯಾಚರಣೆಯಲ್ಲಿ ಹಡಗಿನಲ್ಲಿ ಎಲ್ಲಾ ಸಿಬ್ಬಂದಿಯನ್ನು ರಕ್ಷಿಸಲಾಗಿದೆ.

ಐಎನ್‌ಎಸ್ ತಬಾರ್‌ನ ಅಗ್ನಿಶಾಮಕ ತಂಡವು, ದೋಣಿ, ಹೆಲಿಕಾಪ್ಟರ್ ಮೂಲಕ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯನ್ನು ಪೂರ್ಣಗೊಳಿಸಿದೆ. ಅಲ್ಲದೇ ಬೆಂಕಿಯ ತೀವ್ರತೆಯನ್ನು ತೀವ್ರವಾಗಿ ಕಡಿಮೆ ಮಾಡಲಾಗಿದ್ದು, ಎಲ್ಲಾ ಸಿಬ್ಬಂದಿ ಅಪಾಯದಿಂದ ಪಾರಾಗಿದ್ದಾರೆ ಎಂದು ಭಾರತೀಯ ನೌಕಾಪಡೆ ವಕ್ತಾರ ಖಚಿತಪಡಿಸಿದ್ದಾರೆ.

ಸಕಾಲದಲ್ಲಿ ಹಡಗು ಅಪಾಯದ ಕರೆಯನ್ನು ಮೊಳಗಿಸಿದ್ದರಿಂದ, ಐಎನ್‌ಸ್ ತಬಾರ್ ಶೀಘ್ರವಾಗಿ ಹಡಗನ್ನು ತಲುಪಲು ಸಾಧ್ಯವಾಗಿದೆ. ಇದರಿಂದಾಗಿ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿದೆ. ರಕ್ಷಣೆ ಮಾಡಲಾದ ಸಿಬ್ಬಂದಿಗೆ ಅಗತ್ಯ ಪ್ರಾಥಮಿಕ ಚಿಕಿತ್ಸೆಯನ್ನೂ ನೀಡಲಾಗಿದೆ ಎಂದು ಐಎನ್‌ಎಸ್ ತಬಾರ್ ಮಾಹಿತಿ ನೀಡಿದೆ.

## ರಾಸಾಯನಿಕ ಕಾರ್ಖಾನೆಯಲ್ಲಿ ಬೆಂಕಿ, 10 ಮಂದಿ ಸಜೀವ ದಹನ

**ಹೈದರಾಬಾದ್:** ತೆಲಂಗಣ ರಾಜಧಾನಿ ಹೈದರಾಬಾದ್ ಬಳಿಯ ಪಾಶಮೈಲಾರಂನಲ್ಲಿರುವ ಕೈಗಾರಿಕಾ ಘಟಕ ದಲ್ಲಿ ಸೋಮವಾರ ಸಂಭವಿಸಿದ ಬೃಹತ್ ರಿಯಾಕ್ಟರ್ ಸ್ಫೋಟದಲ್ಲಿ 10 ಕಾರ್ಮಿಕರು ಸಾವನ್ನಪ್ಪಿ,20 ಜನರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಂಭವಿಸಿದೆ. ಈ ಘಟನೆಯಲ್ಲಿ ಗಾಯಗೊಂಡಿರುವವರ ಕೆಲವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಸಂಗರೆಡ್ಡಿ ಜಿಲ್ಲೆಯ ಕೈಗಾರಿಕಾ ಪ್ರದೇಶದ ರಾಸಾಯನಿಕ ಕಾರ್ಖಾನೆಯಲ್ಲಿ ಬೆಳಿಗ್ಗೆ 9 ಗಂಟೆ ಸುಮಾರಿಗೆ ಈ ಘಟನೆ ಸಂಭವಿಸಿದೆ. ಸ್ಫೋಟದ ಪರಿಣಾಮವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಸಿಗಾಚಿ ಕೆಮಿಕಲ್ಸ್ ಸಂಪೂರ್ಣ ಆವರಣ ಆವರಿಸಿಕೊಂಡಿತು.

ಬೆಂಕಿಯನ್ನು ನಿಯಂತ್ರಿಸಲು ಹನ್ನೊಂದು ಅಗ್ನಿ ಶಾಮಕ ವಾಹನಗಳನ್ನು ಸೇವೆಗೆ ನಿಯೋಜಿಸಲಾಗಿದೆ. ಪೊಲೀಸರು, ಅಗ್ನಿಶಾಮಕ ದಳ ಮತ್ತು ಇತರ ಸಿಬ್ಬಂದಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ನಡೆಸಿದರು. ಗಾಯಾಳುಗಳನ್ನು ಸರ್ಕಾರಿ, ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಲಾಗಿದೆ.



ಗಾಯಾಳುಗಳನ್ನು ಆಸ್ಪತ್ರೆಗಳಿಗೆ ಸ್ಥಳಾಂತರಿಸಲು ಆ್ಯಂಬುಲೆನ್ಸ್‌ಗಳು ಸಹ ಸ್ಥಳದಲ್ಲಿ ಕಂಡುಬಂದವು. ಹತ್ತು ಕಾರ್ಮಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ, ಗಾಯಗೊಂಡ ಕಾರ್ಮಿಕರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಅಧಿಕಾರಿಗಳು ಇನ್ನೂ ಸಾವುಗಳನ್ನು ದೃಢಪಡಿಸಿಲ್ಲ. ಸ್ಫೋಟವು ಎಷ್ಟು ಪ್ರಬಲವಾಗಿತ್ತೆಂದರೆ, ಕೆಲವು ಕಾರ್ಮಿಕರ ದೇಹಗಳು ಸುಮಾರು 100 ಮೀಟರ್ ದೂರದವರೆಗೂ ಬಿದ್ದಿದ್ದವು. ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಎಲ್ಲೆಡೆ ಆವರಿಸಿತು ಎಂದು ಪ್ರತ್ಯಕ್ಷ ದರ್ಶಿಗಳು ಹೇಳಿದ್ದಾರೆ. ಸ್ಫೋಟದ ಪರಿಣಾಮ ಕಾರ್ಖಾನೆಯಲ್ಲಿನ ಉತ್ಪಾದನಾ ಘಟಕ ಕುಸಿದು ಬಿದ್ದರೆ, ಬೆಂಕಿ ಕಾರ್ಖಾನೆ ಆವರಣದೊಳಗಿನ ಪಕ್ಕದ ಕಟ್ಟಡಕ್ಕೂ ಹರಡಿತ್ತು. ರಿಯಾಕ್ಟರ್ ಸ್ಫೋಟಗೊಂಡಾಗ ಹಲವಾರು ಕಾರ್ಮಿಕರು ಅದರ ಬಳಿ ಕೆಲಸ ಮಾಡುತ್ತಿದ್ದರು. ಒಡಿಶಾ, ಉತ್ತರ ಪ್ರದೇಶ, ಇತರ ರಾಜ್ಯಗಳಿಂದ ವಲಸೆ ಬಂದ ಕಾರ್ಮಿಕರು ಕೈಗಾರಿಕಾ ಘಟಕದಲ್ಲಿ ಕೆಲಸ ಮಾಡುತ್ತಿದ್ದರು.

**ಕಾರ್ಯಾಚರಣೆಗಳ ಮೇಲ್ವಿಚಾರಣೆ**

**ಕೆಲವು ಕಾರ್ಮಿಕರು ಕಟ್ಟಡದ ಅಡಿಯಲ್ಲಿ ಸಿಲುಕಿಕೊಂಡಿರಬಹುದು ಎಂಬ ಶಂಕೆ ಇರುವುದರಿಂದ, ರಕ್ಷಣಾ ಕಾರ್ಯಕರ್ತರು ಕಟ್ಟಡದ ಅವಶೇಷಗಳನ್ನು ತೆಗೆದುಹಾಕಲು ಮಣ್ಣು ತೆಗೆಯುವ ಯಂತ್ರಗಳನ್ನು ಬಳಸಿದ್ದಾರೆ. ಸಂಗರೆಡ್ಡಿ ಜಿಲ್ಲಾಧಿಕಾರಿ ಪಿ. ಪ್ರವಿಣ್ಯ, ಪೊಲೀಸ್ ವರಿಷ್ಠಾಧಿಕಾರಿ ಪರಿತೋಷ್ ಪಂಕಜ್ ಕೂಡ ಸ್ಥಳಕ್ಕೆ ಧಾವಿಸಿ ರಕ್ಷಣಾ, ಪರಿಹಾರ ಕಾರ್ಯಾಚರಣೆಗಳ ಮೇಲ್ವಿಚಾರಣೆ ನಡೆಸಿದರು.**

# ಐಡಹೋದಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಮೇಲೆ ಗುಂಡಿನ ದಾಳಿ

### ಕಾನ್‌ಫೀಲ್ಡ್ ಮೌಂಟೇನ್‌ನಲ್ಲಿ ಬೆಂಕಿ ನಂದಿಸಲು ಹೋದಾಗ ಈ ಘಟನೆ ನಡೆದಿದೆ

**ಅಮೆರಿಕ:** ಅಮೆರಿಕದ ವಾಯುವ್ಯ ರಾಜ್ಯವಾದ ಐಡಹೋದಲ್ಲಿ ಅಗ್ನಿಶಾಮಕ ದಳದ ಮೇಲೆ ಸಿಬ್ಬಂದಿ ಮೇಲೆ ಗುಂಡಿನ ದಾಳಿ ನಡೆದಿದೆ. ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ, ಒಬ್ಬರು ಗಂಭೀರ ಗಾಯವಾಗಿದ್ದು, ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾರೆ ಎಂದು ವರದಿಯಾಗಿದೆ. ಸ್ನೈಪರ್ ಗುಂಡಿನ ದಾಳಿ ನಡೆಯುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಅಗ್ನಿಶಾಮಕ ದಳದವರು ಬೆಂಕಿ ನಂದಿಸುತ್ತಿದ್ದಾಗ ಈ ಗುಂಡಿನ ದಾಳಿ ನಡೆದಿದೆ. ಈ ದಾಳಿಯಲ್ಲಿ ಕನಿಷ್ಠ ಇಬ್ಬರು ಮೃತಪಟ್ಟಿದ್ದಾರೆ. ಪೊಲೀಸರು ಮತ್ತು ಶೂಟರ್ ನಡುವೆ ಗುಂಡಿನ ಚಕಮಕಿ ನಡೆಯುತ್ತಿದೆ ಎಂದು ಸ್ಥಳೀಯ ಶೆರಿಫ್ ತಿಳಿಸಿದ್ದಾರೆ. ಕಾನ್‌ಫೀಲ್ಡ್ ಮೌಂಟೇನ್‌ನಲ್ಲಿ ಬೆಂಕಿ ನಂದಿಸಲು ಹೋದಾಗ ಈ ಘಟನೆ ನಡೆದಿದೆ. ಗುಂಡು ಹಾರಿಸಿದ ಓರ್ವ ವ್ಯಕ್ತಿ ಬಳಿಕ ಸ್ಥಳದಲ್ಲೇ ಸತ್ತಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸದ್ಯಕ್ಕೆ ಸಮುದಾಯಕ್ಕೆ ಯಾವುದೇ ಅಪಾಯವಿಲ್ಲ ಎಂದು ಕೂಟೆನಾಯ್ ಕೌಂಟಿ ಶೆರಿಫ್ ರಿಚರ್ಡ್ ನಾರ್ರಿಸ್ ಹೇಳಿದ್ದಾರೆ. ಈ ದಾಳಿಯನ್ನು ಖಂಡಿಸಿರುವ ಗವರ್ನರ್ ಬ್ರಾಡ್ ಲಿಟಲ್,



ಇಬ್ಬರು ಸಾವು, ಒಬ್ಬರಿಗೆ ಗಾಯ

ಇದು ಅಗ್ನಿಶಾಮಕ ದಳದ ಸಿಬ್ಬಂದಿ ಮೇಲೆ ನಡೆದ ಹೇಯ ಕೃತ್ಯ ಎಂದು ಹೇಳಿದ್ದಾರೆ. ಕೂಟೆನೈ ಕೌಂಟಿಯಲ್ಲಿ ಬೆಂಕಿ ಇನ್ನೂ ಉರಿಯುತ್ತಿದೆ. ಇದು ಪ್ರಸಿದ್ಧ ಪಾರ್ಕ್, ಹೈಕಿಂಗ್ ಪ್ರದೇಶವಾಗಿದೆ. ಶೆರಿಫ್ ರಾಬರ್ಟ್ ನಾರಿಸ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದು ಶೂಟರ್ ಹಾಗೂ ಪೊಲೀಸರ ನಡುವೆ ಗುಂಡಿನ ಚಕಮಕಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಈಗ ಇಬ್ಬರು ಮೃತಪಟ್ಟಿದ್ದಾರೆ. ಎಷ್ಟು ಜನ ಗಾಯಗೊಂಡಿದ್ದಾರೆಂದು ತಿಳಿದಿಲ್ಲ. ಇನ್ನೂ ನಾಗರಿಕರು ಬೆಟ್ಟದಿಂದ ಬರುತ್ತಿದ್ದಾರೆ. ನಾವು ಸಕ್ರಿಯವಾಗಿ ಸ್ನೈಪರ್ ಗುಂಡಿನ ದಾಳಿಗೆ ಒಳಗಾಗುತ್ತಿದ್ದೇವೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಶಂಕಿತರು ಯಾವುದೇ ಕಟ್ಟಡದೊಳಗೆ ಅಡಗಿಕೊಂಡಿಲ್ಲ. ಅವರು ದಟ್ಟವಾದ ಪೊದೆಗಳಲ್ಲಿ ಇದ್ದಾರೆ, ತಮ್ಮ ಸುತ್ತಮುತ್ತಲಿನ ಪ್ರದೇಶದೊಂದಿಗೆ ಬೆರೆಯುತ್ತಿದ್ದಾರೆ ಎಂದು ನಾರಿಸ್ ಹೇಳಿದ್ದಾರೆ. ಅವರು ಚೆನ್ನಾಗಿ ಸಿದ್ಧತೆ ಮಾಡಿಕೊಂಡಿದ್ದಾರೆ. ಒಬ್ಬ, ಇಬ್ಬರು, ಮೂವರು ಅಥವಾ ನಾಲ್ವರು ಶೂಟರ್‌ಗಳು ಇದ್ದಾರೆಯೇ ಎಂದು ಅಧಿಕಾರಿಗಳಿಗೆ ತಿಳಿದಿಲ್ಲ ಎಂದು ಅವರು ಹೇಳಿದರು. ಬೆಂಕಿ ಇನ್ನೂ ಉರಿಯುತ್ತಿದ್ದರೂ ಯಾವುದೇ ಸ್ಥಳಾಂತರಿಸುವಿಕೆಗಳನ್ನು ಆದೇಶಿಸಿಲ್ಲ ಎಂದು ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ನಾರಿಸ್, ಇತರ ಅಧಿಕಾರಿಗಳು ಪರಿಸ್ಥಿತಿ ತಿಳಿಯಾಗುವವರೆಗೆ ಮನೆಯಲ್ಲೇ ಇರುವಂತೆ ನಿವಾಸಿಗಳಿಗೆ ಸೂಚಿಸಿದ್ದಾರೆ. ಈ ಘಟನೆಯಿಂದಾಗಿ ಆ ಪ್ರದೇಶದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಿದ್ದಾರೆ.

**ಶೂಟರ್ ಮೇಲೆ ಗುಂಡು ಹಾರಿಸಬಹುದು**

**ದಾಳಿಯನ್ನು ಅತ್ಯಂತ ಶಕ್ತಿಶಾಲಿ ರೈಫಲ್‌ಗಳಿಂದ ಮಾಡಲಾಗಿದೆ, ಶೂಟರ್‌ಗಳನ್ನು ಹುಡುಕಿ ಸ್ಥಳದಲ್ಲೇ ಹೊಡೆದುರುಳಿಸುವುದು ಕಾನೂನು ಜಾರಿ ಮಾಡುವವರ ಗುರಿಯಾಗಿದೆ, ಶೂಟರ್ ಶರಣಾಗುವ ಯಾವುದೇ ಲಕ್ಷಣಗಳನ್ನು ತೋರಿಸುತ್ತಿಲ್ಲ. ಯಾರಾದರೂ ಸ್ಪಷ್ಟ ಗುರಿಯನ್ನು ಹೊಂದಿದ್ದರೆ, ಆ ಬೆದರಿಕೆಯನ್ನು ತಟಸ್ಥಗೊಳಿಸಲು ಶೂಟರ್ ಮೇಲೆ ಗುಂಡು ಹಾರಿಸಬಹುದು ಎಂದಿದ್ದಾರೆ. ಮೃತಪಟ್ಟ ಇಬ್ಬರು ಅಗ್ನಿಶಾಮಕ ಸಿಬ್ಬಂದಿ ಎಂದು ಅಧಿಕಾರಿಗಳಿಗೆ ಪ್ರಾಥಮಿಕವಾಗಿ ತಿಳಿದುಬಂದಿದೆ.**

> **ಎಫ್ ಬಿಐ ಉಪ ನಿರ್ದೇಶಕ ಡಾನ್ ಬೊಂಗಿನೊ, ಇದು ಸಕ್ರಿಯವಾದ ಘಟನೆ, ತಂತ್ರಗಾರಿಕೆ ಮತ್ತು ಕಾರ್ಯಾಚರಣೆಯ ಬೆಂಬಲ ನೀಡಲು ಎಫ್‌ಬಿಐ ಸಿಬ್ಬಂದಿಯನ್ನು ಕಳುಹಿಸುತ್ತಿದೆ ಎಂದು ತಿಳಿಸಿದ್ದಾರೆ. ಮಾಧ್ಯಮಗಳ ವಿಡಿಯೋ, ಫೋಟೋದಲ್ಲಿ ಬೆಟ್ಟಗುಡ್ಡ ಪ್ರದೇಶದಲ್ಲಿ ದಟ್ಟವಾದ ಬಿಳಿ ಹೊಗೆ ಆವರಿಸಿರುವುದು ಪತ್ತೆಯಾಗಿದೆ. ಸ್ಥಳೀಯ ಅಗ್ನಿ ಶಾಮಕ ಮುಖ್ಯಸ್ಥ ಪ್ಯಾಟ್ ರೈಲಿ ದಾಳಿಯಿಂದ ಮನನೊಂದಿದ್ದೇನೆ**
>
> **- ಶೆರಿಫ್, ಸ್ಥಳೀಯ**

## ಮಿನಿ ನ್ಯೂಸ್

### ಮನೆ ಮನೆಗೂ ಡಿಜಿಟಲ್ ವಿಳಾಸ

**ಇಂದೋರ್:** ಮಧ್ಯಪ್ರದೇಶದ ಇಂದೋರ್ ಮುನ್ಸಿಪಲ್ ಕಾರ್ಪೊರೇಷನ್ ಡಿಜಿಟಲ್ ಮನೆ ವಿಳಾಸ ಯೋಜನೆಯನ್ನು ಪ್ರಾರಂಭಿಸಿದೆ. ಇದು ದೇಶದಲ್ಲಿ ಮೊದಲ ಉಪಕ್ರಮ ಎಂದು ಅಧಿಕಾರಿಗಳು ಹೇಳಿಕೊಂಡಿದ್ದಾರೆ. ಈ ಯೋಜನೆಯು ನಗರದ ಪ್ರತಿಯೊಂದು ಮನೆಯ ಹೊರಗೆ ವಿಶಿಷ್ಟವಾದ ಕ್ಯೂಆರ್ ಕೋಡ್‌ಗಳನ್ನು ಹೊಂದಿರುವ ವಿಶೇಷ ಡಿಜಿಟಲ್ ಪ್ಲೇಟ್‌ಗಳನ್ನು ಅಳವಡಿಸುವುದನ್ನು ಒಳಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದನ್ನು ಸುದಾಮಾ ನಗರ ಪ್ರದೇಶದ ವಾರ್ಡ್ ಸಂಖ್ಯೆ 82 ರಿಂದ ಪೈಲಟ್ ಆಧಾರದ ಮೇಲೆ ಪ್ರಾರಂಭಿಸಲಾಯಿತು. ನಾಗರಿಕ ಸೇವೆಗಳನ್ನು ಡಿಜಿಟಲ್ ತಂತ್ರಜ್ಞಾನದೊಂದಿಗೆ ಸಂಪರ್ಕಿಸುವ ಮೂಲಕ ಸ್ಮಾರ್ಟ್ ಆಡಳಿತವನ್ನು ಸಬಲೀಕರಣಗೊಳಿಸುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಾವು ನಮ್ಮ ಡಿಜಿಟಲ್ ವಿಳಾಸ ಯೋಜನೆಯನ್ನು ಕೇಂದ್ರ ಸರ್ಕಾರದ ಡಿಜಿಪಿನ್ ವ್ಯವಸ್ಥೆಯೊಂದಿಗೆ ಲಿಂಕ್ ಮಾಡಿದ್ದೇವೆ. ಇಂದೋರ್ ಹಾಗೆ ಮಾಡಿದ ದೇಶದ ಮೊದಲ ನಗರವಾಗಿದೆ ಎಂದು ಇಂದೋರ್ ಮೇಯರ್ ಪುಷ್ಯಮಿತ್ರ ಭಾರ್ಗವ ಹೇಳಿದರು. ನಗರದ ಪ್ರತಿಯೊಂದು ಮನೆಯ ಹೊರಗೆ ವಿಶಿಷ್ಟವಾದ ಕ್ಯೂಆರ್ ಕೋಡ್ ಹೊಂದಿರುವ ವಿಶೇಷ ಡಿಜಿಟಲ್ ಪ್ಲೇಟ್‌ಗಳನ್ನು ಸ್ಥಾಪಿಸಲಾಗುವುದು ಎಂದು ಅವರು ಹೇಳಿದರು. ಈ ಕೋಡ್ ಅನ್ನು ಮೊಬೈಲ್ ಫೋನ್ ಮೂಲಕ ಸ್ಕ್ಯಾನ್ ಮಾಡುವ ಮೂಲಕ, ಮನೆಯ ಆಧಾರಿತ ಡಿಜಿಟಲ್ ವಿಳಾಸವನ್ನು ತಿಳಿದುಕೊಳ್ಳಬಹುದು. ಆಸ್ತಿ ತೆರಿಗೆ, ನೀರಿನ ತೆರಿಗೆಯಂತಹ ಸ್ಥಳೀಯ ತೆರಿಗೆಗಳನ್ನು ಪಾವತಿಸಬಹುದು ಮತ್ತು ನಾಗರಿಕ ಸೌಲಭ್ಯಗಳ ಬಗ್ಗೆ ದೂರುಗಳನ್ನುಸಹ ಸಲ್ಲಿಸಬಹುದು ಎಂದು ಮೇಯರ್ ಹೇಳಿದರು. ಜನರ ಸಲಹೆಗಳ ಆಧಾರದ ಮೇಲೆ ಡಿಜಿಟಲ್ ವಿಳಾಸ ಯೋಜನೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲಾಗುವುದು ಎಂದು ಅವರು ಹೇಳಿದರು.


### ಚುರಾಚಾಂದ್‌ಪುರದಲ್ಲಿ ಅಪರಿಚಿತ ವ್ಯಕ್ತಿಯಿಂದ ಗುಂಡಿನ ದಾಳಿ: 4 ಸಾವು

**ಇಂಫಾಲ:** ಮಣಿಪುರದ ಚುರಾಚಾಂದ್‌ಪುರ ಜಿಲ್ಲೆಯಲ್ಲಿ ಅಪರಿಚಿತ ವ್ಯಕ್ತಿ ಸೋಮವಾರ ಗುಂಡಿನ ದಾಳಿ ನಡೆಸಿದ್ದು, 60 ವರ್ಷದ ಮಹಿಳೆ ಸೇರಿ ನಾಲ್ವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯು ಚುರಾಚಾಂದ್‌ಪುರದಿಂದ ಏಳು ಕಿಲೋ ಮೀಟರ್ ದೂರದಲ್ಲಿರುವ ಮೋಂಗ್‌ಜಂಗ್ ಗ್ರಾಮದಲ್ಲಿ ಸೋಮವಾರ ಮದ್ಯಾಹ್ನ 2ಕ್ಕೆ ನಡೆದಿದೆ. ಈ ಸಂದರ್ಭದಲ್ಲಿ ಮೃತರು ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ದಾಳಿ ನಡೆಸಿದ ವ್ಯಕ್ತಿಯು ಅತ್ಯಂತ ಸಮೀಪದಿಂದ ಗುಂಡು ಹಾರಿಸಿ ಇವರನ್ನು ಕೊಂದಿದ್ದಾನೆ. ಮೃತರ ಗುರುತು ಇನ್ನಷ್ಟೇ ಪತ್ತೆಯಾಗಬೇಕಿದೆ. ಘಟನಾ ಸ್ಥಳದಲ್ಲಿ 12 ಕಾಡತೂಸುಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಳಿಯ ಹೊಣೆಯನ್ನು ಯಾವುದೇ ಸಂಘಟನೆ ಈವರೆಗೂ ಹೊತ್ತುಕೊಂಡಿಲ್ಲ. ಘಟನೆಯ ಮಾಹಿತಿ ದೊರೆಯುತ್ತಿದ್ದಂತೆ ಪೊಲೀಸರು, ಹೆಚ್ಚುವರಿ ಭದ್ರತಾ ಪಡೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು ಎಂದು ವರದಿಯಾಗಿದೆ. 2023ರ ಮೇ ತಿಂಗಳಿನಿಂದ ಆರಂಭವಾದ ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯಗಳ ನಡುವಿನ ಜನಾಂಗೀಯ ಹಿಂಸಾಚಾರದಲ್ಲಿ 260ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾರೆ. ಈಗಲೂ ರಾಜ್ಯದಲ್ಲಿ ಆಗಾಗ್ಗ ಹಿಂಸಾಚಾರಗಳು ನಡೆಯುತ್ತಿರುವುದು ವರದಿಯಾಗುತ್ತಲಿವೆ.

### ಪ್ರಾಣಿಗಳನ್ನು ಪಶುಗಳೆನ್ನುವುದು ಸೂಕ್ತವಲ್ಲ: ರಾಷ್ಟ್ರಪತಿ ಅಭಿಮತ

**ಬರೇಲಿ:** ಪ್ರಾಣಿಗಳನ್ನು ಪಶುಗಳು ಎನ್ನುವುದು ಸರಿಯಾದ ಕ್ರಮವಲ್ಲ. ಅದರ ಬದಲು ಜೀವನ ಧನ, ಬದುಕಿನ ಆಸ್ತಿ ಎಂದು ಕರೆಯುವುದು ಉತ್ತಮ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸೋಮವಾರ ಹೇಳಿದ್ದಾರೆ. ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯ 11ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.



ಪ್ರಾಣಿಗಳಿಲ್ಲದ ಜೀವನ ಊಹಿಸಲೂ ಸಾಧ್ಯವಿಲ್ಲ, ಪಶು ವೈದ್ಯರಾಗಿ ಕೆಲಸ ಮಾಡುವಾಗ ಅವುಗಳ ಕ್ಷೇಮಾಭಿವೃದ್ಧಿಯ ಕಡೆಗೇ ಗಮನ ನೀಡಬೇಕು. ನನ್ನ ಹಿನ್ನೆಲೆ ಪ್ರಕೃತಿಯೊಂದಿಗೆ ಬೆಸೆದಿದೆ. ಅರಣ್ಯ ಮತ್ತು ಕಾಡು ಪ್ರಾಣಿಗಳೊಂದಿಗೆ ಮನುಷ್ಯರ ಸಂಬಂಧವಿದೆ ಎಂದು ಅವರು ಹೇಳಿದ್ದಾರೆ. ಇಂದು ನಮ್ಮ ಬಳಿ ತಂತ್ರಜ್ಞಾನವಿದೆ. ಹಿಂದೆ ಪ್ರಾಣಿಗಳೇ ನಮ್ಮ ಸಾರಿಗೆ ವ್ಯವಸ್ಥೆಯಾಗಿದ್ದವು. ರೈತರ ಜೀವನಾಡಿಯಾಗಿದ್ದವು. ಎಲ್ಲಾ ಪ್ರಾಣಿಗಳಲ್ಲೂ ದೇವರು ಇದ್ದಾರೆ. ನಮ್ಮ ದೇವರು ಹಾಗೂ ಋಷಿಗಳು ಕೆಲ ತತ್ವಗಳ ಆಧಾರದಲ್ಲಿ ಪ್ರಾಣಿಗಳೊಂದಿಗೆ ಸಮಾಲೋಚನೆ ನಡೆಸುತ್ತಿದ್ದರು ಎಂದಿದ್ದಾರೆ.

ಭೂಮಿಯ ಆರೋಗ್ಯ, ಜೀವವೈವಿಧ್ಯತೆಯನ್ನು ಕಾಪಾಡಲು ಅಳಿವಿನಂಚಿನಲ್ಲಿರುವ ಪ್ರಾಣಿ, ಪಕ್ಷಿಗಳನ್ನು ರಕ್ಷಿಸಬೇಕಿದೆ. ನಮ್ಮ ಬಾಲ್ಯದ ಸಂದರ್ಭದಲ್ಲಿ ರಣಹದ್ದುಗಳನ್ನು ವ್ಯಾಪಕವಾಗಿ ನೋಡುತ್ತಿದ್ದೆವು. ಆದರೆ ಈಗ ಅವು ಎಲ್ಲಿಯೂ ಕಾಣಸಿಗದು. ಯೋಚಿಸುವ, ಆಲೋಚಿಸುವ ವರವನ್ನು ದೇವರು ಮನುಷ್ಯರಿಗೆ ನೀಡಿದ್ದು, ಅದನ್ನು ಸಕಲ ಜೀವಿಗಳ ಕಲ್ಯಾಣಕ್ಕಾಗಿ ಬಳಸಬೇಕಿದೆ. ಒಂದು ಪ್ರಾಣಿಯ ರಕ್ಷಣೆಗೆ ಬಳಸುವ ಔಷಧಗಳು ಇತರ ಪ್ರಾಣಿಗಳ ಜೀವಕ್ಕೇ ಕಂಟಕವಾಗಬಹುದು. ಇಂಥವುಗಳನ್ನು ಪತ್ತೆ ಮಾಡಿ ನಿಷೇಧಿಸುವುದೇ ಪ್ರಾಣಿಗಳ ರಕ್ಷಣೆಯ ಮೊದಲ ಹೆಜ್ಜೆಯಾಗಿದೆ ಎಂದು ಮುರ್ಮು ಹೇಳಿದ್ದಾರೆ.

### ಒಡಿಶಾ ಸಿಎಂ ರಾಜೀನಾಮೆಗೆ ಕಾಂಗ್ರೆಸ್ ಒತ್ತಾಯ

**ಭುವನೇಶ್ವರ:** ಮೂರು ಮಂದಿ ಸಾವಿಗೀಡಾಗಿ 50ಕ್ಕೂ ಅಧಿಕ ಮಂದಿ ಗಾಯಗೊಂಡ ಪುರಿ ಕಾಲ್ತುಳಿತ ಪ್ರಕರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಮೋಹನ್ ಚರಣ್ ಮಾಜಿ, ಕಾನೂನು ಸಚಿವ ಪೃಥ್ವಿರಾಜ್ ಹರಿಚಂದ್ರನ್ ರಾಜೀನಾಮೆ ನೀಡಬೇಕು ಎಂದು ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿ ಆಗ್ರಹಿಸಿದೆ. ಅಲ್ಲದೆ ಮೃತರ ಕುಟುಂಬಕ್ಕೆ 50 ಲಕ್ಷ, ಗಂಭೀರವಾಗಿ ಗಾಯಗೊಂಡವರ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದೆ.

ಮೃತರ ಕುಟುಂಬಕ್ಕೆ ಸರ್ಕಾರ 25 ಲಕ್ಷ ಪರಿಹಾರ ಘೋಷಿಸಿದ್ದು, ಇದೇನೂ ಸಾಲದು ಎಂದು ಕಾಂಗ್ರೆಸ್ ಹೇಳಿದೆ. ಪುರಿಯ ಶ್ರೀ ಗುಂಡಿಚಾ ದೇಗುಲದ ಬಳಿಕ ಭಾನುವಾರ ಸಂಭವಿಸಿದ ಕಾಲ್ತುಳಿತದಲ್ಲಿ ಇಬ್ಬರು ಮಹಿಳೆಯರು ಸೇರಿ ಮೂವರು ಮೃತಪಟ್ಟಿದ್ದರು. ದೇಗುಲ ರಥ ಯಾತ್ರೆಯ ಅಂಗವಾಗಿ ಕಾರ್ಯಕ್ರಮಗಳು ನಡೆಯುತ್ತಿದ್ದವು. ದೇಗುಲದ ಮುಂಭಾದಲ್ಲಿ ನಿಲ್ಲಿಸಿದ್ದ ರಥದ ಬಳಿಕ ಮುಂಜಾನೆ 4.20ರ ಸುಮಾರಿಗೆ ಸಾವಿರಾರು ಮಂದಿ ಸೇರಿದ್ದರಿಂದ ಘಟನೆ ಸಂಭವಿಸಿತ್ತು. ಸರ್ಕಾರದ ಅಸಮರ್ಪಕ ನಿರ್ವಹಣೆಯಿಂದ ಕಾಲ್ತುಳಿತ ಸಂಭವಿಸಿದ್ದು, ಹಾಲಿ ಜಿಲ್ಲಾ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದೆ. ಘಟನೆಯಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ತಂಡ ಭೇಟಿ ಮಾಡಿದೆ.

# ಹೀರ್ ಎಕ್ಸ್‌ಪ್ರೆಸ್ ಟೀಸರ್‌ಗೆ ಭಾರೀ ಮೆಚ್ಚುಗೆ

'ಹೀರ್ ಎಕ್ಸ್‌ಪ್ರೆಸ್ ಸಿನಿಮಾದ ಟೀಸರ್ ರಿಲೀಸ್ ಆಗಿದ್ದು, ಸಖತ್ ಅಟ್ರ್ಯಾಕ್ಟ್ ಮಾಡ್ತಿದೆ. 'ಓ ಮೈ ಗಾಡ್ ಹಾಗೂ '102 ನಾಟ್ ಔಟ್ ಸಿನಿಮಾ ನಿರ್ದೇಶಕ ಉಮೇಶ್ ಶುಕ್ಲಾ ನಿರ್ದೇಶನದ ಹೀರ್ ಎಕ್ಸ್‌ಪ್ರೆಸ್ ಚಿತ್ರ ತೆರೆಗೆ ಬರೋಕೆ ಸಿದ್ಧವಾಗಿದೆ.

ಸಿನಿಮಾದ ಟೀಸರ್ ಜೀ ಮ್ಯೂಸಿಕ್ ಕಂಪನಿಯಲ್ಲಿ ರಿಲೀಸ್ ಆಗಿದ್ದು, ಅಪಾರ ಮೆಚ್ಚುಗೆ ವ್ಯಕ್ತವಾಗ್ತಿದೆ. ಅಂದ ಹಾಗೆ ಸಿನಿಮಾ ಇದೇ ಆಗಸ್ಟ್ 8ಕ್ಕೆ ದೇಶದಾದ್ಯಂತ ತೆರೆಗೆ ಬರಲಿದೆ. ದಿವಿತಾ ಜುನೇಜಾ ಹಾಗೂ ಪ್ರೀತ್ ಕಮಾನಿ ಮುಖ್ಯ ಪಾತ್ರದಲ್ಲಿ ಇದೇ ಮೊದಲ ಬಾರಿಗೆ ಅಭಿನಯಿಸಿದ್ದಾರೆ.




ಇನ್ನುಳಿದಂತೆ ಈ ಸಿನಿಮಾದಲ್ಲಿ ಅಶುತೋಶ್ ರಾಣಾ, ಗುಲ್ಶನ್ ಗ್ರೋವರ್, ಸಂಜಯ್ ವಿಶ್ವಾಸ್, ದೀಪಿಕಾ ಸೇರಿದಂತೆ ದೊಡ್ಡ ತಾರಾಗಣವಿದೆ.
ಚಿತ್ರಕ್ಕೆ ನಿರ್ದೇಶಕ ಉಮೇಶ್ ಶುಕ್ಲಾ, ಆಶಿಶ್ ವಾಘ್, ಸಂಜಯ್ ಗ್ರೋವರ್ ಹಾಗೂ ಮೋಹಿತ್ ಛಾಬ್ರಾ ಬಂಡವಾಳ ಹೂಡಿ ನಿರ್ಮಾಣ ಮಾಡಿದ್ದಾರೆ. ಸದ್ಯ ಚಿತ್ರದ ಟೀಸರ್‌ಗೆ ಪ್ರಶಂಸೆಗಳ ಸುರಿಮಳೆ ಬರುತ್ತಿದ್ದು, ಆಗಷ್ಟ್‌ನಲ್ಲಿ ಸಿನಿಮಾ ಗ್ರ್ಯಾಂಡ್ ಆಗಿ ತೆರೆಗಪ್ಪಳಿಸಿಲಿದೆ.



# ಡಬ್ಬಿಂಗ್ ಮುಗಿಸಿದ ನೀನಾಸಂ ಸತೀಶ್ ಸಪ್ತಮಿಗೌಡ

ಅಭಿನಯ ಚತುರ ಸತೀಶ್ ನೀನಾಸಂ ಹೊಸ ಅವತಾರವೆತ್ತಿರುವ ಬಹು ನಿರೀಕ್ಷಿತ ಸಿನಿಮಾ ದಿ ರೈಸ್ ಆಫ್ ಅಶೋಕ. ಈಗಾಗಲೇ ಒಂದಷ್ಟು ಪೋಸ್ಟರ್ ಮೂಲಕ ಕುತೂಹಲ ಹೆಚ್ಚಿಸಿರುವ ಈ ಚಿತ್ರವೀಗ ಡಬ್ಬಿಂಗ್ ಮುಗಿಸಿದೆ. ಬೆಂಗಳೂರಿನ ಆಕಾಶ್ ಸ್ಟುಡಿಯೋದಲ್ಲಿ ಚಿತ್ರದ ನಾಯಕ ಸತೀಶ್ ಹಾಗೂ ನಾಯಕಿ ಸಪ್ತಮಿ ಗೌಡ ತಮ್ಮ ಪಾತ್ರಗಳಿಗೆ ಮಾತು ಪೋಣಿಸಿದ್ದಾರೆ.
ಡಬ್ಬಿಂಗ್ ಪೂರ್ಣಗೊಂಡ ಬಳಿಕ ಮಾಧ್ಯಮದವರೊಂದಿಗೆ ನಟ ಸತೀಶ್ ನೀನಾಸಂ ಮಾತನಾಡಿ, ದಿ ರೈಸ್ ಆಫ್ ಅಶೋಕ ಸಿನಿಮಾದ ಚಿತ್ರೀಕರಣ ಮುಕ್ತಾಯವಾಗಿತ್ತು. ಈಗ ಡಬ್ಬಿಂಗ್ ಕೂಡ ಕಂಪ್ಲೀಟ್ ಆಗಿದೆ. ಆಕಾಶ್ ಸ್ಟುಡಿಯೋದಲ್ಲಿ ಡಬ್ಬಿಂಗ್ ಮುಗಿಸಿದ್ದೇವೆ. ಆನಂದ್ ಎಂಜಿನಿಯರ್ ನನ್ನ ಸಾಕಷ್ಟು ಚಿತ್ರಗಳಿಗೆ ಅವರೇ ಡಬ್ ಮಾಡಿದ್ದಾರೆ. ಈ ಜಾಗದಲ್ಲಿ ಡಬ್ ಮಾಡಿರುವುದು ಪಾಸಿಟಿವ್ ಎನರ್ಜಿ ಇದೆ. ಈ ಜಾಗದಲ್ಲಿ ಅಣ್ಣಾವ್ರು, ವಿಷ್ಣು ಸರ್ ಸೇರಿದಂತೆ ಹಲವರು ಇಲ್ಲಿಯೇ ಡಬ್ ಮಾಡಿದ್ದಾರೆ. ಈ ಜಾಗದಲ್ಲಿ ನಮ್ಮ ಚಿತ್ರದ ಡಬ್ಬಿಂಗ್ ಮುಗಿದಿರುವುದು ಖುಷಿ ಇದೆ. ಕನ್ನಡ, ತೆಲುಗು ಹಾಗೂ ತಮಿಳ ಭಾಷೆಯಲ್ಲಿ ಸಿನಿಮಾ ಬಿಡುಗಡೆ ಮಾಡಲು ಪ್ಲಾನ್ ಮಾಡಿದ್ದೇವೆ.



## ದಿ ರೈಸ್ ಆಫ್ ಅಶೋಕ

ಕನ್ನಡ ಭಾಷೆ ಡಬ್ಬಿಂಗ್ ಮುಗಿದಿದ್ದು, ಮುಂದಿನ ದಿನಗಳಲ್ಲಿ ತೆಲುಗು ಹಾಗೂ ತಮಿಳು ಶುರು ಮಾಡುತ್ತೇವೆ ಎಂದರು.
ನಟಿ ಸಪ್ತಮಿ ಗೌಡ ಮಾತನಾಡಿ, ತುಂಬಾ ಖುಷಿಯಾಗುತ್ತಿದೆ. ಯಾವುದೇ ಸಿನಿಮಾ ಶುರು ಮಾಡಿ ಅದರಲ್ಲಿಯೂ ಡಬ್ಬಿಂಗ್ ಮುಗಿಸಿದಾಗ ನಟಿಯಾಗಿ ಪರಿಪೂರ್ಣ ಜವಾಬ್ದಾರಿ ಅನಿಸುತ್ತದೆ.
ಅಂಬಿಕಾ ಎಂಬ ಪಾತ್ರ ಎಮೋಷನ್. ತುಂಬಾ ಇಸಿಯಾಗಿರುವ ಪಾತ್ರವದು. ನನ್ನನ್ನು ಚಿತ್ರ ತುಂಬಾ ಚೆನ್ನಾಗಿ ತೋರಿಸಿದ್ದಾರೆ. ಡಿಫರೆಂಟ್ ಅವತಾರದಲ್ಲಿ ಅಂಬಿಕಾ ಆಗಿ ನೀವು ನನ್ನನ್ನು ನೋಡುತ್ತೀರಿ. ದಿ ರೈಸ್ ಆಫ್ ಅಶೋಕ ಚಿತ್ರದ ಭಾಗವಾಗಿರುವುದು ಖುಷಿಯಾಗಿದೆ ಎಂದು ಹೇಳಿದರು.
ದಿ ರೈಸ್ ಆಫ್ ಅಶೋಕ 70ರ ದಶಕದಲ್ಲಿ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುವ ಸಿನಿಮಾ. ಚಿತ್ರದಲ್ಲಿ ಸತೀಶ್ ನೀನಾಸಂ ಕ್ರಾಂತಿಕಾರಿ ಯುವಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಸುತ್ತಾ ಸಾಗುವ ಕಥೆಯೇ ದಿ ರೈಸ್ ಆಫ್ ಅಶೋಕ. ಚಿತ್ರದಲ್ಲಿ ಸತೀಶ್‌ಗೆ ಜೋಡಿಯಾಗಿ ಕಾಂತಾರ ಸಿನಿಮಾ ಖ್ಯಾತಿಯ ಸಪ್ತಮಿ ಗೌಡ ನಟಿಸಿದ್ದಾರೆ. ಬಿ.ಸುರೇಶ್, ಗೋಪಾಲಕೃಷ್ಣ ದೇಶಪಾಂಡೆ, ಸಂಪತ್ ಮೈತ್ರೇಯಾ, ಯಶ್ ಶೆಟ್ಟಿ, ವಿಕ್ರಮ್ ವೇದ ಖ್ಯಾತಿಯ ಹರೀಶ್ ಪೆರಾಡಿ ತಾರಾಬಳಗದಲ್ಲಿದ್ದಾರೆ.
ನಿರ್ದೇಶಕ ವಿನೋದ್ ದೊಂಡಾಲೆ ನಿಧನದ ನಂತರ 'ಅಶೋಕ ಬ್ಲೇಡ್ ಸಿನಿಮಾವನ್ನು ಸತೀಶ್ ನೀನಾಸಂ 'ದಿ ರೈಸ್ ಆಫ್ ಅಶೋಕ ಹೆಸರಿನಲ್ಲಿ ಪ್ರಾಜೆಕ್ಟ್ ಅನ್ನು ಮತ್ತೆ ಕೈಗೆತ್ತಿಕೊಂಡು ಕೆಲಸ ಪ್ರಾರಂಭಿಸಿದರು. ಈಗ ಆ ಕೆಲಸ ಮುಕ್ತಾಯಗೊಂಡಿದ್ದು, ಚಿತ್ರ ಬಿಡುಗಡೆ ಹಂತ ತಲುಪಿದೆ.

# ಮನೆ ಹತ್ತಿರ ಬರಬೇಡಿ ಎಂದಿದ್ಯಾಕೆ ಗಣೇಶ

ಸಾಮಾನ್ಯವಾಗಿ ಸಿನಿಮಾ ತಾರೆಯರ ಹುಟ್ಟುಹಬ್ಬಕ್ಕೆ ಅವರವರ ಅಭಿಮಾನಿಗಳು ಮನೆ ಹತ್ತಿರ ಬಂದು ತಮ್ಮ ನೆಚ್ಚಿನ ನಟರಿಗೆ ಶುಭಾಶಯ ಕೋರುವುದು, ಕೇಕ್ ತಂದು ಕಟ್ ಮಾಡಿಸುವುದು ವಾಡಿಕೆ. ಆದರೆ ಇತ್ತೀಚೆಗೆ ಸ್ಯಾಂಡಲ್ ವುಡ್‌ನಲ್ಲಿ ಸ್ಟಾರ್‌ಗಳು ಅಭಿಮಾನಿಗಳ ಕೈಗೆ ಸುಲಭವಾಗಿ ಸಿಗುತ್ತಿಲ್ಲ. ಹೀಗಾಗಿ ಅಭಿಮಾನಿಗಳು ವರ್ಷಪೂರ್ತಿ ಕಾದಿದ್ದು ಕೊನೆ ಪಕ್ಷ ಹುಟ್ಟುಹಬ್ಬದ ದಿನವಾದ್ರೂ ಸಿಗಬೇಕು ಎಂದುಕೊಂಡಿದ್ದ ಫ್ಯಾನ್ಸ್‌ಗೆ ಇತ್ತೀಚೆಗೆ ಸ್ಟಾರ್‌ಗಳು ಸಬೂಬು ನೀಡುವಂತೆ ಕಾರಣ ಹೇಳಿದ್ದಾರೆ ಗೋಲ್ಡನ್ ಸ್ಟಾರ್ ಗಣೇಶ್.
ಜುಲೈ 2 ರಂದು ಗೋಲ್ಡನ್ ಸ್ಟಾರ್ ಗಣೇಶ್ ಹುಟ್ಟುಹಬ್ಬ, ಹೀಗಾಗಿ ಎರಡು ದಿನ ಮುನ್ನವೇ ಗಣೇಶ್ ಇನ್ಸ್ಟಾಗ್ರಾಂನಲ್ಲಿ ಹುಟ್ಟುಹಬ್ಬದ ಕುರಿತಾಗಿ ಅಭಿಮಾನಿಗಳಿಗೆ ಮನವಿ ಮಾಡಿಕೊಂಡಿದ್ದಾರೆ. ಮನೆಯಲ್ಲಿ ಇರೋದಿಲ್ಲ. ಯಾರೂ ಮನೆ ಹತ್ತಿರ ಬರಬೇಡಿ ಎಂದಿದ್ದಾರೆ. ಬದಲಾಗಿ ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಿ, ಅದೇ ನನಗೆ ಕೊಡುವ ಉಡುಗೊರೆ ಎಂದಿದ್ದಾರೆ. ಹೀಗಾಗಿ ಈ ಬಾರಿ ಗಣೇಶ್ ಅಭಿಮಾನಿಗಳೊಂದಿಗೆ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿಲ್ಲ.



## ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಿ

ಪಿನಾಕ ಹಾಗೂ ಯುವರ್ ಸಿನ್ಸಿಯರ್ಲಿ ರಾಮ್ ಸಿನಿಮಾದ ಚಿತ್ರೀಕರಣಕ್ಕಾಗಿ ಬೇರೆ ಊರಿನಲ್ಲಿರುವ ಕಾರಣಕ್ಕೆ ಗಣೇಶ್ ಅಭಿಮಾನಿಗಳಿಗೆ ಮನೆ ಹತ್ರ ಬರಬೇಡಿ ಎಂದಿದ್ದಾರೆ.
'ಕೃಷ್ಣಂ ಪ್ರಣಯ ಸಖಿ ಚಿತ್ರದ ಯಶಸ್ಸಿನ ಬಳಿಕ ಗಣೇಶ್ ಚಿತ್ರಗಳಿಗೆ ಮತ್ತೆ ಪುಷ್ಠಿ ಸಿಕ್ಕಿದ್ದು ಬಲು ಬೇಡಿಕೆ ಹೊಂದಿದ್ದಾರೆ. ಹೀಗಾಗಿ ಈ ವರ್ಷದಲ್ಲಿ ಪಿನಾಕ ಹಾಗೂ ಯುವರ್ ಸಿನ್ಸಿಯರ್ಲಿ ರಾಮ್ ಚಿತ್ರವನ್ನ ತೆರೆಗೆ ತರಲು ಪ್ರಯತ್ನಸುತ್ತಿರುವ ಗಣೇಶ್ ನಿರಂತರ ಶೂಟಿಂಗ್‌ನಲ್ಲಿ ಭಾಗಿಯಾಗಿದ್ದಾರಂತೆ.

# ಚಿತ್ರರಂಗದಲ್ಲಿ 25 ವರ್ಷ ಪೂರೈಸಿದ ಕರೀನಾ ಕಪೂರ್

ಬಾಲಿವುಡ್ ಸ್ಟೈಲ್ ಐಕಾನ್ ಕರೀನಾ ಕಪೂರ್ ಚಿತ್ರರಂಗಕ್ಕೆ ಬಂದು 25 ವರ್ಷ ಪೂರ್ಣಗೊಳಿಸಿದ್ದಾರೆ. ಈಗಲೂ ಸಿನಿಮಾದಲ್ಲಿ ಸಕ್ರಿಯವಾಗಿರುವ ಕರೀನಾ ಕಪೂರ್ ಸಿನಿಮಾ ಹಿನ್ನೆಲೆಯ ಕುಟುಂಬದಿಂದಲೇ ಬಂದಿದ್ದರೂ ಸೌಂದರ್ಯ ಹಾಗೂ ಪರ್ಫಾಮೆನ್ಸ್ ಮೂಲಕ ಇಷ್ಟೂ ವರ್ಷ ಚಿತ್ರರಂಗದಲ್ಲಿದ್ದವರು. ಸಿನಿಮಾ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು ಸಿಲ್ವರ್ ಜುಬ್ಲಿಗೆ ಪಾದಾರ್ಪಣೆ ಮಾಡಿದ್ದಕ್ಕೆ ಕರೀನಾ ಖುಷಿಯಿಂದ ಮೊದಲ ಚಿತ್ರದ ಫೋಟೋಗಳನ್ನ ಹಂಚಿಕೊಂಡಿದ್ದಾರೆ. ಅಂದಹಾಗೆ ಕರೀನಾ ಅಭಿನಯದ ಮೊದಲ ಚಿತ್ರ ರಿಲೀಸ್ ಆಗಿದ್ದು 2000ನೇ ಇಸವಿ ಜೂ.30ರಂದು. ಆ ಚಿತ್ರವೇ ರೆಫ್ಯೂಜಿ, ಫೇಮಸ್ ನಟ ಅಭಿಷೇಕ್ ಜೊತೆ ಜೋಡಿಯಾಗಿ ಅಭಿನಯಿಸಿದ್ದರು ಕರೀನಾ . ಅಭಿನಯಕ್ಕೆ ಪ್ರಾಶಸ್ತ್ಯವಿರುವ ಸರಳ ಲುಕ್‌ನಲ್ಲಿ ಈ ಚಿತ್ರದ ಮೂಲಕ ಎಂಟ್ರಿ ಕೊಟ್ಟಿದ್ದ ಕರೀನಾ ಬಳಿಕ ಅನೇಕ ಪಾತ್ರಗಳಿಗೆ ಜೀವತುಂಬುತ್ತಾ ಬಂದು ಸ್ಟಾರ್ ನಟರೊಂದಿಗೆ ಅಭಿನಯಿಸಿದ ದಶಕದ ಕಾಲ ಬಣ್ಣದ ಜಗತ್ತನ್ನ ಆಳುತ್ತಾರೆ. ಸಿನಿಮಾರಂಗಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದ ಖುಷಿಯಲ್ಲಿ ಕರೀನಾ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಹಾಕಿದ್ದಾರೆ.

## 25 ವರ್ಷಗಳು.. ಮುಗಿಯದ ಪ್ರಯಾಣ

25 ವರ್ಷಗಳು.. ಮುಗಿಯದ ಪ್ರಯಾಣ.. ಎಂದು ಬರೆದುಕೊಂಡು ಖುಷಿ ಹಂಚಿಕೊಂಡಿದ್ದಾರೆ. ಜೊತೆಗೆ ರೆಫ್ಯೂಜಿ ಸಮಯದ ಫೋಟೋಗಳನ್ನ ಸೋಶಿಯಲ್ ಮೀಡಿಯಾದಲ್ಲಿ ಶೇರ್ ಮಾಡಿದ್ದಾರೆ. ಕರೀನಾಗೆ ಶುಭಾಶಯಗಳ ಸುರಿಮಳೆ ಬರುತ್ತಿದೆ.

# ಬಿಗ್‌ಬಾಸ್ ಕಿಚ್ಚನ ನಿರೂಪಣೆ ಫಿಕ್ಸ್

ಕನ್ನಡದ ಹೆಸರಾಂತ ರಿಯಾಲಿಟಿ ಶೋ ಬಿಗ್‌ಬಾಸ್ ಕನ್ನಡ 11 ಸೀಸನ್‌ಗಳನ್ನ ಯಶಸ್ವಿಯಾಗಿ ಪೂರೈಸಿದೆ. ಇದೀಗ ಸೀಸನ್ 12ಕ್ಕೆ ಕೆಲವೇ ತಿಂಗಳು ಬಾಕಿ ಇರೋವಾಗಲೇ ಬಿಗ್‌ಬಾಸ್ ತಂಡದ ಕಡೆಯಿಂದ ಹಾಗೂ ಕಿಚ್ಚ ಸುದೀಪ್ ಅವರಿಂದ ಬಿಗ್ ಅಪ್‌ಡೇಟ್ ಸಿಕ್ಕಿದೆ. ಹೌದು, ಕಿಚ್ಚ ಸುದೀಪ್ ಅವರೇ 12ನೇ ಸೀಸನ್‌ಗೂ ನಿರೂಪಣೆ ಮಾಡುವುದಾಗಿ ಸ್ಪಷ್ಟನೆ ಸಿಕ್ಕಿದೆ. ಬಿಗ್‌ಬಾಸ್ ಸಂಯೋಜಕರು ಹಾಗೂ ಕಲರ್ಸ್ ತಂಡ ಸುದ್ದಿಗೋಷ್ಠಿಯಲ್ಲಿ ಅಧಿಕೃತವಾಗಿ ಈ ನಿರ್ಧಾರವನ್ನು ಪ್ರಕಟಿಸಿದೆ. 11ನೇ ಸೀಸನ್ ಸಂದರ್ಭದಲ್ಲಿ ನಿರೂಪಕ ಕಿಚ್ಚ ಸುದೀಪ್ ವಿದಾಯ ಹೇಳಿದ್ದರು. ಇದಾದ ಬಳಿಕ ಸಾಕಷ್ಟು ಚರ್ಚೆಗಳು ಶುರುವಾಗಿದ್ದು, ಈ ಬಗ್ಗೆ ಕಿಚ್ಚ ಸುದೀಪ್ ಕೂಡಾ ಕಾದು ನೋಡಿ ಅನ್ನೋ ಅಭಿಪ್ರಾಯ ಹಂಚಿಕೊಂಡಿದ್ರು. ಇದೀಗ ಮತ್ತೆ 12ನೇ ಸೀಸನ್ ನಡೆಸಿಕೊಡುವ ಬಗ್ಗೆ ಗುಡ್‌ನ್ಯೂಸ್ ಕೊಟ್ಟಿದ್ದಾರೆ ಕಿಚ್ಚ. ಕಿಚ್ಚ ಸುದೀಪ್ ಇಲ್ಲದೇ ಬಿಗ್‌ಬಾಸ್ ನಿರೂಪಣೆಯನ್ನ ಊಹೆ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿದ್ದವು. ಹೀಗಾಗಿ ಕಿಚ್ಚ ಸುದೀಪ್ ಈ ಬಾರಿಯ ಬಿಗ್‌ಬಾಸ್ ಕಾರ್ಯಕ್ರಮವನ್ನ ಮುಂದುವರಿಸಿದ್ದಾರೆ.

## 12ನೇ ಸೀಸನ್‌ಗೂ ಸುದೀಪ್ ನಿರೂಪಣೆ



# ಡು ಪ್ಲೆಸಿಸ್ ಸ್ಫೋಟಕ ಶತಕ ಪ್ಲೇಆಫ್‌ಗೇರಿದ ಸೂಪರ್ ಕಿಂಗ್ಸ್

ಟೆಕ್ಸಾಸ್ ಸೂಪರ್ ಕಿಂಗ್ಸ್ ತಂಡವು ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್ ವಿರುದ್ಧ 39 ರನ್‌ಗಳ ಭರ್ಜರಿ ಜಯ ಸಾಧಿಸಿ ಮೇಜರ್ ಲೀಗ್ ಕ್ರಿಕೆಟ್ ಪ್ಲೇಆಫ್‌ಗೆ ಅರ್ಹತೆ ಪಡೆದುಕೊಂಡಿದೆ. ಫಾಫ್ ಡುಪ್ಲೆಸಿಸ್ ಅವರ ಅಜೇಯ 103 ರನ್‌ಗಳ ಅದ್ಭುತ ಇನ್ನಿಂಗ್ಸ್‌ನಿಂದಾಗಿ ಟೆಕ್ಸಾಸ್ 223 ರನ್‌ಗಳನ್ನು ಗಳಿಸಿತು. ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್ ತಂಡ ಕೀರಣ್ ಪೊಲಾರ್ಡ್ ಅವರ 70 ರನ್‌ಗಳ ಹೋರಾಟದ ಹೊರತಾಗಿಯೂ ಗುರಿ ತಲುಪಲು ವಿಫಲವಾಯಿತು. ಪೊಲಾರ್ಡ್ MLCಯಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ದಾಖಲೆಯನ್ನು ಸೃಷ್ಟಿಸಿದರು.

## ಮುಂಬೈಗೆ 5ನೇ ಸೋಲು



ಅಮೆರಿಕದಲ್ಲಿ ನಡೆಯುತ್ತಿರುವ ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಫಾಫ್ ಡು ಪ್ಲೆಸಿಸ್ ನಾಯಕತ್ವದ ಟೆಕ್ಸಾಸ್ ಸೂಪರ್ ಕಿಂಗ್ಸ್ ತಂಡ ಪ್ಲೇಆಫ್‌ನಲ್ಲಿ ತನ್ನ ಸ್ಥಾನವನ್ನು ಕಾಯ್ದಿರಿಸಿದೆ. ಲೀಗ್‌ನ 21ನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್ ತಂಡವನ್ನು 39 ರನ್‌ಗಳಿಂದ ಸೋಲಿಸುವ ಮೂಲಕ ಟೆಕ್ಸಾಸ್ ಸೂಪರ್ ಕಿಂಗ್ಸ್ ತಂಡ ಆಡಿರುವ 7 ಪಂದ್ಯಗಳಲ್ಲಿ 5 ರಲ್ಲಿ ಗೆಲುವು ಸಾಧಿಸಿ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ. ಇದರೊಂದಿಗೆ ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಸತತ ಮೂರನೇ ಬಾರಿಗೆ ಪ್ಲೇಆಫ್‌ಗೆ ತಲುಪಿದ ಸಾಧನೆ ಮಾಡಿದೆ. ಇತ್ತ ಟೆಕ್ಸಾಸ್ ಸೂಪರ್ ಕಿಂಗ್ಸ್ ವಿರುದ್ಧ ಸೋತ ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್ ತಂಡ ಆಡಿರುವ 7 ಪಂದ್ಯಗಳಲ್ಲಿ ಕೇವಲ 1 ಪಂದ್ಯದಲ್ಲಿ ಗೆದ್ದು ಪಾಯಿಂಟ್‌ಪಟ್ಟಿಯಲ್ಲಿ ಕೊನೆಯಿಂದ 2ನೇ ಸ್ಥಾನದಲ್ಲಿದೆ.
ಈ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್ ವಿರುದ್ಧ ಮೊದಲು ಬ್ಯಾಟಿಂಗ್ ಮಾಡಿದ ಟೆಕ್ಸಾಸ್ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 223 ರನ್ ಗಳಿಸಿತು. ತಂಡದ ಪರ ನಾಯಕ ಫಾಫ್ ಡು ಪ್ಲೆಸಿಸ್ ಒಬ್ಬರೇ ಅಜೇಯ 103 ರನ್ ಗಳಿಸಿದರು. ತಮ್ಮ ಇನ್ನಿಂಗ್ಸ್‌ನಲ್ಲಿ 53 ಎಸೆತಗಳನ್ನು ಎದುರಿಸಿದ ಫಾಫ್, 9 ಸಿಕ್ಸರ್ ಮತ್ತು 5 ಬೌಂಡರಿ ಸಹ ಬಾರಿಸಿದರು. ಇದು MLC 202 ರಲ್ಲಿ ಫಾಫ್ ಡು ಪ್ಲೆಸಿಸ್ ಅವರ ಬ್ಯಾಟ್‌ನಿಂದ ದಾಖಲಾದ ಎರಡನೇ ಶತಕವಾಗಿದೆ. ಇನ್ನು ಈ ಪಂದ್ಯದಲ್ಲಿ ಡು ಪ್ಲೆಸಿಸ್ ಎರಡನೇ ವಿಕೆಟ್‌ಗೆ ಮುಕ್ಕಮಲ್ಲ ಅವರೊಂದಿಗೆ 80 ರನ್‌ಗಳ ಪಾಲುದಾರಿಕೆಯನ್ನು ಹಂಚಿಕೊಂಡರೆ, ಮೂರನೇ ವಿಕೆಟ್‌ಗೆ ಸ್ಟೊಯಿನಿಸ್ ಅವರೊಂದಿಗೆ 57 ರನ್‌ಗಳ ಜೊತೆಯಾಟ ನಡೆಸಿದರು. ಹಾಗೆಯೇ ನಾಲ್ಕನೇ ವಿಕೆಟ್‌ಗೆ ಡ್ವೇನ್ ಫೆರೇರಾ ಅವರೊಂದಿಗೆ ಕೇವಲ 29 ಎಸೆತಗಳಲ್ಲಿ 81 ರನ್‌ಗಳ ಪಾಲುದಾರಿಕೆಯನ್ನು ಹಂಚಿಕೊಂಡರು.
ಪೊಲಾರ್ಡ್ ದಾಖಲೆ, ಆದರೂ ಸೋತ ಮುಂಬೈ 224 ರನ್‌ಗಳ ಗುರಿ ಬೆನ್ನಟ್ಟಿದ ಮುಂಬೈ ಇಂಡಿಯನ್ಸ್ ನ್ಯೂಯಾರ್ಕ್ ತಂಡಕ್ಕೆ 200 ರನ್‌ಗಳ ಗಡಿ ದಾಟಲು ಸಾಧ್ಯವಾಗಲಿಲ್ಲ. ಪೂರನ್ ನಾಯಕತ್ವದ ನ್ಯೂಯಾರ್ಕ್ ತಂಡ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ ಕೇವಲ 184 ರನ್‌ಗಳಿಸಲಷ್ಟೇ ಶಕ್ತವಾಯಿತು. ಆದಾಗ್ಯೂ, ಮುಂಬೈ ಪರ ಏಕಾಂಗಿ ಹೋರಾಟ ನಡೆಸಿದ ಮಾಜಿ ನಾಯಕ ಕೀರನ್ ಪೊಲಾರ್ಡ್, ಕೇವಲ 39 ಎಸೆತಗಳಲ್ಲಿ 70 ರನ್ ಗಳಿಸಿದರು. ಅವರು ತಮ್ಮ ಇನ್ನಿಂಗ್ಸ್‌ನಲ್ಲಿ 5 ಸಿಕ್ಸರ್‌ಗಳನ್ನು ಬಾರಿಸಿದರು. ಆದರೂ ಗೆಲುವಿನ ದಡ ಮುಟ್ಟಿಸಲು ಸಾಧ್ಯವಾಗಲಿಲ್ಲ.



# ಕೊಹ್ಲಿ- ರೋಹಿತ್ ಇಲ್ಲದ ಡ್ರೀಮ್ ಟಿ20 ತಂಡವನ್ನು ಪ್ರಕಟಿಸಿದ ವರುಣ್ ಚಕ್ರವರ್ತಿ

ವರುಣ್ ಚಕ್ರವರ್ತಿ ಅವರು ತಮ್ಮ ಕನಸಿನ ಟಿ20 ತಂಡವನ್ನು ಘೋಷಿಸಿದ್ದು, ಆ ತಂಡದಲ್ಲಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಲ್ಲ.
ಮೂವರು ಭಾರತೀಯ ಆಟಗಾರರು (ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಜಸ್ಪ್ರೀತ್ ಬುಮ್ರಾ) ಮತ್ತು ಎಂಟು ವಿದೇಶಿ ಆಟಗಾರರು ಈ ತಂಡದಲ್ಲಿದ್ದಾರೆ. ಕಳೆದ ವರ್ಷ ಟಿ20 ವಿಶ್ವಕಪ್ ಗೆದ್ದ ತಕ್ಷಣ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಕ್ರಿಕೆಟ್‌ನ ಅತ್ಯಂತ ಕಡಿಮೆ ಸ್ವರೂಪದಿಂದ ನಿವೃತ್ತಿ ಹೊಂದಿದ್ದರು. ಈ ವರ್ಷ, ಭಾರತದ ಇಂಗ್ಲೆಂಡ್ ಪ್ರವಾಸಕ್ಕೂ ಮೊದಲು ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.
ಎರಡು ಸ್ವರೂಪಗಳಿಂದ ನಿವೃತ್ತರಾಗಿರುವ ರೋಹಿತ್ -ವಿರಾಟ್ ಈಗ ಏಕದಿನ ಸ್ವರೂಪದಲ್ಲಿ ಮಾತ್ರ ಸಕ್ರಿಯರಾಗಿದ್ದಾರೆ. ಆದರೆ ಈ ಸ್ವರೂಪದಲ್ಲಿ ಅವರು ಎಷ್ಟು ಕಾಲ ಆಡಲು ಸಾಧ್ಯವಾಗುತ್ತದೆ ಎಂಬ ಪ್ರಶ್ನೆ ಇದೆ. ಏತನ್ಮಧ್ಯೆ, ಟೀಂ ಇಂಡಿಯಾದ ಯುವ ಗೂಗ್ಲಿ ಸ್ಪಿನ್ನರ್ ವರುಣ್ ಚಕ್ರವರ್ತಿ ತಮ್ಮ ಕನಸಿನ ಟಿ20 ತಂಡವನ್ನು ಘೋಷಿಸಿದ್ದು, ಈ ತಂಡದಿಂದ ಈ ಇಬ್ಬರೂ ಕ್ರಿಕೆಟಿಗರನ್ನು ಹೊರಗಿಟ್ಟಿದ್ದಾರೆ.





ವರುಣ್ ಚಕ್ರವರ್ತಿ ಪ್ರಕಟಿಸಿರುವ ತಮ್ಮ ಕನಸಿನ ಟಿ20 ತಂಡದಲ್ಲಿ ರೋಹಿತ್ ಮತ್ತು ವಿರಾಟ್ ಅವರ ಹೆಸರುಗಳಿಲ್ಲ. ಅಂದರೆ ವರುಣ್ ಚಕ್ರವರ್ತಿ ಅವರಿಬ್ಬರನ್ನೂ ತಮ್ಮ ಕನಸಿನ ಟಿ20 ತಂಡದಿಂದ ಹೊರಗಿಟ್ಟಿದ್ದಾರೆ. ವರುಣ್ ಚಕ್ರವರ್ತಿ ಪ್ರಕಟಿಸಿರುವ ತಂಡದಲ್ಲಿ ಕೇವಲ ಮೂವರು ಭಾರತೀಯ ಆಟಗಾರರಿದ್ದರೆ, ಉಳಿದ 8 ಆಟಗಾರರು ವಿದೇಶಿಗರಾಗಿದ್ದಾರೆ. ಇನ್ನು ವರುಣ್ ಚಕ್ರವರ್ತಿ ಆಯ್ಕೆ ಮಾಡಿರುವ ಕನಸಿನ ತಂಡದಲ್ಲಿ ಸ್ಥಾನ ಪಡೆದಿರುವ ಮೂವರು ಭಾರತೀಯ ಆಟಗಾರರೆಂದರೆ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಮತ್ತು ಜಸ್ಪ್ರೀತ್ ಬುಮ್ರಾ.
ವರುಣ್ ಚಕ್ರವರ್ತಿ ತಂಡದಲ್ಲಿರುವ ಉಳಿದ 8 ಆಟಗಾರರು ಜೋಸ್ ಬಟ್ಲರ್ (ಇಂಗ್ಲೆಂಡ್), ಟ್ರಾವಿಸ್ ಹೆಡ್ (ಆಸ್ಟ್ರೇಲಿಯಾ), ರಶೀದ್ ಖಾನ್ (ಅಫ್ಘಾನಿಸ್ತಾನ), ಮಥಿಶಾ ಪತಿರಾನ (ಶ್ರೀಲಂಕಾ), ನಿಕೋಲಸ್ ಪೂರನ್ (ವೆಸ್ಟ್ ಇಂಡೀಸ್), ಆಂಡ್ರೆ ರಸೆಲ್ (ವೆಸ್ಟ್ ಇಂಡೀಸ್), ಸುನಿಲ್ ನರೈನ್ (ವೆಸ್ಟ್ ಇಂಡೀಸ್) ಮತ್ತು ಹೆನ್ರಿಕ್ ಕ್ಲಾಸೆನ್ (ದಕ್ಷಿಣ ಆಫ್ರಿಕಾ) ಸೇರಿದ್ದಾರೆ. ವರುಣ್ ಚಕ್ರವರ್ತಿ ತಮ್ಮ ಕನಸಿನ ಟಿ20 ತಂಡದಲ್ಲಿ ಜೋಸ್ ಬಟ್ಲರ್ ಮತ್ತು ಟ್ರಾವಿಸ್ ಹೆಡ್‌ಗೆ ಆರಂಭಿಕ ಜವಾಬ್ದಾರಿಯನ್ನು ನೀಡಿದ್ದು, ಸೂರ್ಯಕುಮಾರ್ ಯಾದವ್‌ರನ್ನು ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಹೆನ್ರಿಕ್ ಕ್ಲಾಸೆನ್, ಹಾರ್ದಿಕ್ ಪಾಂಡ್ಯ, ನಿಕೋಲಸ್ ಪೂರನ್ ಮತ್ತು ಆಂಡ್ರೆ ರಸೆಲ್ ಇದ್ದಾರೆ. ಕೆಳ ಕ್ರಮಾಂಕದಲ್ಲಿ ಸುನಿಲ್ ನರೈನ್, ರಶೀದ್ ಖಾನ್, ಜಸ್ಪ್ರೀತ್ ಬುಮ್ರಾ ಮತ್ತು ಮಥಿಶಾ ಪತಿರಾನ ಇದ್ದಾರೆ.

# ಆಫ್ರಿಕಾ ತಂಡದ ಪರ ಇತಿಹಾಸ ಸೃಷ್ಟಿಸಿದ ಆಂಜನೇಯನ ಪರಮ ಭಕ್ತ

ದಕ್ಷಿಣ ಆಫ್ರಿಕಾದ ಸ್ಪಿನ್ನರ್ ಕೇಶವ್ ಮಹಾರಾಜ್ ಜಿಂಬಾಬ್ವೆ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ 200 ಟೆಸ್ಟ್ ವಿಕೆಟ್‌ಗಳನ್ನು ಪಡೆದ ಮೊದಲ ದಕ್ಷಿಣ ಆಫ್ರಿಕಾದ ಸ್ಪಿನ್ನರ್ ಆಗಿ ಇತಿಹಾಸ ನಿರ್ಮಿಸಿದ್ದಾರೆ. ಇದಲ್ಲದೆ, ತಂಡದ ನಾಯಕನಾಗಿ ಅವರ ಅದ್ಭುತ ಪ್ರದರ್ಶನ ದಕ್ಷಿಣ ಆಫ್ರಿಕಾ ತಂಡಕ್ಕೆ ಭರ್ಜರಿ ಗೆಲುವಿನ ಆರಂಭ ನೀಡಿದೆ. ಜಿಂಬಾಬ್ವೆ ವಿರುದ್ಧ ದಕ್ಷಿಣ ಆಫ್ರಿಕಾ ಪ್ರಬಲ ಮುನ್ನಡೆ ಸಾಧಿಸಿದೆ. ದಕ್ಷಿಣ ಆಫ್ರಿಕಾ ಮತ್ತು ಜಿಂಬಾಬ್ವೆ ನಡುವಿನ ಎರಡು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯ ಬುಲವಾಯೊದ ಕ್ವೀನ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯುತ್ತಿದೆ. ಈ ಪಂದ್ಯದಲ್ಲಿ ತೆಂಬ ಬವುಮಾ ಅವರ ಅನುಪಸ್ಥಿತಿಯಲ್ಲಿ ದಕ್ಷಿಣ ಆಫ್ರಿಕಾದ ಸ್ಟಾರ್ ಸ್ಪಿನ್ನರ್ ಕೇಶವ್ ಮಹಾರಾಜ್ ತಂಡದ ನಾಯಕತ್ವ ವಹಿಸಿಕೊಂಡಿದ್ದಾರೆ. ನಾಯಕತ್ವದ ಜೊತೆಗೆ ಆಟಗಾರನಾಗಿಯೂ ಅದ್ಭುತ ಪ್ರದರ್ಶನ ನೀಡುತ್ತಿದ್ದಾರೆ.



ಈ ಮೂಲಕ ದಕ್ಷಿಣ ಆಫ್ರಿಕಾ ತಂಡದ ಪರ ಇತಿಹಾಸ ಕೂಡ ನಿರ್ಮಿಸಿದ್ದಾರೆ. ಭಾರತ ಮೂಲದ ಕೇಶವ್ ಮಹಾರಾಜ್ ಟೆಸ್ಟ್ ಕ್ರಿಕೆಟ್‌ನಲ್ಲಿ ಇದುವರೆಗೆ ದಕ್ಷಿಣ ಆಫ್ರಿಕಾದ ಯಾವುದೇ ಆಟಗಾರ ಮಾಡಲು ಸಾಧ್ಯವಾಗದ ದಾಖಲೆ ನಿರ್ಮಿಸಿದ್ದು ತಮ್ಮ ಹೆಸರನ್ನು ಅಮರವಾಗಿಸಿದ್ದಾರೆ. ಕೇಶವ್ ಮಹಾರಾಜ್ ಜಿಂಬಾಬ್ವೆ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ನಾಯಕ ಕ್ರೇಗ್ ಎರ್ವಿನ್ ಅವರನ್ನು ಔಟ್ ಮಾಡುವ ಮೂಲಕ ದೊಡ್ಡ ದಾಖಲೆ ನಿರ್ಮಿಸಿದ್ದಾರೆ.



# ನಾಲ್ವರು ದಿಗ್ಗಜ ಆಟಗಾರರನ್ನು ಹಿಂದಿಕ್ಕಲಿದ್ದಾರೆ ಜೈಸ್ವಾಲ್

## ಜೈಸ್ವಾಲ್‌ಗೆ ನಾಲ್ವರನ್ನು ಹಿಂದಿಕ್ಕುವ ಅವಕಾಶ

ಯಶಸ್ವಿ ಜೈಸ್ವಾಲ್ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಶತಕ ಬಾರಿಸಿ ಅದ್ಭುತ ಪ್ರದರ್ಶನ ನೀಡಿದರು. ಆದರೆ ನಾಲ್ಕು ಕ್ಯಾಚ್‌ಗಳನ್ನು ಕೈಬಿಟ್ಟು ನಿರಾಶೆ ಮೂಡಿಸಿದರು. ಇಂಗ್ಲೆಂಡ್ ಪಂದ್ಯ ಗೆದ್ದು ಸರಣಿಯಲ್ಲಿ ಮುನ್ನಡೆ ಸಾಧಿಸಿತು. ಇದೀಗ ಎರಡನೇ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ 2 ಸಿಕ್ಸರ್ ಬಾರಿಸಿದರೆ ನಾಲ್ವರು ದಿಗ್ಗಜ ಬ್ಯಾಟ್ಸ್‌ಮನ್‌ಗಳನ್ನು ಹಿಂದಿಕ್ಕುವ ಅವಕಾಶ ಹೊಂದಿದ್ದಾರೆ.
ಟೀಂ ಇಂಡಿಯಾದ ಯುವ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಇಂಗ್ಲೆಂಡ್ ಪ್ರವಾಸವನ್ನು ಭರ್ಜರಿಯಾಗಿ ಆರಂಭಿಸಿದರು. ಜೂನ್ 20 ರಂದು ಲೀಡ್ಸ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಅಮೋಘ ಶತಕವನ್ನು ಬಾರಿಸಿದರು. ಈ ಮೂಲಕ ಇಂಗ್ಲೆಂಡ್‌ನಲ್ಲಿ ತಾನು ಆಡಿದ ಮೊದಲ ಟೆಸ್ಟ್ ಪಂದ್ಯದಲ್ಲೇ ಶತಕ ಬಾರಿಸುವ ಮೂಲಕ ಯಶಸ್ವಿ ಅವಿಸ್ಮರಣೀಯ ಪ್ರದರ್ಶನ ನೀಡಿದರು. ಆದಾಗ್ಯೂ ಫೀಲ್ಡಿಂಗ್‌ನಲ್ಲಿ ಜೈಸ್ವಾಲ್ ಭಾರಿ ನಿರಾಶೆ ಮೂಡಿಸಿದರು. ಈ ಪಂದ್ಯದಲ್ಲಿ ಯಶಸ್ವಿ ಒಟ್ಟು 4 ಕ್ಯಾಚ್‌ಗಳನ್ನು ಕೈಬಿಟ್ಟರು. ಜೈಸ್ವಾಲ್ ಈ ನಾಲ್ಕು ಕ್ಯಾಚ್‌ಗಳನ್ನು ಹಿಡಿದಿದ್ದರೆ, ಈ ಪಂದ್ಯದ ಫಲಿತಾಂಶ ವಿಭಿನ್ನವಾಗಿರುತ್ತಿತ್ತು. ಆದರೆ ಅಂತಿಮವಾಗಿ ಇಂಗ್ಲೆಂಡ್, ಭಾರತವನ್ನು ಸೋಲಿಸಿ 5 ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಇದೀಗ ಜುಲೈ 2 ರಿಂದ ಉಭಯ ತಂಡಗಳ ನಡುವಿನ ಎರಡನೇ ಟೆಸ್ಟ್ ಪಂದ್ಯ ಆರಂಭವಾಗಲಿದ್ದು, ಈ ಪಂದ್ಯದಲ್ಲಿ ಜೈಸ್ವಾಲ್‌ಗೆ ದೊಡ್ಡ ಸಾಧನೆ ಮಾಡುವ ಅವಕಾಶವಿದೆ.
ಇಂಗ್ಲೆಂಡ್ ವಿರುದ್ಧದ ಎರಡನೇ ಪಂದ್ಯದಲ್ಲಿ ಯಶಸ್ವಿ ಎರಡು ಸಿಕ್ಸರ್ ಬಾರಿಸಿದರೆ, ನಾಲ್ವರು ಲೆಜೆಂಡರಿ ಬ್ಯಾಟ್ಸ್‌ಮನ್‌ಗಳನ್ನು ಹಿಂದಿಕ್ಕಲಿದ್ದಾರೆ. ವಾಸ್ತವವಾಗಿ ಜೈಸ್ವಾಲ್ ಟೆಸ್ಟ್ ಕ್ರಿಕೆಟ್‌ನಲ್ಲಿ ಇದುವರೆಗೆ 40 ಸಿಕ್ಸರ್‌ಗಳನ್ನು ಬಾರಿಸಿದ್ದಾರೆ. ಇನ್ನು ಎರಡನೇ ಟೆಸ್ಟ್‌ನಲ್ಲಿ ಜೈಸ್ವಾಲ್ ಇನ್ನೂ 2 ಸಿಕ್ಸರ್ ಬಾರಿಸಿದರೆ, ಅವರು ಒಂದೇ ಬಾರಿಗೆ ನಾಲ್ವರು ಆಟಗಾರರನ್ನು ಹಿಂದಿಕ್ಕುವಲ್ಲಿ ಯಶಸ್ವಿಯಾಗಲಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966